# ಯುಗದೂತ

- ಹಿಂದೂ-ಮುಸ್ಲಿಂ ಐಕ್ಯ
- ಈದುಲ್ ಅಝ್‌ಹಾ ಸಂದೇಶ
- ಯೇಸು ಜನಿಸಿದ್ದು ಯಾವಾಗ?
- ಇಸ್ಲಾಂ_ನವೀನ ಶಾಸ್ತ್ರಿಮಹಾತ್ಮರ ನೋಟದಲ್ಲಿ
- ಇಸ್ಲಾಂಮತ ತತ್ತ್ವಜ್ಞಾನ

ತ್ರೈಮಾಸಿಕ
ಡಿಸೆಂಬರ್ 1978
ಫತಹ್ 1357
ಬೆಲೆ: 1-00

ಓ ಮನುಷ್ಯರೆ, ನಿಮ್ಮನ್ನು ನಾವು ಪುರುಷ ಮತ್ತು ಸ್ತ್ರೀಯಾಗಿ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲಿಕ್ಕಾಗಿ ಗೋತ್ರಗಳನ್ನಾಗಿಯೂ ಉಪಗೋತ್ರಗಳನ್ನಾಗಿಯೂ ವಿಂಗಡಿಸಿದೆವು. ನಿಮ್ಮ ಪೈಕಿ ಅತ್ಯಂತ ಸಾತ್ವಿಕನು ಪರಮಾತ್ಮನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನಾಗಿದ್ದಾನೆ. ಅಲ್ಲಾಹು ಸರ್ವಜ್ಞನೂ ಸೂಕ್ಷ್ಮಜ್ಞನೂ ಆಗಿದ್ದಾನೆ.

—ಪವಿತ್ರ ಖುರ್‌ಆನ್ (49:14)

# ಯುಗರಶ್ಮಿ

## ತ್ರೈಮಾಸಿಕ

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575001.

ಸಂಪುಟ: 4 ಒಕ್ಟೋಬರ್–ಡಿಸೆಂಬರ್ 1978/ಇಖಾ–ಫತಹ್ 1357 ಸಂಚಿಕೆ: 3

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


ವಿಷಯ ಸೂಚಿಕೆ: ಪುಟ


* ಹಿಂದೂ–ಮುಸ್ಲಿಂ ಐಕ್ಯ .... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು .... 4
* ಈದುಲ್ ಅಝ್‌ಹಾ ಸಂದೇಶ .... 5
* ಯೇಸು ಜನಿಸಿದ್ದು ಯಾವಾಗ? .... 6
* ಇಸ್ಲಾಮ್ – ನವೀನ ಪಾಶ್ಚಿಮಾತ್ಯರ ನೋಟದಲ್ಲಿ .... 9
* ಮೂವರು ಆಂಗ್ಲ ಅಹ್ಮದಿ ಮಹಿಳೆಯರೊಡನೆ ಸಂದರ್ಶನ .... 16
* ಡಾ। ಕೋಪೂರ್ ಮತ್ತು ಅಹ್ಮದಿಯರು .... 20
* ಓದಿದ್ದು.... .... 21
* ಸಂಪಾದಕರಿಗೆ ಪತ್ರ .... 23
* ಅಹ್ಮದಿಯಾ ವಾರ್ತೆಗಳು .... 24
* ಪುಸ್ತಕ ವಿಭಾಗ—ಇಸ್ಲಾಂ ಮತ ತತ್ವಜ್ಞಾನ



## Ahmadiyya Urdu Literature

1. Ahmadiyyat Ka Paigham
2. Imam Mahdi Ka Zuhoor
3. Sadakat Hazrat Masih Mauwood
4. Silsila Nubuwwat Allah Ka Abdi Ahd Hai
5. Khatamunnabiyeen
6. Zuroorath-e-Mazhab
7. Hujjathul Baligha
8. Kya Hazrat Masih Nasiree Zinda Hein?
9. Hamari Ta'leem
10. Wafat Hazrat Masih Par Ulamaye Misr Ka Fatawe

**Will be sent free.**

Apply with 20 paise stamp for each book to:

**The Editor, Yugarashmi Kannada Quarterly,**
23/1008, Ansari Road, Bunder,
Mangalore-575001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 4 | ಅಕ್ಟೋಬರ್-ಡಿಸೆಂಬರ್ 1978 / ಇಖಾ-ಫತಹ್ 1357 | ಸಂಚಿಕೆ: 3

## ಹಿಂದೂ-ಮುಸ್ಲಿಂ ಐಕ್ಯ

ಸ್ನೇಹಿತರೇ, ಹಿಂದುಗಳೋ, ಮುಸ್ಲಿಮರೋ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ, ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಹ ಸಾಮೂಹಿಕ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ಆತ್ಮೀಯತೆಯಿಂದಲೂ ನಿಷ್ಕಂಳಕತೆಯಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ, ಮತಪರವೂ ಲೌಕಿಕವೂ ಆದ ಎಲ್ಲಾ ವೈಷಮ್ಯಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಸಹಕರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶ ಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಮತವು ಯಥಾರ್ಥವಾದ ಮತವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹಗಳನ್ನು ಪ್ರತಿಯೊಂದು ಜಾತಿಯವರಿಗೆ ನೀಡಿರುವನು. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲಾ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂತಹ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬಿಯರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನಿಯರಿಗೂ ಜಪಾನಿಯರಿಗೂ ಯುರೋಪ್ಯನ್ನರಿಗೂ ಅಮೇರಿಕನ್ನರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವರ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ, ನಕ್ಷತ್ರಾದಿಗಳು ಪ್ರಕಾಶವನ್ನು ಕೊಡುತ್ತವೆಯಲ್ಲದೆ ಅವುಗಳೊಡನೆ ದೇವರು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ನಿರ್ವಹಿಸುತ್ತವೆ. ಎಲ್ಲಾ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನಗಳನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆ

ಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಮನುಷ್ಯಕುಲಕ್ಕೆ ಒಳಿತನ್ನುಂಟು ಮಾಡಬೇಕೆಂದೂ ಸಂಕುಚಿತ ಮನೋಭಾವವಾಗಲೀ ಅಸಹಾನುಭೂತಿಯಾಗಲೀ ನಮ್ಮಲ್ಲಿ ಇರಬಾರದೆಂದೂ ಪರಮಾತ್ಮನ ಈ ವಿಶಾಲವಾದ ಉದಾರತೆ ನಮಗೆ ಕಲಿಸಿಕೊಡುತ್ತದೆ.

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳಿಗೊಪ್ಪುವಂತೆ ತಮ್ಮ ನಡೆವಳಿಕೆಗಳನ್ನು ರೂಪೀಕರಿಸದೆಯೂ ಇದ್ದರೆ ಅವರು ಬೇಗನೇ ನಾಶವಾಗುವರು. ಈ ಉಲ್ಲಂಘನೆಯ ದುಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ ಅವರ ಭಾವೀ ಸಂತಾನಗಳ ಮೇಲೆಯೂ ಉಂಟಾಗುವುದು. ಪರಮಾತ್ಮನ ಗುಣವಿಶೇಷಗಳನ್ನು ತಮ್ಮ ಜೀವಿತದಲ್ಲಿ ಅನುಸರಿಸುವುದು ಮಾನವರ ಬಾಳಿಕೆಗಿರುವ ಒಂದು ಜೀವಜಲವಾಗಿದೆ. ಶಾಂತಿ ಸಮಾಧಾನಗಳ ಉದ್ಭವ ಸ್ಥಾನವಾದ ಪವಿತ್ರ ದೈವಿಕ ಗುಣಗಳನ್ನನುಸರಿಸಿ ಜೀವನ ಕ್ರಮವನ್ನು ರೂಪೀಕರಿಸುವುದರಲ್ಲಿ ಮಾತ್ರ ಮನುಷ್ಯನ ಶಾರೀರಿಕ ಮತ್ತು ಆಧ್ಯಾತ್ಮಿಕ ಜೀವನ ಅವಲಂಬಿಸಿದೆ. ಈ ಪರಮಾರ್ಥವನ್ನು ಲೋಕಾರಂಭದಿಂದ ಈ ವರೆಗಿನ ಎಲ್ಲಾ ರಾಜ್ಯಗಳ ಸತ್ಯಸಂಧರಾದ ಎಲ್ಲಾ ದೇವದಾಸರು ಸಾಕ್ಷೀಕರಿಸಿರುವರು.

ಈ ವಿಶಾಲವಾದ ತತ್ವವನ್ನು ಪ್ರಬೋಧಿಸುವ ಒಂದು ವಾಕ್ಯದಿಂದ ಪರಮಾತ್ಮನು ಪವಿತ್ರ ಖುರ್‌ಆನಿನ 'ಫಾತಿಹಾ' ಎಂಬ ಪ್ರಥಮ ಅಧ್ಯಾಯವನ್ನು ಆರಂಭಿಸಿರುವನು. ನೋಡಿರಿ: "ಅಲ್‌ಹಮ್ದು ಅಲ್ಲಾಹಿ ರಬ್ಬಿಲ್ ಆಲಮೀನ್" ಅಂದರೆ "ಸಕಲ ಸ್ತುತಿ ಸ್ತೋತ್ರಗಳು ಸರ್ವಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ಪರಮಾತ್ಮನಿಗೆ ಸಲ್ಲುವುವು". ಇಲ್ಲಿ ಲೋಕಗಳು ಎಂಬ ಶಬ್ದದಲ್ಲಿ ಎಲ್ಲಾ ಜನಾಂಗದವರೂ ಎಲ್ಲಾ ಕಾಲದವರೂ ಎಲ್ಲಾ ರಾಜ್ಯದವರೂ ಒಳಪಡುತ್ತಾರೆ. ದೈವಾನುಗ್ರಹಗಳು ತಮಗೆ ಮಾತ್ರ ಲಭಿಸಿರುವುದೆಂದು ಅಭಿಪ್ರಾಯಪಟ್ಟು ಇತರ ಜನಾಂಗದವರು ಮನುಷ್ಯ ವರ್ಗದವರಲ್ಲವೆಂಬ ರೀತಿಯಲ್ಲೂ, ದೇವರು ಅವರನ್ನು ಸೃಷ್ಟಿಸಿದ ನಂತರ ಅವರನ್ನು ಮರೆತಿರುವನೆಂದೋ ಕೈಬಿಟ್ಟಿರುವನೆಂದೋ ಅವರು ಅವನ ಸೃಷ್ಟಿಗಳೇ ಅಲ್ಲವೆಂಬ ರೀತಿಯಲ್ಲೂ ಭಾವಿಸಿ ದೇವರ ಸರ್ವವ್ಯಾಪಕವಾದ ಕೃಪಾಕಟಾಕ್ಷವನ್ನು ಇತರರಿಗೆ ಅಲ್ಲಗಳೆಯುವ ಎಲ್ಲಾ ಜಾತಿಯವರಿಗೂ ಪ್ರಸ್ತುತ ಖುರ್‌ಆನ್ ವಾಕ್ಯ ಒಂದು ಖಂಡನೆಯಾಗಿದೆ...... ಸರ್ವಲೋಕಗಳ ರಕ್ಷಕನೂ ಪರಿಪಾಲಕನೂ ಆದ ಪರಮಾತ್ಮನು ಪಕ್ಷಪಾತವನ್ನು ತೋರಿಸುವ ರೀತಿಯಲ್ಲಿ ಒಂದು ಪ್ರತ್ಯೇಕ ಜನಾಂಗದವರಲ್ಲಿ ಮಾತ್ರ ಶ್ರದ್ಧೆಯಿಟ್ಟಿದ್ದಾನೆಂಬುದು ತುಂಬಾ ಅಸಂಗತವಾಗಿದೆ. ಇಂತಹ ಅಬದ್ಧ ಸಿದ್ಧಾಂತಗಳನ್ನು ನಿರಾಕರಿಸುವುದಕ್ಕಾಗಿ "ಸರ್ವಸ್ತುತಿ – ಸ್ತೋತ್ರಗಳು ಅಖಿಲ ಲೋಕಗಳ ರಕ್ಷಕನೂ ಪರಿಪಾಲಕನೂ ಆದ ಪರಮಾತ್ಮನಿಗೆ ಸಲ್ಲುವುವು" ಎಂಬ ವಚನದಿಂದ ಪವಿತ್ರ ಖುರ್‌ಆನ್ ಪ್ರಾರಂಭವಾಗುತ್ತದೆ.

ಪರಮಾತ್ಮನು ಯಾವುದಾದರೊಂದು ಪ್ರತ್ಯೇಕ ಜನಾಂಗದವರಲ್ಲಿ ಅಥವಾ ಪ್ರತ್ಯೇಕ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು ನಿಯೋಗಿಸಿರುವನೆಂಬ ವಿಶ್ವಾಸವು ತಪ್ಪೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಸ್ಥಳಗಳಲ್ಲಿ ದೇವರು ನುಡಿದಿರುವನು. ಆಧ್ಯಾತ್ಮಿಕ ಜ್ಞಾನವನ್ನು ನೀಡುವುದರಲ್ಲಿ ಯಾವ ಗೋತ್ರದವರನ್ನಾಗಲೀ ದೇಶದವರನ್ನಾಗಲೀ ಅವನು ಮರೆತಿಲ್ಲ. ಈ ಸಂಗತಿಯನ್ನು ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಉಪಯುಕ್ತ ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ಪರಮಾತ್ಮನು ಎಲ್ಲಾ ಸಮುದಾಯದವರಿಗೂ ದೇಶದವರಿಗೂ ಅವರ ಭೌತಿಕಾವಶ್ಯಕತೆಗಳನ್ನು ಪೂರೈಸಲು ಸಕಲವಿಧ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಹಾಗೆಯೇ ಎಲ್ಲಾ ಜನಾಂಗದವರ ಮತ್ತು ಎಲ್ಲಾ ದೇಶದವರ ಆಧ್ಯಾತ್ಮಿಕ ಅವಶ್ಯಕತೆಗಳಿಗಾಗಿಯೂ ಎಲ್ಲಾ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನಿನ ಒಂದೆಡೆಯಲ್ಲಿ ಹೀಗೆ ಹೇಳಲಾಗಿದೆ: "ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಪೀಹಾ ನದೀರ್" ಅಂದರೆ "ಒಬ್ಬ ಮುನ್ನೆಚ್ಚರಿಕೆಯನ್ನೀಯುವವನು (ಉಪದೇಶಕನು) ಬಂದಿರದ ಒಂದು ಸಮುದಾಯವಾಗಲೀ ಇಲ್ಲ" (35:25).

ಆದುದರಿಂದ ನಾವೆಲ್ಲರೂ ವಿಶ್ವಾಸವಿಡಬೇಕಾದ ಸಕಲ ಸಂಪೂರ್ಣನೂ ಸತ್ಯಸ್ವರೂಪನೂ ಆದ ಪರಮಾತ್ಮನು ಸರ್ವಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂಬುದು ಅವಿತರ್ಕಿತವಾಗಿದೆ. ಅವರ ಪರಿಪಾಲನೆಯು ಯಾವುದಾದರೊಂದು ಪ್ರತ್ಯೇಕ ಜಾತಿಗೋ ಪ್ರತ್ಯೇಕ ಕಾಲಕ್ಕೋ ಪ್ರತ್ಯೇಕ ರಾಜ್ಯಕ್ಕೋ ಸೀಮಿತ

ವಾದುದಲ್ಲ. ಅವನು ಎಲ್ಲಾ ಜಾತಿಯವರ ಎಲ್ಲಾ ಕಾಲಗಳ ಎಲ್ಲಾ ರಾಜ್ಯಗಳ ಪಾಲಕನಾಗಿದ್ದಾನೆ. ಸಕಲ ಅನುಗ್ರಹಗಳ ಮೂಲ ಅವನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲಾ ಸೃಷ್ಟಿಗಳನ್ನೂ ಸಾಕಿ ಸಲಹುವವನು ಅವನೇ ಆಗಿದ್ದಾನೆ. ಎಲ್ಲಾ ವಸ್ತುಗಳೂ ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವವ್ಯಾಪಕವಾಗಿದೆ. ಅವನ ಕೃಪೆಯ ಕುರಿತು ಯಾರೂ ಆಕ್ಷೇಪಿಸದ ರೀತಿಯಲ್ಲಿ ಅದು ಸರ್ವವ್ಯಾಪಿಯಾಗಿದೆ. ಪರಮಾತ್ಮನು ಅವನ ಅನುಗ್ರಹಗಳನ್ನು ಇತರರಿಗಲ್ಲದೆ ತಮಗೆ ಕರುಣಿಸಲಿಲ್ಲವೆಂದೋ, ಪರಮಾತ್ಮನಿಂದ ಮಾರ್ಗದರ್ಶಕ ಗ್ರಂಥಗಳು ಇತರರಿಗಲ್ಲದೆ ತಮಗೆ ಲಭಿಸಲಿಲ್ಲವೆಂದೋ, ಪರಮಾತ್ಮನು ತನ್ನ ವಚನ, ಪ್ರಕಟಣೆ ಹಾಗೂ ದೃಷ್ಟಾಂತಗಳ ಮುಖಾಂತರ ಹಿಂದಿನ ಕಾಲದಲ್ಲಿ ಅಲ್ಲದೆ ತಮ್ಮ ಕಾಲದಲ್ಲಿ ಪ್ರತ್ಯಕ್ಷನಾಗಲಿಲ್ಲವೆಂದೋ ಯಾವುದೇ ಜನಾಂಗಕ್ಕೂ ಹೇಳುವರೆ ಅವನು ಎಡೆಗೊಡಲಿಲ್ಲ. ಹಾಗೆ ಆ ಸರ್ವವಲ್ಲಭನು ತನ್ನ ಭೌತಿಕ ಮತ್ತು ಆಧ್ಯಾತ್ಮಿಕ ಅನುಗ್ರಹಗಳಿಂದ ಯಾವುದಾದರೊಂದು ಸಮುದಾಯವನ್ನೋ ಕಾಲವನ್ನೋ ಬಿಡದೆ ತನ್ನ ಕೃಪಾವಿತರಣೆಯನ್ನು ಸರ್ವವ್ಯಾಪಕವನ್ನಾಗಿಯೂ ನಿತ್ಯವನ್ನಾಗಿಯೂ ಮಾಡಿರುವನು.

ಹೀಗೆ ಪರಮಾತ್ಮನ ಅನುಗ್ರಹ ನಿಸ್ಸೀಮವೂ ಸರ್ವವ್ಯಾಪಕವೂ ಆಗಿರುವಾಗ, ಅವನ ದಿವ್ಯಗುಣಗಳನ್ನು ನಾವು ನಮ್ಮ ಜೀವನ ಕ್ರಮದಲ್ಲಿ ತಂದು, ಅದಕ್ಕನುಸಾರವಾಗಿ ನಮ್ಮ ಸ್ವಭಾವಗಳನ್ನು ಕ್ರಮ ಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ. ಎಲೈ ದೇಶಭಾಂಧವರೇ, ಈ ವಿಶಾಲವಾದ ಮನೋಭಾವದೆಡೆಗೆ ನಿಮ್ಮನ್ನು ಆಮಂತ್ರಿಸಲಿಕ್ಕಾಗಿ ಈ ವಿಜ್ಞಾಪನೆಯನ್ನು ನಿಮ್ಮ ಸಮಕ್ಷಮ ಸಮರ್ಪಿಸುತ್ತೇನೆ. ಸ್ನೇಹಭಾವದ ಈ ಆಮಂತ್ರಣದ ಮರೆಯಲ್ಲಿ ನನಗೆ ಸ್ವಾರ್ಥಪರವಾದ ಉದ್ದೇಶವೇನಾದರೂ ಉಂಟೆಂದು ನೀವು ಭಾವಿಸದಿರಲಿಕ್ಕಾಗಿ, ಸರ್ವಶಕ್ತನಾದ ಪರಮಾತ್ಮನೇ ನಿಮ್ಮ ಹೃದಯುಗಳಲ್ಲಿ ಸತ್ಯವನ್ನು ಪ್ರಕಟಿಸಲಿಯೆಂದೂ, ನಿಮ್ಮ ಕ್ಷೇಮಾಭಿವೃದ್ಧಿಗಳಿಗಾಗಿ ನನ್ನ ಹೃದಯ ದಲ್ಲಿರುವ ಆ ಇಚ್ಛೆಯ ರಹಸ್ಯವನ್ನು ಅವನೇ ನಿಮಗೆ ಬೋಧ್ಯಪಡಿಸಲಿಯೆಂದೂ ನಾನು ಸಹೃದಯತೆಯಿಂದ ಪ್ರಾರ್ಥಿಸುತ್ತೇನೆ.

* * *

ಮಿತ್ರರೇ, ದೈವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ಎಲ್ಲಾ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯದಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ವಿವೇಕಯುತವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಉಪೇಕ್ಷಿಸಿ ಅನುಕಂಪ ಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವನ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ.

ನಿಮಗೆ ಎರಡು ಪಕ್ಷಗಳಿಗೂ ಸಮಾಧಾನವೂ ಶಾಂತಿಯೂ ಅತ್ಯಾವಶ್ಯಕವಾಗಿರುವ ಕಾಲಘಟ್ಟದಲ್ಲೇ ನಾನು ನಿಮ್ಮನ್ನು ಮೈತ್ರಿಗಾಗಿ ಆಮಂತ್ರಿಸುತ್ತಿದ್ದೇನೆ. ಲೋಕದಲ್ಲಿ ಹಲವಿಧ ಆಪತ್ತುಗಳು ಸಂಭವಿಸುತ್ತಿವೆ. ಭೂಕಂಪಗಳೂ ಕ್ಷಾಮಗಳೂ ಉಂಟಾಗುತ್ತಿವೆ. ಪ್ಲೇಗು ನಮ್ಮನ್ನು ಇನ್ನೂ ಬಿಟ್ಟು ಹೋಗಿಲ್ಲ. ಪರಮಾತ್ಮನು ನನಗೆ ತಿಳಿಸಿರುವನು: ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಕುಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲಾ ಭಯಂಕರವಾದ ವಿಪತ್ತುಗಳೂ ನಾಶನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದ ಮನುಷ್ಯರು ದಿಗ್ಭ್ರಾಂತರಾಗಿ ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸುವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ ಭ್ರಾಂತರಾಗುವರು. ಆದುದರಿಂದ ಎಲೈ ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟುಮಾಡಲಿ. ಐಕ್ಯಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯವನ್ನು ತ್ಯಜಿಸಲಿ. ಇಲ್ಲವಾದರೆ ಅನ್ಯೋನ್ಯ ಶತ್ರುತ್ವದ ಎಲ್ಲಾ ದುಷ್ಫಲಗಳು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು. (ಪೈಗಾಮೆ ಸುಲ್ಹ್—1908).

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ನೈತಿಕ ಮೌಲ್ಯಗಳು

1. ಅಲ್ಲಾಹುವಿನ ಮೇಲೆ ಮತ್ತು ಅಂತ್ಯದಿನದ ಕುರಿತು ವಿಶ್ವಾಸವುಳ್ಳವನು ತನ್ನ ನೆರೆಕರೆಯವನೊಡನೆ ಔದಾರ್ಯವನ್ನು ತೋರಿಸಬೇಕು; ಅತಿಥಿಯನ್ನು ಗೌರವಿಸಬೇಕು; ಒಳ್ಳೆಯದನ್ನು ಹೇಳಬೇಕು ಅಥವಾ ಮೌನವನ್ನವಲಂಬಿಸಬೇಕು.

2. ಅನ್ಯಾಯವಾಗಿ ಲಭಿಸಿದ ಒಂದು ಕಲ್ಲನ್ನು ನೀವು ನಿರ್ಮಿಸುವ ಒಂದು ಕಟ್ಟಡಕ್ಕಾಗಿ ಉಪಯೋಗಿಸಬೇಡಿರಿ; ಏಕೆಂದರೆ ಅದರ ನಾಶಕ್ಕೆ ಆ ಕಲ್ಲು ಹೇತುವಾದೀತು.

3. ಆರು ಸಂಗತಿಗಳ ಬಗ್ಗೆ ಭರವಸೆಯನ್ನೀಯಲು ನಿಮಗೆ ಸಾಧ್ಯವಾಗುವುದಾದರೆ ನಿಮಗೆ ಸ್ವರ್ಗ ಲಭಿಸುವುದೆಂದು ನಾನು ಭರವಸೆಯನ್ನೀಯುವೆನು: ಸತ್ಯವನ್ನೇ ನುಡಿಯುವುದು; ವಾಗ್ದಾನವಿತ್ತರೆ ಪಾಲಿಸುವುದು; ವಹಿಸಿದ ಕಾರ್ಯವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುವುದು; ಚಾರಿತ್ರ್ಯವನ್ನು ಕಾಪಾಡುವುದು; ಕಣ್ಣಿನ ನೋಟವನ್ನು ಅಧೋಮುಖವಾಗಿರಿಸುವುದು; ನಿಮ್ಮ ಕೈಗಳು ಅನ್ಯರಿಗೆ ಹಾನಿಯನ್ನುಂಟುಮಾಡದಿರುವುದು.

4. ಮಿತಿಮೀರಿ ವರ್ತಿಸುವುದು ಸಾಮರ್ಥ್ಯದ ಶತ್ರುವಾಗಿದೆ. ಧೀರತೆಯ ಶತ್ರು ಪೀಡನೆ; ದಾನಶೀಲತೆಯ ಶತ್ರು ಪಡಕೊಂಡವನಿಗೆ ಅದರ ಕುರಿತು ನೆನಪು ಬರಿಸುವುದಾಗಿದೆ; ಸೌಂದರ್ಯದ ಶತ್ರು ಒಯ್ಯಾರವಾಗಿದೆ; ಆರಾಧನೆಯ ಶತ್ರು ಸ್ಥಿರ ನಿರ್ಧಾರವಿಲ್ಲದಿರುವುದು; ಮಾತಿನ ಶತ್ರು ಸುಳ್ಳು; ಕಲಿಯುವಿಕೆಯ ಶತ್ರು ಮರೆವು; ಜ್ಞಾನದ ಶತ್ರು ಮೌಢ್ಯ. ಕುಲೀನತೆಯ ಶತ್ರು ಡಂಭಾಚಾರ; ಉದಾರತೆಯ ಶತ್ರು ದುಂದುವೆಚ್ಚ.

5. ನಿಮಗೆ ಅನುಮತಿಸಲ್ಪಟ್ಟ ಉತ್ತಮವಾದುದನ್ನು ತಿನ್ನಿರಿ; ಕುಡಿಯಿರಿ. ದಾನಧರ್ಮಗಳಿಗಾಗಿ ಖರ್ಚು ಮಾಡಿರಿ; ಅತಿವೆಚ್ಚ ಹಾಗೂ ಒಯ್ಯಾರರಹಿತವಾಗಿ ವಸ್ತ್ರ ಧರಿಸಿರಿ.

6. ಅಹಂಭಾವ ಮತ್ತು ದರ್ಪದಿಂದ ಕೂಡಿದವನಾಗಿ, ಅತ್ಯುನ್ನತನಾದ ಪರಮಾತ್ಮನನ್ನು ಮರೆತುಬಿಡುವವನು,

ಸರ್ವೋನ್ನತನಾದ ಪರಮಾತ್ಮನನ್ನು ಮರೆತು, ಮರ್ದಿಸುವವನು ಹಾಗೂ ಕ್ರೂರವಾಗಿ ಪೀಡಿಸುವವನು,

ಮರಣವನ್ನೂ ಅಂತಿಮ ವಿಚಾರಣೆಯನ್ನೂ ಮರೆತು ಆಟ-ವಿನೋದಗಳಲ್ಲಿ ಮಗ್ನನಾಗಿರುವವನು,

ತನ್ನ ಆರಂಭವನ್ನೂ ಅಂತ್ಯವನ್ನೂ ನೆನಪಿಸದೆ ಅವಿಧೇಯನಾಗಿಯೂ ಧಿಕ್ಕಾರಿಯಾಗಿಯೂ ಜೀವಿಸುವವನು,

ಲೌಕಿಕ ಲಾಭಗಳಿಗಾಗಿ ಧರ್ಮವನ್ನು ಒಂದು ಉಪಕರಣವನ್ನಾಗಿ ಮಾಡುವವನು,

ಸಂಶಯಗಳ ಮೂಲಕ ಸತ್ಯವಿಶ್ವಾಸವನ್ನು ಗಳಿಸಲು ಪ್ರಯತ್ನಿಸುವವನು,

ಅತ್ಯಾಶೆಯಿಂದ ಕೂಡಿದವನು,

ಇಂದ್ರಿಯೇಚ್ಛೆಗಾಗಿ ದಾರಿತಪ್ಪಿ ನಡೆಯುವವನು, ಮತ್ತು ದುರಾಗ್ರಹಗಳ ಕಾರಣದಿಂದ ಅವಮಾನಿತನಾದವನು ಸೃಷ್ಟಿಗಳಲ್ಲಿ ಅತ್ಯಂತ ನೀಚನು.

7. ಏಕಾಂತವಾಸ ದುಷ್ಟ ಸಹವಾಸಕ್ಕಿಂತ ಉತ್ತಮ; ಶಿಷ್ಟರ ಸಹವಾಸ ಏಕಾಂತವಾಸಕ್ಕಿಂತ ಉತ್ತಮ.

8. ವಿಷಮಾವಸ್ಥೆಗೆ ನೀವು ಈಡಾದರೆ, ಅಲ್ಲಾಹು ನಿಮಗೊಂದು ಪರಿಹಾರ ಮಾರ್ಗವನ್ನು ತೋರಿಸಿಕೊಡುವವರೆಗೆ ಜಾಗರೂಕತೆಯಿಂದಲೂ ಮನಃಸ್ಥೈರ್ಯದಿಂದಲೂ ಮುಂದಕ್ಕೆ ಸಾಗಿರಿ.

9. ಸರ್ವೋನ್ನತನಾದ ಅಲ್ಲಾಹು ನಿಮ್ಮಲ್ಲಿ ಯಾರಿಗಾದರೂ ಒಂದು ಜೀವನೋಪಾಯವನ್ನು ಅನುಗ್ರಹಿಸಿದರೆ, ಸ್ಥಿತಿಗತಿಗಳಲ್ಲಿ ಬದಲಾವಣೆಯುಂಟಾಗುವವರೆಗೆ ಅದನ್ನು ಅವನು ಉಪೇಕ್ಷಿಸದಿರಲಿ.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ Wisdom of the Holy Prophet Muhammad ಎಂಬ ಪುಸ್ತಕದಿಂದ ಆಯ್ದುದು).

# ಈದುಲ್ ಅಝ್ಹಾ ಸಂದೇಶ

● ಎನ್. ಎ.

ಈದುಲ್ ಅಝ್ಹಾ ಮಹತ್ತಾದ ತ್ಯಾಗದ ಚರಿತ್ರೆಯನ್ನು ವರ್ಷಂಪ್ರತಿ ನಮಗೆ ನೆನಪಿಸಿಕೊಡುತ್ತದೆ. ಅದು ಮಾನವ ಜನಾಂಗದ ಮೂವರು ವ್ಯಕ್ತಿಗಳ ಧೀರತೆಯನ್ನು ಪ್ರತಿಯೋರ್ವ ಮುಸ್ಲಿಮನ ಸ್ಮೃತಿಪಟಲದಲ್ಲಿ ಸ್ಫುರಿಸುತ್ತದೆ. ಪರಮಾತ್ಮನಿಗಾಗಿ ಸರ್ವಸ್ವವನ್ನು ಪರಿತ್ಯಜಿಸಲು ಸನ್ನದ್ಧರಾದ ಮೂವರು: ಹಝ್ರತ್ ಇಬ್ರಾಹಿಂ, ಪತ್ನಿ ಹಝ್ರತ್ ಹಾಜರ, ಪುತ್ರ ಹಝ್ರತ್ ಇಸ್ಮಾಯಿಲ್. ಆ ಆದರ್ಶ ವ್ಯಕ್ತಿಗಳ ತ್ಯಾಗಶೀಲತೆಯನ್ನು ಅಂದಿನ ದಿನ ಮುಸ್ಲಿಂ ಲೋಕ ಕೊಂಡಾಡುತ್ತದೆ.

ಹಜ್‌ಕರ್ಮ ಇಸ್ಲಾಮಿನ ಅತಿಪ್ರಧಾನ ಅನುಷ್ಠಾನ ಕರ್ಮಗಳಲ್ಲಿ ಒಂದು. ಲಕ್ಷಗಟ್ಟಲೆ ಮುಸ್ಲಿಮರು ಲೋಕದ ನಾನಾ ಭಾಗಗಳಿಂದ ಹಜ್‌ವೇಳೆಯಲ್ಲಿ ಪವಿತ್ರ ಮಕ್ಕಾದಲ್ಲಿ ಒಟ್ಟುಗೂಡುತ್ತಾರೆ. ದೇಶ, ಭಾಷೆಗಳ ವ್ಯತ್ಯಾಸವನ್ನಾಗಲೀ, ವರ್ಗವರ್ಣ ಅಂತರವನ್ನಾಗಲೀ ಗಣ್ಯಮಾಡದೆ ಎಲ್ಲಾ ಮುಸ್ಲಿಮರು ದೈವಾಜ್ಞೆಗೆ ಶಿರಬಾಗಿದ ಸ್ಥಿತಿಯಲ್ಲಿ ಮಕ್ಕಾದಲ್ಲಿ ಸಮ್ಮೇಳಿಸುತ್ತಾರೆ. ಕಅಬಾ ದೈವಾಲಯದ ನಿರ್ಮಾಣಕ್ಕೆ ಸಂಬಂಧಿಸಿ ಪ್ರವಾದಿ ಇಬ್ರಾಹಿಂ, ಪುತ್ರ ಇಸ್ಮಾಯಿಲ್ ಮತ್ತು ಹಝ್ರತ್ ಹಾಜರಾ ಆ ಮಹತ್ತಾದ ತ್ಯಾಗಗಳನ್ನು ಅನುಷ್ಠಿಸಿದ್ದರು— ಲೋಕಮುಸ್ಲಿಂ ಕೇಂದ್ರದ ನಿರ್ಮಾಣ. ಆ ಕೇಂದ್ರದ ಸಂರಕ್ಷಣೆಗಾಗಿ ಜೀವಾರ್ಪಣೆಮಾಡಲು ತಾವು ಸನ್ನದ್ಧರೆಂದು ಅಲ್ಲಿ ಸಮ್ಮೇಳಿಸುತ್ತಾ ಮುಸ್ಲಿಮರು ಏಕಸ್ವರದಲ್ಲಿ ಕರ್ಮಣಾ ಘೋಷಿಸುತ್ತಾರೆ.

ಪ್ರವಾದಿ ಇಬ್ರಾಹಿಮರು ಎತ್ತಿಹಿಡಿದ ಏಕದೈವ ತತ್ವ (ತೌಹೀದ್)ವನ್ನು ಶಾಶ್ವತಗೊಳಿಸಲು ನಬಿವರ್ಯರಾದ ಮುಹಮ್ಮದ್ ಪೈಗಂಬರರು ಮಕ್ಕಾದಲ್ಲಿ ಪರಿಶ್ರಮಿಸಿದಾಗ, ಅವಿಶ್ವಾಸಿಗಳಾದ ಮಕ್ಕಾನಿವಾಸಿಗಳು ಆ ಮಹಾತ್ಮರನ್ನೂ ಅವರ ಅನುಚರರನ್ನೂ ಬಲಪ್ರಯೋಗಿಸಿ ಅಲ್ಲಿಂದ ಹೊಡೆದೋಡಿಸಲು ಸಂಘಟಿತರಾಗಿ ಸನ್ನದ್ಧರಾದರು. ಪೈಗಂಬರರಿಗೂ ಅನುಚರರಿಗೂ ಮಕ್ಕಾವನ್ನು ತ್ಯಜಿಸಿ ಪಲಾಯನಮಾಡಬೇಕಾಗಿ ಬಂತು. ಆದರೆ, ಕೆಲ ವರ್ಷಗಳಲ್ಲೇ ಅವರು ಜಯಶಾಲಿಗಳಾಗಿ ಹಿಂತಿರುಗಿ ಬಂದು ಏಕದೈವ ಸಿದ್ಧಾಂತದ ವಿಜಯಪತಾಕೆಯನ್ನು ಮಕ್ಕಾದಲ್ಲಿ ಸ್ಥಾಪಿಸಿದರು. ಅವರು ಕಅಬಾದ ಸಂರಕ್ಷಕರೂ ಆದರು. ಅಂದಿನಿಂದ ಇಂದಿನ ವರೆಗೆ ಆ ಪವಿತ್ರ ಕೇಂದ್ರ ಮುಸ್ಲಿಮರ ಅಧೀನದಲ್ಲಿದೆ. ಏಕದೈವ ಸಿದ್ಧಾಂತದ ಸಂರಕ್ಷಣೆಗಾಗಿ ಯಾವುದೇ ತ್ಯಾಗಕ್ಕೂ ಸನ್ನದ್ಧರೆಂದು ಘೋಷಿಸುತ್ತಾ— "ಲಬ್ಬೈಕ ಅಲ್ಲಾಹುಮ್ಮ ಲಬ್ಬೈಕ" ಎಂದು ಉಚ್ಚರಿಸುತ್ತಾ ಲಕ್ಷಗಟ್ಟಲೆ ಮುಸ್ಲಿಮರು ವರ್ಷಂಪ್ರತಿ ಅಲ್ಲಿ ಸಮ್ಮೇಳಿಸುತ್ತಾರೆ. ಎಲ್ಲಿಂದ ಏಕದೈವ ಸಿದ್ಧಾಂತವನ್ನು ಕಿತ್ತೆಸೆಯಲು ಅವಿಶ್ವಾಸಿಗಳು ಯತ್ನಿಸಿದ್ದರೋ, ಎಲ್ಲಿಂದ ಏಕದೈವ ತತ್ವದ ಧ್ವಜವಾಹಕರಾದ ಪೈಗಂಬರರನ್ನು ಹೊಡೆದೋಡಿಸಲು ಅವಿಶ್ವಾಸಿಗಳು ಶ್ರಮಿಸಿದ್ದರೋ, ಅದೇ ಕರ್ಮಭೂಮಿಗೆ ಇದೋ ಲೋಕದ ಮೂಲೆಮೂಲೆಗಳಿಂದ ಏಕದೈವ ಸಿದ್ಧಾಂತದ ಸಂರಕ್ಷಣೆಗಾಗಿ ಮುಸ್ಲಿಮರು ಓಡೋಡಿ ಬರುತ್ತಾರೆಂದು ಹಜ್ ಕರ್ಮಾನುಷ್ಠಾನದ ಮೂಲಕ ಅವರು ನೆನಪು ಹುಟ್ಟಿಸುತ್ತಾರೆ. ಏಕದೈವ ಸಿದ್ಧಾಂತ, ಇಸ್ಲಾಮ್ ಮತ್ತು ಮುಹಮ್ಮದ್ ಪೈಗಂಬರರೊಡನೆ ತಮಗಿರುವ ಅತುಲ್ಯ ಸ್ನೇಹವಿಶ್ವಾಸಗಳನ್ನು ಅವರು ಅದರ ಮೂಲಕ ಪ್ರಕಟಿಸುತ್ತಾರೆ. ಏಕದೈವ ತತ್ವದ ವಿಜಯಕ್ಕೂ ಸ್ಥಿರತೆಗೂ ಬೇಕಾಗಿ ತಮ್ಮ ಜೀವರಕ್ತವನ್ನರ್ಪಿಸಲು ಸಿದ್ಧರೆಂದು ಸಹ ಅಲ್ಲಿ ಅವರು ತೋರ್ಪಡಿಸುತ್ತಾರೆ.

ನಾಲ್ಕು ವರ್ಷಗಳ ಮೊದಲು ಪ್ರವಾದಿ ಇಬ್ರಾಹಿಮರು ಮಾಡಿದ ಮಹತ್ತಾದ ಯಜ್ಞವನ್ನು ಈದುಲ್ ಅಝ್ಹಾ ದಿನದಂದು ಸ್ಮರಿಸಲಾಗುತ್ತದೆ. ಆ ಮಹಾತ್ಯಾಗದ ಫಲವನ್ನು 4000 ವರ್ಷಗಳ ಬಳಿಕವೂ ನಾವಿಂದು ಕಾಣುತ್ತಿದ್ದೇವೆ. ಪರಮಾತ್ಮನ ಮಹತ್ವವನ್ನು ಪುನಃ ಸ್ಥಾಪಿಸಲಿಕ್ಕೂ ದೈವಿಕ ಶಬ್ದವನ್ನು ಮೊಳಗಿಸಲಿಕ್ಕೂ ಪ್ರವಾದಿ ಇಬ್ರಾಹಿಮರು ತನ್ನ ಪುತ್ರನನ್ನೂ ಪತ್ನಿಯನ್ನೂ ಆಹಾರ ಪಾನೀಯವಿಲ್ಲದ ಒಂದು ನಿರ್ಜನ ಮರಳುಗಾಡಿನಲ್ಲಿ ಬಿಟ್ಟುಬರಲು ಸನ್ನದ್ಧರಾದರು. ಸ್ವಂತ ಪ್ರೀತಿಯ ಮಗನ ಕತ್ತುಕೊಯ್ಯುವುದಕ್ಕೆ ತುಲ್ಯವಾದ ಒಂದು ಮಹಾ

# ಯೇಸು ಜನಿಸಿದ್ದು ಯಾವಾಗ?

● ಎಂ. ಕೆ. ನೌಜವಾನ್.

ಕ್ರೈಸ್ತಸಭೆ ಒಪ್ಪಲಿ ಯಾ ಒಪ್ಪದಿರಲಿ, ಯೇಸು ಕ್ರಿಸ್ತರ ಜನನಕ್ಕೆ ಸಂಬಂಧಿಸಿ ನಿರ್ದಿಷ್ಟ ಸಮಯ, ವರ್ಷ, ಮಾಸ ಇವುಗಳ ಕುರಿತು ಸುವಾರ್ತೆಗಳು ಏನನ್ನೂ ಹೇಳುವುದಿಲ್ಲವೆಂಬುದು ಒಂದು ಸತ್ಯಸಂಗತಿಯಾಗದೆ.

"ಆತನು ಕ್ರಿಸ್‌ಮಸ್ ದಿನದಂದಲ್ಲ ಜನಿಸಿದ್ದೆಂದು ಪುರೋಹಿತರಲ್ಲಿ ಹೆಚ್ಚಿನವರು ಒಪ್ಪುತ್ತಾರೆ. ಆದರೂ ಆ ದಿನವನ್ನು ಆತನ ಜನನ ದಿನವೆಂದು ಆಚರಿಸಲಾಗುತ್ತದೆ. ಮೂವತ್ತಕ್ಕಿಂತ ಹೆಚ್ಚಿನ ವಿದ್ವಾಂಸರಾದ ಅಧಿಕೃತ ವಕ್ತಾರರು, ತಮ್ಮ ಕಾಲಗಣನೆಯ ಪ್ರಕಾರ, ಏಳುವರ್ಷಗಳ ವ್ಯತ್ಯಾಸವುಂಟೆಂದು ಲೆಕ್ಕಹಾಕಿದ್ದಾರೆ. ಓಕ್ಸ್‌ಫರ್ಡ್ ವಂಶಾವಳಿ ಪಟ್ಟಿಯನುಸರಿಸಿ ಇದು ವ್ಯಕ್ತಗೊಳಿಸಲ್ಪಟ್ಟಿದೆ.*

ಆಗಸ್ಟಸ್ ಸೀಸರ (Ceasar Augustus)ನ ಆಡಳಿತಕಾಲದಲ್ಲಿ ಯೇಸುಕ್ರಿಸ್ತರು ಜನಿಸಿದರೆಂದು ಸೂಚಿಸುವ ಒಂದು ಪ್ರಸ್ತಾವನೆ ಲೂಕದಲ್ಲಿ ಮಾತ್ರ ಕಾಣ ಸಿಗುತ್ತದೆ. (ಲೂಕ 2:1). "ಗರ್ಭಿಣಿಯಾಗಿದ್ದ" ಮರಿಯಳು ಯೋಸೇಫನೊಂದಿಗೆ ಯೂದಾಯ ಸೀಮೆಗೆ ಹೋದಳೆಂದೂ ಅಲ್ಲಿ ಆಕೆ ಹೆತ್ತಳೆಂದೂ ಲೂಕದಲ್ಲಿ ಹೇಳಲಾಗಿದೆ. (ಲೂಕ, 2:6, 7).

ಬೈಬಲಿನ ಈ ಪ್ರಸ್ತಾವನೆಗಳಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ.

ಒಂದು: ಯೋಸೇಫ ಮತ್ತು ಮರಿಯ ಆಗಸ್ಟಸ್ ಸೀಜರನ ಆಡಳಿತಕಾಲದಲ್ಲಿ ಯೂದಾಯಕ್ಕೆ ಹೋಗಿ ನೆಲೆಸಿದರು.

ಎರಡು: ಗರ್ಭಿಣಿಯಾಗಿದ್ದ ಮರಿಯಳು ಪ್ರಸ್ತುತ ಪ್ರಯಾಣದ ಕಾಲದಲ್ಲಿ ಯೇಸುವನ್ನು ಪ್ರಸವಿಸಿದಳು.

ಆಗಸ್ಟಸ್ ಸೀಜರ್ ಕ್ರಿ. ಪೂ. 31ರಿಂದ ಕ್ರಿ. ಶ. 14ರ ವರೆಗೆ ಆಡಳಿತೆ ನಡೆಸುತ್ತಿದ್ದನೆಂಬುದು ಗಮನಾರ್ಹ. ಪ್ರಥಮ ರೋಮನ್ ಚಕ್ರವರ್ತಿಯಾದ ಆಗಸ್ಟಸ್ ಸೀಜರನ ಹೆಸರಿನ ಸ್ಮರಣಾರ್ಥ ರೋಮನ್ ಪಂಚಾಂಗದಲ್ಲಿ

*Jesus Christ — By Charles Bradlaugh Walls & Co., London, pp 60, 61.

(5ನೆ ಪುಟದಿಂದ)

ಯಜ್ಞವನ್ನು ಪ್ರವಾದಿ ಇಬ್ರಾಹಿಮರು ಆ ಮೂಲಕ ನಡೆಸಿದರು. ತಾನು ಕಂಡ ಒಂದು ಸ್ವಪ್ನವನ್ನು ಸಾಕ್ಷಾತ್‌ಕರಿಸುವುದು ಪ್ರವಾದಿ ಇಬ್ರಾಹಿಮರ ಆ ಮಹಾಯಜ್ಞದ ಉದ್ದೇಶವಾಗಿತ್ತು. ದೈವಾಜ್ಞೆಯೆಂದು ನಂಬಿ ಅವರು ಅದನ್ನು ಮಾಡಿದರು. ದೈವಾಜ್ಞೆಯಾಗಿದ್ದುದರಿಂದ ಆ ಪ್ರವೃತ್ತಿಗೆ ತಕ್ಕುದಾದ ಸತ್ಫಲಗಳು ಕಂಡುಬರುವುವೆಂದು ಅವರಿಗೆ ದೃಢವಿಶ್ವಾಸವಿತ್ತು. ಆ ದೃಢವಿಶ್ವಾಸದ ಫಲದಿಂದಾಗಿ ವಿಜನವಾದ ಮಕ್ಕಾಮರುಭೂಮಿ ಇಂದು ಲೋಕದಲ್ಲೆಲ್ಲಾ ಇರುವ ಜನರನ್ನು ಆಕರ್ಷಿಸುತ್ತಾ ಜನನಿಬಿಡವಾಗಿ ಮಾರ್ಪಟ್ಟಿದೆ! ದೈವಾಜ್ಞೆಗೆ ಶಿರಬಾಗಿ ತನ್ನ ಪುತ್ರನನ್ನು ಬಲಿಯರ್ಪಿಸಲು ಸನ್ನದ್ಧರಾದ ಇಬ್ರಾಹಿಂ ಪ್ರವಾದಿಯವರು ಮರುಭೂಮಿಯ ಎಣಿಸಲಶಕ್ಯವಾದ ಮರಳ ಕಣಗಳೋಪಾದಿಯಲ್ಲಿ ವರ್ಧಿಸಿದ ಕೋಟಾನುಕೋಟಿ ಮಕ್ಕಳ ಪಿತರಾದರು! ಶುಷ್ಕಶೂನ್ಯವಾಗಿದ್ದ ಆ ಮರುಭೂಮಿ ಐಶ್ವರ್ಯ ಮತ್ತು ಅಭಿವೃದ್ಧಿಯ ನೆಲೆಯಾಗಿ ಮಾರ್ಪಾಟುಗೊಂಡಿತು. ಪರಮಾತ್ಮನ ಮಾರ್ಗದಲ್ಲಿ ಅರ್ಪಿಸಲ್ಪಡುವ ಆತ್ಮಾರ್ಥವಾದ ತ್ಯಾಗ ಎಂದಿಗೂ ನಿಷ್ಫಲವಾಗಿ ಹೋಗಲಾರದೆಂಬ ಮಹತ್ತಾದ ಸಂದೇಶವನ್ನು ಈದುಲ್ ಅಝ್‌ಹಾ ನಮಗೆ ನೀಡುತ್ತದೆ. ತ್ಯಾಗ, ಐಕ್ಯ, ಸಮತ್ವ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಏಕದೈವ ಸಿದ್ಧಾಂತದ ಸಂದೇಶದೊಂದಿಗೆ ಈದುಲ್ ಅಝ್‌ಹಾ ಮುಸ್ಲಿಂ ಸಮುದಾಯಕ್ಕೆ ಆಹ್ಲಾದವನ್ನೂ ಆಶ್ವಾಸನೆಯನ್ನೂ ಈಯುತ್ತದೆ.

ಆಗಸ್ಟ್ ಮಾಸವನ್ನು ಹೆಸರಿಸಲಾಗಿದೆ. ಆ ಕಾಲದ ರಾಜರ ಮತ್ತು ಪ್ರವಾದಿಗಳ ಕಾಲಸೂಚಿ ಪಟ್ಟಿಗಳು ಮತ್ತು ಇತರ ಪ್ರಧಾನ ಸಂಭವಗಳ ವಿವರಣೆಗಳ ಅನುಸಾರ ಯೇಸು ಒಕ್ಟೋಬರ್ 1ನೇ ದಿನಾಂಕದಂದು ಜನಿಸಿದ್ದೆಂದು ತಿಳಿದುಬರುತ್ತದೆ.*

ಅನ್ನಳೆಂಬ ಪ್ರವಾದಿನಿ ಜೀವಿಸಿದ್ದ ಕಾಲವಾಗಿತ್ತೆಂದು ಹೇಳಲಾಗಿದೆ. (ಲೂಕ, 2:36, 38).

ಯೇಸುವಿಗೆ ಆರು ತಿಂಗಳು ಮೊದಲು ಸ್ನಾನಿಕನಾದ ಯೋಹಾನ ಜನಿಸಿದ್ದು. ಯೇಸು ಮತ್ತು ಯೋಹಾನ ಒಂದೇ ವರ್ಷದಲ್ಲೇ ಜನಿಸಿದ್ದರೆಂದು ಯೇಸುವಿನ ಜೀವಿತದ ಪ್ರಧಾನ ಸಂಭವಗಳಿಗೆ ಸಂಬಂಧಿಸಿದ ಬೇರೊಂದು ಆಧಾರದಿಂದ ವ್ಯಕ್ತಗೊಳ್ಳುತ್ತದೆ. ‡

ಆಗಸ್ಟಸ್ ಸೀಜರನ ಕಾಲದಲ್ಲಿ ಒಂದು ಅಕ್ಟೋಬರ್ ಮಾಸದಲ್ಲಿ ಯೇಸು ಜನಿಸಿದರೆಂದು ಸಮರ್ಥಿಸಲಾಗಿದೆ. ರೆವರೆಂಡ್ ತೋಮಸ್ ಡೇವಿಡ್ಸನ್ ಹೇಳುವುದು, ಒಕ್ಟೋಬರ್ ಮಾಸ ಎಂಬುದು ರೋಮನ್ ಕೆಲಂಡರಿನ ಎಂಟನೆಯ ಮಾಸ ಎಂದಾಗಿದೆ. * *

ಒಕ್ಟೋಬರ್ ಮಾಸಕ್ಕೆ ರೆವ: ತೋಮಸ್ ಡೇವಿಡ್ಸನ್ ನೀಡಿದ ವಿವರಣೆಯನುಸಾರ, ರೋಮನ್ ಕೆಲಂಡರಿನ ಎಂಟನೆಯ ಮಾಸ ಆಗಸ್ಟ್ ಮಾಸವೇ ಆಗಿದೆ. ಆ ಮಾಸಕ್ಕೆ ಆ ಹೆಸರು ಬಂದದ್ದು ರೋಮನ್ ಚಕ್ರವರ್ತಿಯಾಗಿದ್ದ ಆಗಸ್ಟಸ್ ಸೀಜರನ ಹೆಸರಿನ ಸ್ಮರಣಾರ್ಥವಾಗಿತ್ತು. ಮಿಸ್ಟರ್ ಎ. ಎಂ. ಮೆಕ್‌ಡೊನಾಲ್ಡ್, ಬಿ.ಎ. (ಓಕ್ಸನ್) ತನ್ನ ನಿಘಂಟಿನಲ್ಲಿ ಈ ಅಭಿಪ್ರಾಯಕ್ಕೆ ಸಹಮತ ಇತ್ತಿದ್ದಾರೆ.§

---

*Equipped for Eevery good work, P-163. Brookyln, New York.

‡ Ibid pp. 284.

* *20th Century Dictionary, Compiled by Rev. Thomas Davidson- W. R. Chamber Ltd., London.

§ Chambers Compact Dictionary, London, Edinburg pp. 40

ಐತಿಹಾಸಿಕ ಆಧಾರಗಳನ್ನು ಅವಲಂಬಿಸಿ ನೋಡುವಾಗಲೂ ಮತ್ತಿತರ ಹಲವು ಮಾರ್ಗಗಳ ಮೂಲಕವಿರುವ ದೃಢೀಕರಣಗಳನ್ನು ಅವಲಂಬಿಸಿ ನೋಡುವಾಗಲೂ ಯೇಸುಕ್ರಿಸ್ತರ ಜನನ ಯಾವುದೇ ರೀತಿಯಲ್ಲಿ ಡಿಸೆಂಬರಿನಲ್ಲಿ ಆಗಲಿಕ್ಕೆ ಸಾಧ್ಯವಿಲ್ಲವೆಂದು ಮನಗಂಡು ಆ ಮಹಾತ್ಮರು ಆಗಸ್ಟ್ ಮಾಸದಲ್ಲಿ ಜನಿಸಿದ್ದರೆಂಬ ವಿವೇಕಯುತ ನಿರ್ಧಾರಕ್ಕೆ ನಾವು ತಲಪುತ್ತೇವೆ.

ಮತವಿಶ್ವಾಸಗಳನ್ನು ಇಷ್ಟಬಂದಂತೆ ಬದಲಾಯಿಸುವುದು ದಿವ್ಯವಾದ ಒಂದು ಅಧಿಕಾರವೆಂದು ಭಾವಿಸಲ್ಪಡದಿರಲಿ ಎಂದು ನಾನು ಇಚ್ಛಿಸುತ್ತೇನೆ. ಧರ್ಮಸಾಹಿತ್ಯದ ಅನೇಕ ಸಂಗತಿಗಳನ್ನು ನಾವಿನ್ನೂ ತಿಳಿಯಬೇಕಷ್ಟೆ. ಒಟ್ಟಾರೆ, ಸಂದರ್ಭಾನುಸಾರ ಎಲ್ಲಾ ಸಂಗತಿಗಳನ್ನು ತಾರತಮ್ಯ ವಿವೇಚನೆಮಾಡುವುದೂ ಪರಿಶೋಧಿಸಿ ಮೌಲ್ಯಮಾಪನಮಾಡುವುದೂ ಅಗತ್ಯ.

ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸುವುದು ಅವಶ್ಯ. ಯೇಸುಕ್ರಿಸ್ತರ ದಿವ್ಯದೌತ್ಯದ ಕುರಿತು ನಮಗೆ ಯಾವುದೇ ಕೆಟ್ಟಭಾವನೆ ಇಲ್ಲ. ಖುರ್‌ಆನ್ ಹೇಳುತ್ತದೆ:

"ಹೇಳಿರಿ: ನಾವು ಅಲ್ಲಾಹನನ್ನೂ ನಮಗೆ ಅವತೀರ್ಣವಾದುದನ್ನೂ ಪ್ರವಾದಿಗಳಾದ ಇಬ್ರಾಹಿಂ, ಇಸ್ಮಾಯಿಲ್, ಇಸ್‌ಹಾಕ್, ಯಾಕೂಬ್ ಮತ್ತು ಅವರ ಸಂತತಿಗಳಿಗೆ; ಹಾಗೆಯೇ ಪ್ರವಾದಿಗಳಾದ ಮೂಸಾ, ಈಸಾ (ಯೇಸು) ಹಾಗೂ ಇತರ ಎಲ್ಲಾ ಪ್ರವಾದಿಗಳಿಗೆ ಅವತೀರ್ಣವಾದುದನ್ನೂ ನಂಬುತ್ತೇವೆ. ಅವರ ಮಧ್ಯೆ (ವಿಶ್ವಾಸದಲ್ಲಿ) ನಾವು ಯಾವ ವ್ಯತ್ಯಾಸವನ್ನೂ ಕಲ್ಪಿಸುವುದಿಲ್ಲ. ಅಲ್ಲಾಹನಿಗೆ ನಾವು ವಿಧೇಯರಾಗಿದ್ದೇವೆ." (3:85).

ಕ್ರೈಸ್ತಮತದ ಸ್ಥಾನವನ್ನೆತ್ತಲು ಪವಿತ್ರ ಖುರ್‌ಆನ್ ಹಲವು ಕೊಡುಗೆಗಳನ್ನಿತ್ತಿದೆ ಎಂಬುದು ಸತ್ಯ. ಯೇಸುಕ್ರಿಸ್ತರನ್ನೂ ಮಾತೆ ಮರಿಯಮರನ್ನೂ ಕುರಿತು ಗುರುತರವಾದ ಹಲವು ಆರೋಪಣೆಗಳನ್ನು ಯಹೂದ್ಯ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಯೇಸುಕ್ರಿಸ್ತರ ಜನನಕ್ಕೆ ಸಂಬಂಧಿಸಿದ ಯಹೂದರ ಮಿಥ್ಯಾರೋಪವನ್ನು ಖುರ್‌ಆನ್ ನಿಷೇಧಿಸಿದೆ:

"ಅವರ ಅವಿಶ್ವಾಸ ಹಾಗೂ ಮರಿಯಮಳಿಗೆದುರಾದ ಅವರ ಗುರುತರವಾದ ಆರೋಪಣೆಯ ಕಾರಣದಿಂದ..." (4:157).

ಹಝ್ರತ್ ಮರಿಯಂ ವ್ಯಭಿಚಾರಿಣಿಯಾಗಿದ್ದ ರೆಂಬ ಯಹೂದರ ಮಿಥ್ಯಾರೋಪದ ಬಗ್ಗೆ ಪವಿತ್ರ ಖುರ್ ಆನ್ ಇಲ್ಲಿ ಸೂಚಿಸಿರುತ್ತದೆ. (ರಾಸಿ).

ಹಝ್ರತ್ ಮರಿಯಂ ಮತ್ತು ಯೇಸುಕ್ರಿಸ್ತರ ವಿರುದ್ಧವಿರುವ ಎಲ್ಲಾ ದೋಷಾರೋಪಣೆಗಳನ್ನು ಖುರ್ ಆನ್ ಖಂಡಿಸಿದೆ:

1. "ಎಲೇ ಮರಿಯಂ, ಅಲ್ಲಾಹು ನಿನ್ನನ್ನು ಆರಿಸಿ, ಪರಿಶುದ್ಧೆಯನ್ನಾಗಿ ಮಾಡಿರುವನು ಹಾಗೂ ಎಲ್ಲಾ ಸ್ತ್ರೀಯರೆಡೆಯಲ್ಲಿ ನಿನಗೆ ಉತ್ತಮ ಸ್ಥಾನವನ್ನು ನೀಡಿರುವನು". (3:43).

2. "ಎಲೇ ಈಸಾ, ನಾನು ನಿನ್ನನ್ನು ಮೃತಪಡಿಸುವೆನು, ನನ್ನೆಡೆಗೆ ಎತ್ತುವೆನು ಮತ್ತು ನಿನ್ನನ್ನು ಅವಿಶ್ವಾಸಿಗಳಿಂದ (ಅವರ ಆರೋಪಣೆಗಳಿಂದ) ಪವಿತ್ರಗೊಳಿಸುವೆನು" (3:56).

ಕ್ರೈಸ್ತಲೋಕ ಪವಿತ್ರ ಖುರ್‌ಆನಿಗೆ ಋಣಿಯಾಗಿದೆ. ಯಹೂದಿಯರು ಯೇಸುಕ್ರಿಸ್ತರ ಮತ್ತು ಮಾತೆ ಮರಿಯಮರ ವಿರುದ್ಧವಾಗಿ ಹೊರಡಿಸಿದ ಹಲವಿಧ ಆರೋಪಣೆಗಳನ್ನು ನಿಷೇಧಿಸಿ ಅವರನ್ನು ಪರಿಶುದ್ಧರೆಂದು ಚಿತ್ರೀಕರಿಸಿಕೊಂಡಿರುವ ಖುರ್‌ಆನಿನ ಮಹತ್ವಾದ ಪ್ರಸ್ತಾವನೆಗಳು ಇಲ್ಲದಿರುತ್ತಿದ್ದರೆ ಕ್ರೈಸ್ತ ತತ್ವದ ಎರಡು ಸ್ತಂಭಗಳಂತಿರುವ ಈ ಇಬ್ಬರು ವ್ಯಕ್ತಿಗಳ ಪರಿಶುದ್ಧತೆಯನ್ನು ಘೋಷಿಸುವರೆ ಬೇರೊಂದು ದಿವ್ಯಗ್ರಂಥ ಇರುವುದಿಲ್ಲ.

ಪೆಲೆಸ್ತೀನದಲ್ಲಿ ಹಣ್ಣಾದ ಖರ್ಜೂರದ ಗೊನೆಗಳಿಂದ ಮರಗಳು ತುಂಬಿನಿಲ್ಲುವ ಒಂದು ಋತುವಿನಲ್ಲಿ ಈಸಾನಬಿಯ (ಯೇಸುಕ್ರಿಸ್ತರ) ಜನನ ಉಂಟಾಯಿತೆಂದು ಖುರ್ ಆನ್ ಹೇಳುತ್ತದೆ. (19:24–26).

ಪೆಲೆಸ್ತೀನದಲ್ಲಿ ಖರ್ಜೂರಗಳು ಹಣ್ಣಾಗುವ ಕಾಲದಲ್ಲಿ ಯೇಸುಕ್ರಿಸ್ತರ ಜನನವುಂಟಾಯಿತೆಂಬ ಖುರ್‌ಆನಿನ ಈ ಪ್ರಸ್ತಾವನೆ ಆಧುನಿಕ ಸಂಶೋಧಕ ವಿದ್ವಾಂಸರಿಗೆ ಬಹಳ ಸಹಾಯಕವಾಗಿದೆ.

ಯಹೂದಿಯರ ಪಂಚಾಂಗದ ಎಲುಳ್ (Elule) ಮಾಸದಲ್ಲಿ ಖರ್ಜೂರಗಳು ಹಣ್ಣಾಗುತ್ತವೆಯೆಂದೂ ಅದು ರೋಮನ್ ಕೆಲಂಡರಿನ ಆಗಸ್ಟ್–ಸೆಪ್ಟೆಂಬರ್ ಮಾಸದ ಕಾಲವೆಂದೂ 'ವರ್ಷ' (The Year) ಎಂಬ ಶೀರ್ಷಿಕೆಯಲ್ಲಿ ಡಾ। ಜೋನ್ ಡಿ. ಡೇವಿಡ್ ಹೇಳುತ್ತಾರೆ.*

*Dictionary of the Bible.

"ಮಾಸಗಳೆಲ್ಲಾ ಚಾಂದ್ರಮಾಸಗಳಾಗಿದ್ದು, ಸೂರ್ಯ ವರ್ಷವನ್ನನುಸರಿಸಿ ಅವುಗಳನ್ನು ಕ್ರಮಪಡಿಸುವುದರಿಂದಾಗಿ ಯಹೂದ್ಯ ವರ್ಷವನ್ನು ಸೌರಚಾಂದ್ರ ವರ್ಷ(Luni-solar Year)ವೆಂದು ಹೇಳಲಾಗುತ್ತದೆ" ಎಂದು ಎಸ್. ಪೀಕ್ ಎಂ. ಎ. ಡಿ. ಡಿ. ಪ್ರಸ್ತಾವಿಸಿದ್ದು ಗಮನಾರ್ಹವಾಗಿದೆ.**

ಹೀಗೆ ಯಹೂದ್ಯ ಕೆಲಂಡರಿನ ಸೌರಚಾಂದ್ರ ವರ್ಷದಲ್ಲಿ ಮುಸ್ಲಿಂ ಪಂಚಾಂಗದ ಚಾಂದ್ರಮಾಸಗಳಂತೆ ಋತುಗಳು (Seasons) ವ್ಯತ್ಯಾಸವಾಗದ ರೀತಿಯಲ್ಲಿ ಮಾಸಗಳನ್ನು ಗಣಿಸಿ ಕ್ರಮಪ್ರಕಾರ ನಿರ್ಣಯಿಸಲಾಗುತ್ತದೆ.

ಒಟ್ಟಾರೆ, ಯಹೂದ್ಯರ ಎಲುಳ್ ಮಾಸ ಎಲ್ಲಾ ವರ್ಷ ಆಗಸ್ಟ್–ಸೆಪ್ಟೆಂಬರ್‌ನಲ್ಲೇ ಬರುತ್ತದೆ.‡

ಬಿಷಪ್ ಬಾರ್ನಸ್ ಹೇಳುತ್ತಾರೆ: "ಯೇಸುವಿನ ಜನನ ಡಿಸೆಂಬರ್ 25ಕ್ಕೆ ಆಗಿತ್ತೆಂದು ನಂಬುವುದಕ್ಕೆ ಯಾವ ಆಧಾರವೂ ಇಲ್ಲ. ಲೂಕದಲ್ಲಿ ಹೇಳಿದ ಜನನ ಕಥೆಯನ್ನು ನಂಬುವುದಾದರೆ, ಎಂದರೆ ಬೆತ್ಲಹೇಮಿಗೆ ಸಮೀಪ ಹೊಲಗಳಲ್ಲಿ ಕುರುಬರು ರಾತ್ರಿಯಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿರುವಾಗ ಎಂಬುದು ಸರಿಯೆಂದಾದರೆ, ಯೇಸುವಿನ ಜನನ ಶಿಶಿರ ಋತುವಿನಲ್ಲಿ ಸಂಭವಿಸಲೇ ಇಲ್ಲ; ಯೂದಾಯದ ಗುಡ್ಡಪ್ರದೇಶಗಳಲ್ಲಿ ಅತಿಶೈತ್ಯವಿರುವ, ಹಿಮಪಾತ ಸಹ ಉಂಟಾಗಲೆಡೆಯಿರುವ ಕಾಲವಾಗಿತ್ತು ಅದು.§§

ಡಿಸೆಂಬರ್ 25, ಅಜೇಯನಾದ ಸೂರ್ಯದೇವನಾದ "ಮಿತ್ರ"ನಿಗೆ ಸಂಬಂಧಿಸಿದ ಪರ್ಷಿಯನ್ ಮತ ವಿಶ್ವಾಸದಿಂದ ಬಂದುದೆಂದು ಬಿಷಪ್ ಬಾರ್ನಸ್ ಮುಂದುವರಿದು ಹೇಳುತ್ತಾರೆ: "ದಕ್ಷಿಣಾಯನದ ನಂತರ ಸೂರ್ಯನು ಮತ್ತೊಮ್ಮೆ ಪೂರ್ಣಪ್ರಕಾಶದಿಂದ ಬೆಳಗುವ ಸಮಯ ಅವನ ಉತ್ಸವವನ್ನು ಆಚರಿಸಲಿಕ್ಕೆ ತಕ್ಕುದಾದ ಸಮಯವಾಗಿತ್ತು".

ಯೇಸುಕ್ರಿಸ್ತರು ಡಿಸೆಂಬರ್ 25ರಂದು ಜನಿಸಿರಲಿಲ್ಲವೆಂಬುದು ವ್ಯಕ್ತ. ಆದ್ದರಿಂದ ಕ್ರಿಸ್‌ಮಸನ್ನು ಡಿಸೆಂಬರಿಗೆ ಬದಲು ಆಗಸ್ಟ್ ತಿಂಗಳಿನ ಯಾವುದಾದರೊಂದು ದಿನಕ್ಕೆ ಬದಲಾಯಿಸಿ ನಿಶ್ಚಯಿಸಬೇಕಾಗಿದೆ. ●

**Commentry of the Bible. pp. 117-118.

‡Commentary of the Bible - pp. 117.

§§Rise of Christianity - pp. 79.

# ಇಸ್ಲಾಮಿಕ ಮನೋಭಾವ

—ಡಾಕ್ಟರ್ (ಮಿಸ್ಸೆಸ್) ಲೋರಾ ವಿ. ವಾಗ್ಲಿಯೇರಿ.

ಇಸ್ಲಾಮಿಕ ಮನೋಭಾವ ವ್ಯಕ್ತಿತ್ವವಿಕಸನಕ್ಕೆ ಅಪಾಯಕಾರಿಯೆಂದು ಕೆಲವು ಪಾಶ್ಚಿಮಾತ್ಯ ಲೇಖಕರು ಆರೋಪಿಸಿದ್ದಾರೆ. ದೇವರಿಗೆ ಪೂರ್ಣ ವಿಧೇಯತೆ ಮತ್ತು ದೇವರಿಗೆ ಪೂರ್ಣ ಶರಣಾಗತಿಯನ್ನು 'ಇಸ್ಲಾಮ್' ಎಂಬ ಶಬ್ದವೇ ಸೂಚಿಸುತ್ತದೆಯೆಂದೂ ದೇವರನ್ನು ಇಷ್ಟುಮಟ್ಟಿಗೆ ಆಶ್ರಯಿಸಿರುವ ತನ್ನನ್ನು ಸಂಪೂರ್ಣ ದೇವರಿಗೆ ಅರ್ಪಿಸಿರುವ, ತನ್ನೆಲ್ಲಾ ಸ್ವಯಂ ನಿರ್ಣಯ ಶಕ್ತಿಯನ್ನೆಲ್ಲಾ ಅವನಿಗೆ ಬೇಕಾಗಿ ತ್ಯಜಿಸಿರುವ ವ್ಯಕ್ತಿಗೆ ತನ್ನ ಮನಸ್ಸಾಕ್ಷಿಯ ಮೇಲೆ ಪೂರ್ಣ ನಿಯಂತ್ರಣವಿರಿಸಿರುವ ವ್ಯಕ್ತಿಯಷ್ಟು ಅತ್ಯುತ್ಸಾಹ ಸತ್ಕೃತ್ಯಗಳನ್ನು ಮಾಡುವುದರಲ್ಲಿ ಇರಲಾರದೆಂದು ಇವರು ಆರೋಪಿಸುತ್ತಾರೆ.

ಪೈಗಂಬರ್ ಮುಹಮ್ಮದರ ಅನುಯಾಯಿಗಳ ಆತ್ಮಗಳನ್ನು ಪ್ರಜ್ವಲಿಸುವ ಉನ್ನತ ನೈತಿಕ ಮೌಲ್ಯಗಳ ಕುರಿತು ನಾವು ವಿವರಿಸುವ ಮೊದಲು ಮೇಲಿನ ಆರೋಪವನ್ನು ಯುರೋಪಿಯನ್ ಪಂಡಿತರಾದ ಗೋಲ್ಡ್ ಝಿಹರ್ (Goldzihar)ರ ಮಾತುಗಳಿಂದ ಉತ್ತರಿಸಲಿಚ್ಛಿಸುತ್ತೇವೆ:—

"......ವ್ಯತ್ಯಾಸವುಂಟಾಗದ ದೈವಿಕ ನಿಯಮಗಳಿಗೆ ಪಾತ್ರನಾಗಿರುವನೆಂಬ ದೃಢ ವಿಶ್ವಾಸ ಮತ್ತು ದೇವರ ಅತೀಂದ್ರಿಯ ಸ್ವರೂಪದ ವಿಶ್ವಾಸ ದೇವರನ್ನು ಭಕ್ತಿ, ಸದ್ಗುಣ, ಸತ್ಕೃತ್ಯಗಳಿಂದ ಗಳಿಸಲು ಮತ್ತು ಆತನ ದಯೆಗೆ ಪಾತ್ರನಾಗುವಂತೆ ಮಾಡುವುದಕ್ಕೆ ತಡೆಯಾಗಿದೆಯಂತೆ! ತನ್ನ ನ್ಯೂನತೆಗಳನ್ನೂ ಭಾವಾವೇಶಗಳನ್ನೂ ತಿಳಿದುಕೊಂಡು ವಿನೀತನಾಗಿ ಶಕ್ತಿ ಮತ್ತು ಪರಿಪೂರ್ಣತೆಯ ಅತ್ಯಂತ ಶ್ರೇಷ್ಠ ಮೂಲಸ್ಥಾನವಾದ ದೇವರನ್ನು ಪರಿಪೂರ್ಣವಾಗಿ ಪೂಜಿಸುವವನ ಆಂತರಿಕ ಭಕ್ತಿಯನ್ನು ವಿವಿಧ ಧರ್ಮಗಳ ಸೈದ್ಧಾಂತಿಕ ಸೂತ್ರಗಳು ಪರಿವರ್ತನಗೊಳಿಸಬಲ್ಲುದೇ?"

ಇಸ್ಲಾಮ್ ನೈತಿಕ ಪರಿಪೂರ್ಣತೆಗೆ ತಡೆಯಾಗಿರಲಿಲ್ಲ ಮಾತ್ರವಲ್ಲದೆ ಅದು ಸತ್ಕೃತ್ಯಗಳನ್ನು ಮಾಡಲು ಪ್ರೇರೇಪಿಸಲು ಯೋಗ್ಯವಾದ ಶಕ್ತಿಯನ್ನು ಪಡೆದಿದ್ದುದರಿಂದ ಅದು ಇತರ ಧರ್ಮಗಳಿಗಿಂತ ಮುಂಚಿತವಾಗಿಯೇ ದೇವರನ್ನು ಗಳಿಸಲಿರುವ ಮಾರ್ಗವನ್ನು ಕಲಿಸಲಿಕ್ಕೂ ಜನರು ದೇವರ ಸಾಮಿಪ್ಯ ಪಡೆಯುವಂತೆ ಮಾಡಲಿಕ್ಕೂ ಸಮರ್ಥವಾಯಿತು. ಪೈಗಂಬರ್ ಮುಹಮ್ಮದ್, ತನ್ನ ಅಧ್ಯಾಪಕರೆಂದು ಪರಿಗಣಿಸಿದ್ದ ಪ್ರವಾದಿಗಳು ಬೋಧಿಸಿದ ಇತರ ಏಕದೇವವಾದಿ ಮತಗಳಿಗಿಂತ ಇಸ್ಲಾಮ್ ತನ್ನ ಅನುಯಾಯಿಗಳ ನೈತಿಕ ಔನ್ನತ್ಯದ ಕುರಿತು ಕಮ್ಮಿ ಆಸಕ್ತವಾಗಿರಲಿಲ್ಲ. ಇಸ್ಲಾಮ್ ಮಾನವರ ದೌರ್ಬಲ್ಯಗಳನ್ನು ಪರಿಗಣಿಸಿ ಮಾನವರಿಗೆ ಸಾಧಿಸಲು ಸುಲಭವಾದ ಲಕ್ಷ್ಯಗಳನ್ನು ತೋರಿಸಿಕೊಟ್ಟುದರಿಂದ ಅದು ಇತರ ಮತಗಳಿಗಿಂತ ಹೆಚ್ಚು ತನ್ನ ಅನುಯಾಯಿಗಳ ನೈತಿಕ ಉನ್ನತಿಯ ಕುರಿತು ಆಸಕ್ತವಾಗಿದ್ದಿತೆಂದು ತಿಳಿಯಬಹುದು. ಯಹೂದಿ ಮತ ಮತ್ತು ಕ್ರೈಸ್ತ ಮತ ಮನುಷ್ಯನ ನೈತಿಕ ಜೀವನದ ಸರ್ವೋನ್ನತ ಗುರಿಯೆಂದು ಸೂಚಿಸುವ ಕಾರ್ಯಗಳನ್ನು ಇಸ್ಲಾಮ್ ಧರ್ಮ ತನ್ನ ಅನುಯಾಯಿಗಳ ಮುಂದಿರಿಸಿ ಅದು ಇಸ್ಲಾಮ್ ಮತಾನುಯಾಯಿಗಳ ಜೀವಿತೋದ್ದೇಶಗಳಾಗಿರಬೇಕೆಂದು ಸೂಚಿಸಿದೆ. ಎಲ್ಲಾ ಜೀವಂತ ಪ್ರಾಣಿಗಳಿಗೆ ಕರುಣೆದೋರುವುದು, ಪರರನ್ನು ಅರಿತುಕೊಳ್ಳುವುದು, ಕ್ಷಮಾಪಣೆ, ಸರಳತೆ, ಸಾಮಾಜಿಕ ಸಂಪರ್ಕಗಳಲ್ಲಿ ಯೋಗ್ಯತೆ, ಕಷ್ಟಗಳ ಸ್ವೀಕಾರ ಇತ್ಯಾದಿ ಗಳಿಸಬೇಕಾದ ನೈತಿಕ ಮೌಲ್ಯಗಳ ಕುರಿತು ಇಸ್ಲಾಮ್ ಬೋಧಿಸಿದೆ. ಸತ್ಕೃತ್ಯಗಳ ಕುರಿತು ಒತ್ತಿ ಹೇಳುವ ಖುರ್‌ಆನ್ ವಚನಗಳು ಸಾವಿರದಷ್ಟಿವೆ. ಆದರೆ ಈ ವಿಷಯದ ಕುರಿತು ದೀರ್ಘವಾಗಿ ಇಲ್ಲಿ ಪ್ರತಿಪಾದಿಸಲು ಸಾಧ್ಯವಿಲ್ಲದಿರುವುದರಿಂದ ಕೆಲವನ್ನು ಆರಿಸಿ ಕೊಟ್ಟಿರುತ್ತೇವೆ:

"ಆ ಉನ್ನತಿ ಏನೆಂದು ನಿನಗೆ ಗೊತ್ತಿದೆಯೋ?
ಅದು ದಾಸನ ವಿಮೋಚನೆ

ಅಥವಾ ಹಸಿವೆಯದಿನ ಉಣಬಡಿಸುವುದು
ಬಂಧುವಾದ ಅನಾಥನಿಗೆ
ಅಥವಾ ಧೂಳು ಮುಸುಕಿದ ಬಡವನಿಗೆ"

(90:14–17)

"ನಾನು ನಿಮಗೆ ಒಂದು ಪ್ರಜ್ವಲಿಸುತ್ತಿರುವ ಬೆಂಕಿಯ ಕುರಿತು ಮುನ್ನೆಚ್ಚರಿಕೆ ಕೊಡುತ್ತೇನೆ. ಅದರಲ್ಲಿ ಅತ್ಯಂತ ದುಷ್ಟನಲ್ಲದೆ ಯಾರೂ ಪ್ರವೇಶಿಸಲಿಕ್ಕಿಲ್ಲ; ಆತನು ಸತ್ಯವನ್ನು ಅಲ್ಲಗಳೆದು ಬೆನ್ನುತಿರುಗಿಸಿ ಹೋಗುವವನು. ಭಕ್ತನು ಆ ಅಗ್ನಿಯಿಂದ ದೂರವಿರಿಸಲ್ಪಡುವನು; ಆತನು ತನ್ನ ಐಶ್ವರ್ಯವನ್ನು ಪರಿಶುದ್ಧವಾಗಿರಿಸಲು ದಾನ ಮಾಡುವನು; ನೀಡಿದ ದಾನಕ್ಕೆ ಪ್ರತಿಫಲವನ್ನು ಆತನು ಇಚ್ಛಿಸುವುದಿಲ್ಲ; ಆತನು ಸರ್ವೋನ್ನತನಾದ ತನ್ನ ದೇವರ ತೃಪ್ತಿಗಾಗಿ ಮಾತ್ರ ನೀಡುತ್ತಾನೆ. ಖಂಡಿತವಾಗಿಯೂ ದೇವರು ಆತನಿಂದ ತೃಪ್ತನಾಗುವನು".

(92:15–22)

"ಅವರು ದೇವರ ಪ್ರೀತಿಯನ್ನು ಗಳಿಸಲಿಕ್ಕಾಗಿ ಬಡವರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಆಹಾರ ಕೊಡುತ್ತಾರೆ. ಅವರು ಹೇಳುವರು: 'ನಾವು ದೇವರ ತೃಪ್ತಿ ಗಳಿಸಲಿಕ್ಕಾಗಿ ಮಾತ್ರ ನಿಮಗೆ ಉಣಬಡಿಸುತ್ತೇವೆ. ನಾವು ನಿಮ್ಮಿಂದ ಪ್ರತಿಫಲವನ್ನಾಗಲೀ ಕೃತಜ್ಞತೆಯಾಗಲೀ ಬಯಸುವುದಿಲ್ಲ".

(76:9-10).

"ದೇವರಿಂದ ಕ್ಷಮಾಪಣೆ ಕೇಳಲಿಕ್ಕಾಗಿ ಮತ್ತು ಆಕಾಶಭೂಮಿಗಳಷ್ಟು ಬೆಲೆಬಾಳುವ ಸ್ವರ್ಗವನ್ನು ಗಳಿಸಲಿಕ್ಕಾಗಿ ಮುನ್ನುಗ್ಗಿರಿ. ಆ ಸ್ವರ್ಗ ಭಕ್ತರಿಗೆ ಸಿದ್ಧಗೊಳಿಸಿರಿಸಲಾಗಿದೆ. ಅವರು ಐಶ್ವರ್ಯದ ಕಾಲದಲ್ಲಿಯೂ ಬಡತನದ ಕಾಲದಲ್ಲಿಯೂ ದೇವರ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ. ಅವರು ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆಕೊಡುವವರೂ ಆಗಿದ್ದಾರೆ. ದೇವರು ಸತ್ಕೃತ್ಯ ಅನುಷ್ಠಿಸುವವರನ್ನು ಪ್ರೀತಿಸುತ್ತಾನೆ".

(3:134–135)

"ನೀವು ಪೂರ್ವ ಅಥವಾ ಪಶ್ಚಿಮಾಭಿಮುಖರಾಗುವುದು ಸತ್ಕಾರ್ಯವಲ್ಲ. ದೇವರಲ್ಲಿ, ಅಂತ್ಯದಿವಸದಲ್ಲಿ, ದೇವದೂತರಲ್ಲಿ, ಗ್ರಂಥದಲ್ಲಿ, ಪ್ರವಾದಿಗಳಲ್ಲಿ ವಿಶ್ವಾಸವಿರಿಸಿ ದೇವರ ಪ್ರೀತಿಗಾಗಿ ಸಂಬಂಧಿಕರಿಗೂ ಅನಾಥರಿಗೂ ಬಡವರಿಗೂ ಪ್ರಯಾಣಿಕರಿಗೂ ದಾನ ಕೇಳುವವರಿಗೂ ಸೆರೆಯಾಳುಗಳನ್ನು ವಿಮೋಚಿಸಲಿಕ್ಕಾಗಿಯೂ ವ್ಯಯಿಸುವವರು ಸತ್ಕರ್ಮಿಯಾಗಿದ್ದಾರೆ. ಅಂತಹ ಜನರು ಪ್ರಾರ್ಥನೆಯನ್ನು ಸರಿಯಾಗಿ ಅನುಷ್ಠಿಸುತ್ತಾರೆ, ಝಕಾತ್ ಕೊಡುತ್ತಾರೆ, ಅವರು ಒಪ್ಪಂದ ಮಾಡಿದರೆ ಅದನ್ನು ಪೂರ್ತಿಗೊಳಿಸುತ್ತಾರೆ. ಅವರು ಕಷ್ಟಕಾಲದಲ್ಲಿಯೂ ಅನಾರೋಗ್ಯ ಪರಿಸ್ಥಿತಿಯಲ್ಲೂ ಯುದ್ಧಕಾಲದಲ್ಲಿಯೂ ಸಹನೆಯುಳ್ಳವರಾಗಿರುತ್ತಾರೆ. ಇವರೇ ಸತ್ಯವಂತರು; ಇವರೇ ಯಥಾರ್ಥ ಭಕ್ತರು". (2:178).

"ನೀವು ಸತ್ಕಾರ್ಯ ಮತ್ತು ಭಕ್ತಿಯಲ್ಲಿ ಒಬ್ಬರನ್ನೊಬ್ಬರು ಸಹಾಯ ಮಾಡಿರಿ. ಪಾಪ ಮತ್ತು ಮೇರೆ ಮೀರಿದ ವರ್ತನೆಗಳಲ್ಲಿ ಒಬ್ಬರನ್ನೊಬ್ಬರು ಸಹಾಯ ಮಾಡದಿರಿ ದೇವರಿಗೆ ಭಯಪಡಿರಿ. ದೇವರು ಕಠಿಣವಾಗಿ ಶಿಕ್ಷಿಸುವನು". (5:3).

ಇಸ್ಲಾಮ್ ಸತ್ಕೃತ್ಯಗಳ ಮೌಲ್ಯವನ್ನು ಒತ್ತಿಹೇಳಿದೆ. ಸತ್ಕೃತ್ಯಗಳು ಮಾನವನಿಗೆ ತನ್ನ ನೆರೆಕರೆಯಲ್ಲಿರುವವರ ಬಗ್ಗೆ ಇರುವ ಅನುಕಂಪದಿಂದ ಉದ್ಭವಿಸುತ್ತವೆ. ಅದೇ ಪ್ರಕಾರ ದೇವರ ದಯಾಗುಣವನ್ನು ಸಹ ಇಸ್ಲಾಮ್ ಒತ್ತಿ ಹೇಳಿದೆ. ಅನಾಥರು, ಬಡವರು, ಬಲಹೀನರು, ದುರದೃಷ್ಟಶಾಲಿಗಳು ತ್ವರಿತ ಸಂರಕ್ಷಣೆಗೆ ಅರ್ಹರು. ಭ್ರಾತೃತ್ವ ಮತ್ತು ದಾನ ಧರ್ಮ ಮುಸ್ಲಿಮ್ ಸಮಾಜದ ಎರಡು ಮೂಲೆಗಲ್ಲುಗಳೆಂದು ಇಸ್ಲಾಮ್ ಘೋಷಿಸಿದೆ. ಮೂಢನಂಬಿಕೆಯ ಕಾಲವನ್ನು ಇಸ್ಲಾಮಿನ ಕಾಲಕ್ಕೆ ಹೋಲಿಸಿ ನೋಡಿದರೆ ಇದು ದೊಡ್ಡದಾದೊಂದು ಗಳಿಕೆಯೆಂದು ತಿಳಿಯಬಹುದು. ಇಸ್ಲಾಮಿನ ಆಗಮನದ ಮೊದಲು ರಾಜ್ಯದ ಆಡಳಿತೆ ವಹಿಸಿದ ಕೆಲವೇ ಮಂದಿ ಅಹಂಭಾವದಿಂದಲೂ ದುರಾಸೆಯಿಂದಲೂ ಬಡವರನ್ನು ಅವಹೇಳನಗೊಳಿಸಿ ಪೀಡಿಸುತ್ತಿದ್ದರು. ಆಗ ವ್ಯಾಪಾರ ವ್ಯವಹಾರಗಳಲ್ಲಿ ಅಪ್ರಮಾಣಿಕತೆ ಮುಂದುವರಿಯುತ್ತಾ ಇದ್ದಿತು. ನೆರೆಕರೆಯವರ ಕುರಿತು ಕರ್ತವ್ಯ ನಿರ್ವಹಿಸುವುದರ ಕುರಿತು ಯಾವುದೇ ಗಮನ ಕೊಡಲಾಗುತ್ತಿರಲಿಲ್ಲ.

ನ್ಯಾಯದ ಕುರಿತು ವಿವರಿಸಲಾದ ಅನೇಕ ಖುರ್ ಆನ್ ವಚನಗಳಲ್ಲಿ ಕೇವಲ ಎರಡನ್ನು ಇಲ್ಲಿ ಉದ್ಧರಿಸುತ್ತೇವೆ:—

"......ನೀನು ಮನುಷ್ಯರ ಮಧ್ಯೆ ನ್ಯಾಯದಿಂದ ತೀರ್ಮಾನ ಮಾಡು. ನಿನ್ನ ಸ್ವಂತ ಅಭಿಲಾಷೆಯನ್ನು

ಅನುಸರಿಸಿ ದೇವರ ದಾರಿಯನ್ನು ತೊರೆಯುವಂತಾಗದಿರಲಿ". (38:27).

"ನೀನು ವಿಶ್ವಸ್ತನಿಧಿಯನ್ನು ಅದರ ಹಕ್ಕುದಾರರಿಗೆ ಕೊಡಬೇಕೆಂದು ದೇವರು ಆಜ್ಞಾಪಿಸುತ್ತಾನೆ. ನೀನು ಮನುಷ್ಯರ ಮಧ್ಯೆ ತೀರ್ಮಾನ ಮಾಡುವಾಗ ನ್ಯಾಯ ಪಾಲನೆ ಮಾಡಬೇಕು''. (4:59).

ಈ ಕೆಳಗಿನ ಖುರ್‌ಆನ್ ವಚನಗಳು ಮನುಷ್ಯತ್ವವನ್ನು ಯಾವ ರೀತಿಯಲ್ಲಿ ಸ್ಫೂರ್ತಿಗೊಳಿಸಿವೆ ಎಂಬುವನ್ನು ಪ್ರತಿಯೊಬ್ಬರು ಸ್ವಯಂ ನಿರ್ಣಯಿಸಬಹುದು:

"ನಿನ್ನ ಪಾಲಕನಾದ ದೇವರು ಈ ರೀತಿ ಆಜ್ಞಾಪಿಸಿರುವನು: ಆತನನ್ನು ಮಾತ್ರ ಆರಾಧಿಸಬೇಕು. ನಿನ್ನ ತಂದೆ ತಾಯಿಗಳಿಗೆ ಕರುಣೆದೋರಬೇಕು. ಅವರಲ್ಲಿ ಒಬ್ಬರು ಅಥವಾ ಇಬ್ಬರು ವೃದ್ಧಾಪ್ಯವನ್ನು ನಿನ್ನ ಜೀವಿತ ಕಾಲದಲ್ಲಿ ಪಡೆದರೆ ಅವರಿಗೆ ಅತೃಪ್ತಿ ಸೂಚಿಸುವ ಶಬ್ದವನ್ನಾಗಲೀ ಅವರನ್ನು ನಿಂದಿಸುವ ಮಾತಾಗಲೀ ನುಡಿಯಬೇಡ. ಅವರೊಡನೆ ಬಹಳ ವಿನಯದಿಂದ ಮಾತಾಡು.

ಅವರ ಮೇಲೆ ಕರುಣೆದೋರಿ ವಿನಯದ ರೆಕ್ಕೆಗಳನ್ನು ಅವರಿಗಾಗಿ ತಗ್ಗಿಸು. 'ನನ್ನನ್ನು ಅವರು ಬಾಲ್ಯ ಕಾಲದಲ್ಲಿ ಸಂರಕ್ಷಿಸಿದಂತೆ ನೀನು ಅವರ ಮೇಲೆ ದಯೆದೋರು' ಎಂದು ಪ್ರಾರ್ಥಿಸು. (17:24-25).

ಪವಿತ್ರ ಖುರ್‌ಆನಿನ ಕೆಲವು ವಚನಗಳು ಕ್ರೈಸ್ತರು ತಮ್ಮ ಧರ್ಮದ ನೈತಿಕತೆಯ ಭಾರವತ್ತಾದ ಉಪದೇಶವೆಂದು ಅಭಿಮಾನಿಸಬಹುದಾದ ಬೈಬಲಿನ ಉಪದೇಶಗಳನ್ನು ನೆನಪಿಸುವಂತೆ ಮಾಡುತ್ತವೆ:

"ನೀನು ಕೆಡುಕನ್ನು ಒಳ್ಳೆಯದರ ಮೂಲಕ ದೂರೀಕರಿಸು". (23:97).

ನಾವು ಖುರ್‌ಆನಿನ ವಚನಗಳನ್ನು ಉದ್ಧರಿಸುತ್ತಾ ಹೋಗಬಹುದು. ಅವುಗಳೆಲ್ಲಾ ಅತಿ ಶ್ರೇಷ್ಠ ಉಪದೇಶಗಳನ್ನು ಹೊಂದಿವೆ. ಆದರೆ ಎಲ್ಲಾ ಉಪದೇಶಗಳಿಗಿಂತ ಹೆಚ್ಚು ಬಲವತ್ತಾದ ಒಂದು ಸಿದ್ಧಾಂತ ಸದ್ಗುಣಗಳನ್ನು ಪ್ರೇರೇಪಿಸುವುದರಲ್ಲಿ ಹೆಚ್ಚು ಶಕ್ತಿಯುತವಾಗಿದೆ. ಈ ಲೋಕದ ಜೀವಿತವು ಪರಲೋಕದ ಜೀವಿತಕ್ಕೆ ಬೀಜದೋಪಾದಿಯಲ್ಲಿದೆಯೆಂಬುದೇ ಈ ಮಹತ್ತಾದ ಸಿದ್ಧಾಂತವಾಗಿದೆ. ಈ ಲೋಕದಲ್ಲಿ ನಡೆಸಲಾಗುವ ಎಲ್ಲಾ ಸತ್ಕರ್ಮಗಳು ಪರಲೋಕದಲ್ಲಿ ಅತ್ಯಂತ ಹೆಚ್ಚು ಸಂತೋಷದ ಗಳಿಕೆಗೆ ಸಹಾಯ ಮಾಡುತ್ತವೆ. ದೇವರ ಸಾಮಿಪ್ಯ ಗಳಿಸಲು ಹೃದಯದ ಪರಿಶುದ್ಧತೆ ಮತ್ತು ಕೆಲಸಗಳ ಕುರಿತು ಪ್ರಾಮಾಣಿಕತೆ ಅಗತ್ಯ. ದೇವರ ಮುಂದೆ ಪ್ರತಿಯೊಬ್ಬನೂ ಅವನವನ ಕೃತ್ಯಗಳ ಪರಿಣಾಮದೊಂದಿಗೆ ನಿಲ್ಲಿಸಲ್ಪಡುವನು— ಎಂಬುದೇ ಈ ಸಿದ್ಧಾಂತದ ಸಾರವಾಗಿದೆ.

"ಒಂದು ಅಣುವಿನಷ್ಟು ಒಳಿತನ್ನು ಯಾರಾದರೂ ಮಾಡಿದರೆ ಅದರ ಫಲವನ್ನು ಕಾಣುವನು.

ಒಂದು ಅಣುವಿನಷ್ಟು ಕೆಡುಕನ್ನು ಯಾರಾದರೂ ಮಾಡಿದರೆ ಅದರ ಫಲವನ್ನೂ ಕಾಣುವನು. (99:8-9).

"ದೇವರು ಒಂದು ಅಣುವಿನಷ್ಟು ಅನ್ಯಾಯ ಮಾಡುವುದಿಲ್ಲ. ಯಾರಾದರೂ ಸತ್ಕೃತ್ಯ ಮಾಡಿದರೆ ಅದನ್ನು ಹಲವು ಬಾರಿ ಹೆಚ್ಚಿಸಿ ಅದರ ಪ್ರತಿಫಲವನ್ನು ಅಪಾರವಾಗಿ ಕೊಡುತ್ತಾನೆ". (4:41).

ದುಷ್ಟರಿಗೂ ಕೆಟ್ಟದನ್ನು ಮಾಡುವವರಿಗೂ ಭಯಂಕರವೂ ವೇದನೆಯನ್ನುಂಟುಮಾಡುವಂತಹದೂ ಆದ ಶಿಕ್ಷೆಗಳನ್ನು ಕಾದಿರಿಸಲಾಗಿದೆ. ಕೊನೆಯ ದಿನದ ನ್ಯಾಯ ತೀರ್ಮಾನವನ್ನು ಭೀಕರವಾಗಿ ಚಿತ್ರಿಸಲಾಗಿದೆ. ಪ್ರಪಂಚದ ಸರ್ವೋನ್ನತ ನ್ಯಾಯಾಧಿಪತಿಯಾದ ದೇವರು ಒಳ್ಳೆಯವರಿಗೆ ನಾಶಗೊಳಿಸಲ್ಪಟ್ಟ ಪ್ರಪಂಚವನ್ನು ತೊರೆದು ತನ್ನ ದಯಾಮಯವಾದ ಹೃದಯದಲ್ಲಿ ಆಶ್ರಯ ಪಡೆಯಲು ಆಜ್ಞಾಪಿಸುವನು. ಪ್ರವಾದಿಗಳ ಎಚ್ಚರಿಕೆಗಳಿಗೆ ಗಮನ ಕೊಡದವರನ್ನು ಉರಿಯುತ್ತಿರುವ ನರಕಾಗ್ನಿಗೆ ನೂಕುವನು.

ಅವಿಶ್ವಾಸಿಗಳು ಇಸ್ಲಾಮಿನ ಕುರಿತು ಹೊರಡಿಸಿರುವ ಇನ್ನೊಂದು ಆರೋಪವನ್ನು ಇಲ್ಲಿ ಅಲ್ಲಗಳೆಯಬೇಕಾಗಿದೆ. ಇಸ್ಲಾಮ್ ಅದರ ಅನುಯಾಯಿಗಳಿಗೆ ಇಂದ್ರಿಯಾಸಕ್ತಿಗಳಿಂದ ಕೂಡಿದ ಒಂದು ಸ್ವರ್ಗವನ್ನು ವಾಗ್ದಾನ ಮಾಡಿದೆಯೆಂದೂ ಆ ಸ್ವರ್ಗದಲ್ಲಿ ಹರಿಣಗಣ್ಣಿನ ತರುಣಿಯರೂ ಹಾಲುಜೇನಿನ ನದಿಗಳೂ ಸಿಹಿರುಚಿಯಾದ ಹಣ್ಣುಹಂಪಲುಗಳೂ ಧಾರಾಳ ಮರಗಿಡಗಳೂ ವಿವಿಧ ಮಟ್ಟದ ಐಷಾರಾಮದ ಜೀವಿತವೂ ಇರುವುದೆಂದು ಆರೋಪಿಸಲಾಗಿದೆ. ಮರುಭೂಮಿ ವಾಸಿಗಳಾದವರಿಗೆ ಅತ್ಯುನ್ನತ ಆಧ್ಯಾತ್ಮಿಕ ಬಹುಮಾನಗಳನ್ನು ಅನುಭವಿಸಲಿರುವ ವಾಗ್ದಾನಗಳನ್ನು ತಿಳಿಯಲು ಸಾಧ್ಯವಿರಲಿಲ್ಲವೆಂದು ಈ ರೀತಿ ಆರೋಪಿಸುವವರಿಗೆ ಮರೆತುಹೋಗಿರುತ್ತದೆ. ಮರುಭೂಮಿ ವಾಸಿಗಳಿಗೆ

ಸ್ವರ್ಗದ, ಸ್ಥೂಲವಾದ, ಸುಲಭಗ್ರಾಹ್ಯವಾದ; ಸರಳ ವಿವರಣೆ ಅಗತ್ಯವಾಗಿತ್ತು. ಎಷ್ಟೋ ಸಮಯ ಕಳೆದನಂತರ ಗುಡ್ಡಗಾಡಿನ ಅರಬಿಗಳಿಗೆ ಅವರು ಆಧ್ಯಾತ್ಮಿಕವಾಗಿ ಉನ್ನತ ಸ್ಥಾನ ಗಳಿಸಿದನಂತರ ದೇವರನ್ನು ವಿನಯದಿಂದಲೂ ಪ್ರೀತಿಯಿಂದಲೂ ಪೂಜಿಸುವರೆ ಉಪದೇಶಿಸಲು ಸಾಧ್ಯವಾಯಿತು. ಪೈಗಂಬರ್ ಮುಹಮ್ಮದ್ ಮತ್ತು ಅನುಯಾಯಿಗಳು ಸ್ವರ್ಗದ ಈ ಸ್ಥೂಲ ವರ್ಣನೆಗಳನ್ನು ಅಕ್ಷರ ಪ್ರತಿಯಾಗಿ ಅದೇ ರೀತಿ ಭಾವಿಸಿದ್ದರೆಂದು ಹೇಳುವುದು ಧರ್ಮನಿಂದೆಯಾದೀತು. ಅವರು ಈ ವರ್ಣನೆಗಳಲ್ಲಿ ಬಹಳ ಗಾಢವಾದ ಅರ್ಥವನ್ನು ಕಂಡುಹಿಡಿದಿದ್ದರು. ಮನುಷ್ಯ ಮತ್ತು ದೇವರ ಮಧ್ಯವಿರುವ ಪರದೆಯು ಸರಿದು ಸರ್ವಶಕ್ತನಾದ ದೇವರು ತನ್ನ ಮಹತ್ತಾದ ಸ್ವರೂಪವನ್ನು ಆತ್ಮಕ್ಕೆ ತೋರಿಸಿಕೊಡುವಾಗ ಸಂಭವಿಸುವ ಸುಂದರ ದರ್ಶನಗಳೇ ಅತ್ಯಂತ ಸಂತೋಷದಾಯಕವೆಂದು ಅಲ್‌ಘಝ್ಝಾಲಿ ಹೇಳಿರುವರು.

ಸ್ವರ್ಗದ ಕುರಿತು ಪೈಗಂಬರರ ಒಂದು ವಚನ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ: "ದೇವರಿಂದ ಅತ್ಯಂತ ಅನುಗ್ರಹೀತರಾದವರು ದೇವರ ಮಹತ್ತಾದ ವೈಭವವನ್ನು ರಾತ್ರಿಹಗಲು ಕಂಡು ವಿಶಿಷ್ಟವಾದೊಂದು ಆನಂದವನ್ನನುಭವಿಸುವರು. ಈ ಆನಂದ ಎಲ್ಲಾ ವಿಧದ ಶಾರೀರಿಕ ಆನಂದಗಳಿಗಿಂತ ಶ್ರೇಷ್ಠವಾಗಿರುವುದು. ಯಾವ ರೀತಿ ಒಂದು ಸಾಗರವು ಒಂದು ಹನಿ ಬೆವರಿಗಿಂತ ಶ್ರೇಷ್ಠವಾಗಿದೆಯೋ ಅದೇ ರೀತಿ ಇದು ಇರುವುದು".

ದೇವರು ತನ್ನ ಸೇವಕರ ಕೃತ್ಯಗಳನ್ನು ಯಾವ ರೀತಿ ತೀರ್ಮಾನ ಮಾಡುತ್ತಾನೆ? ಆ ಕೃತ್ಯಗಳ ಪರಿಣಾಮ ನೋಡಿ ತೀರ್ಮಾನ ಕೈಗೊಳ್ಳಲಾಗುವುದೋ ಅಥವಾ ಬೇರೆ ಯಾವುದಾದರೂ ಬಾಹ್ಯ ನಿರ್ಣಾಯಕ ಸೂತ್ರಗಳಿವೆಯೋ? ಇಲ್ಲ. ನಿರ್ಧಾರ ಮತ್ತು ಉದ್ದೇಶವನ್ನು ದೇವರು ನೋಡುತ್ತಾನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಪ್ರತಿಯೊಂದು ಕೃತ್ಯದ ಅಧ್ಯಾತ್ಮ ಮೌಲೀಕರಣದ ಆಧಾರ ಇದು ಮಾತ್ರವಾಗಿದೆ. ನ್ಯಾಯದ ಕಟ್ಟುನಿಟ್ಟಾದ ಪಾಲನೆ ಕರುಣೆ ಮತ್ತು ದಯಾಧರ್ಮದ ಜೊತೆ ಸೇರದಿದ್ದರೆ ದೇವರ ದೃಷ್ಟಿಯಲ್ಲಿ ಯಾವುದೇ ಬೆಲೆಯಿಲ್ಲದ್ದಾಗುತ್ತದೆ. ಯಾವುದಾದರೂ ಸತ್ಕೃತ್ಯದ ಉದ್ದೇಶ ಅಹಂಕಾರ ಅಥವಾ ವಂಚನಾಪರವಾಗಿದ್ದರೆ ಅದು ಸಹ ದೇವರ ದೃಷ್ಟಿಯಲ್ಲಿ ಮೌಲ್ಯಹೀನವಾಗಿರುತ್ತದೆ. ಇಸ್ಲಾಮಿನ ಅನುಷ್ಠಾನ ಕ್ರಮಗಳನ್ನು ವಿವರಿಸುವಾಗ ಸಹ ನಾವು ಇದೇ ತತ್ವವನ್ನು ಕಂಡಿರುತ್ತೇವೆ. ವಿಶ್ವಾಸಿಯ ಕೃತ್ಯಗಳ ಕುರಿತು ಅದೇ ತತ್ವ ಪುನರಾವರ್ತಿಸಲ್ಪಟ್ಟದ್ದು ಕಾಣುತ್ತೇವೆ. ಅನುಷ್ಠಾನಕರ್ಮಗಳು "ಪರಿಶುದ್ಧ" (ಪವಿತ್ರ ಖುರ್‌ಆನ್ 98:3)ವಾಗಿರಬೇಕಾಗಿದೆ. ಅದು "ನಿಷ್ಕಳಂಕ" ಮತ್ತು "ಭಯಭಕ್ತಿಯಿಂದ ಕೂಡಿದ" ಹೃದಯದಿಂದ ಹೊರಡಬೇಕಾಗಿದೆ. (ಪವಿತ್ರ ಖುರ್‌ಆನ್ 26:90 ಮತ್ತು 22:33 ನೋಡಿರಿ),

ನಟನೆಯ ಭಕ್ತಿ ಮತ್ತು ಅಹಂಕಾರವನ್ನು ಇಸ್ಲಾಮ್ ಧರ್ಮ ಬಹಳ ಕಠಿಣವಾಗಿ ನಿಂದಿಸಿದೆ. ಇವು ಬಹುದೈವಾರಾಧನೆಯ ಲಘುರೂಪಗಳೆಂದು ಪರಿಗಣಿಸಲ್ಪಟ್ಟಿವೆ. ಈ ಭಾವನೆಗಳಿಂದ ಪ್ರೇರಿತರಾಗಿ ವರ್ತಿಸುವವರು ಯಥಾರ್ಥವಾಗಿ ದೇವರನ್ನು ತಾವು ಜನರ ಮಧ್ಯೆಸ್ಥಾನಗಳಿಸುವುದರ ಜೊತೆ ಸೇರಿಸುವುದರಿಂದ ಇದೊಂದು ರೀತಿಯ ಬಹುದೈವಾರಾಧನೆಯೆಂದು ಕೆಲವು ಲೇಖಕರು ಅಭಿಪ್ರಾಯಪಟ್ಟಿರುವರು.

ಇತರ ಮತಧರ್ಮಗಳಂತೆಯೇ ಇಸ್ಲಾಮ್ ಧರ್ಮ ಸಹ ಪುರಾತನ ಕಾಲದಿಂದ ಮನುಷ್ಯರ ಮನಸ್ಸನ್ನು ತಬ್ಬಿಬ್ಬಾಗಿಸುತ್ತಿರುವ ಸಮಸ್ಯೆಗೆ ವಿವರಣೆಯನ್ನಿತ್ತಿದೆ. ಕೆಟ್ಟವರು ಭಾಗ್ಯವಂತರೂ ಒಳ್ಳೆಯವರು ಹೆಚ್ಚಾಗಿ ದುರ್ಭಾಗ್ಯಶಾಲಿಗಳೂ ಆಗಿರಲು ಕಾರಣವೇನು? ಬಂಡುಗಾರರಿಗೂ ದಬ್ಬಾಳಿಕೆ ನಡೆಸುವವರಿಗೂ ಅನ್ಯಾಯಗಾರರಿಗೂ ದೇವರು ಕಾಯುವ ಸಮಯವನ್ನು ನೀಡುತ್ತಾನೆ. ಇದು ಕೆಲವೊಮ್ಮೆ ಅವರ ಅಂತ್ಯಕಾಲದ ತನಕ ವಿಸ್ತಾರಗೊಂಡಿರುತ್ತದೆ. ಆದರೆ ದೇವರು ಬಹುಮಾನ ಮತ್ತು ಶಿಕ್ಷೆ ಕೊಡುವ ಕಾಲ ಬಂದೇ ಬರುತ್ತದೆ. ದುರ್ಭಾಗ್ಯಕರವಾದ ಸಂಭವಗಳಿಂದ ದೇವರು ತನ್ನ ಸತ್ಯ ವಿಶ್ವಾಸಿಗಳ ವಿಧೇಯತೆಯನ್ನು ಪರೀಕ್ಷಿಸುತ್ತಾನೆಂದು ಇಸ್ಲಾಮ್ ಕಲಿಸುತ್ತದೆ. ಆ ಸಂದರ್ಭಗಳಲ್ಲಿ ದೇವರ ಸಾನ್ನಿಧ್ಯದಲ್ಲಿ ಭಕ್ತರು ತಮ್ಮನ್ನು ಅರ್ಪಿಸಿಕೊಂಡು "ನಾವು ದೇವರಿಗಾಗಿಯೇ ಇರುವೆವು ಆತನ ಕಡೆಗೆಯೇ ಹಿಂತಿರುಗುವೆವು" ಎಂದು ಹೇಳುತ್ತಾರೆ.

ದಯೆ, ದಾನ ಮತ್ತು ನೈತಿಕ ತತ್ವಗಳ ಕುರಿತು ಪೈಗಂಬರ್ ವಚನಗಳು ಬಹಳ ಸುಂದರವಾದ ವಿವರಣೆಗಳನ್ನಿತ್ತಿವೆ. ಪವಿತ್ರ ಖುರ್‌ಆನಿನ ವಚನಗಳು ಮಾನವ ಜೀವಿತದ ವಿವಿಧ ಘಟ್ಟಗಳಲ್ಲಿ ಫಲಕಾರಿಯಾಗಿ ಉಪ

ಯೋಗ ವಾಗುವಂತೆ ಅವುಗಳನ್ನು ವಿವರಿಸುವ ಪೈಗಂಬರ್ ವಚನಗಳು ನಮಗೆ ಪರಂಪರಾಗತವಾಗಿ ದೊರಕಿವೆ. ಈ ವಚನಗಳಲ್ಲಿ ಕೆಲವು ಅಧಿಕೃತವಲ್ಲವೆಂದೂ ಕೆಲವು ಪ್ರಾಚೀನ ವಲ್ಲವೆಂದೂ ವಾದಿಸಲ್ಪಟ್ಟಿದ್ದರೂ ಆ ಸಂಗತಿ ಇಲ್ಲಿ ಗಮನಾರ್ಹವಲ್ಲ. ಎಲ್ಲಾ ವಚನಗಳ ಮೂಲವನ್ನು ಪೈಗಂಬರ್ ಮುಹಮ್ಮದರ ತನಕ ತಲಪುವಂತೆ ಕಂಡುಹಿಡಿಯಲು ಸಾಧ್ಯವಿಲ್ಲವೆಂದು ಒಪ್ಪಿಕೊಂಡರೂ ಸಹ ಆ ವಚನಗಳಲ್ಲಿ ಹೆಚ್ಚಿನವು ಇಸ್ಲಾಮಿನ ಸತ್ವವನ್ನು ತಮ್ಮಲ್ಲಿ ಸೇರಿಸಿಕೊಂಡ ಪ್ರಾಚೀನ ಮುಸ್ಲಿಮ್ ಸಮಾಜದ ಉತ್ಸಾಹವನ್ನೂ ಆದರ್ಶ ತತ್ವಗಳನ್ನೂ ಆಕಾಂಕ್ಷೆಗಳನ್ನೂ ವ್ಯಕ್ತಗೊಳಿಸುತ್ತವೆ. ವಾಚಕ ಮಹಾಶಯರು ಈ ಕೆಳಗಿನ ಪೈಗಂಬರ್ ವಚನಗಳ ಸೌಂದರ್ಯವನ್ನೂ ಅರ್ಥವೈಶಾಲ್ಯವನ್ನೂ ತೀರ್ಮಾನ ಮಾಡಬಹುದು:

ಒಬ್ಬ ಅನಾಥ ಮಗುವಿನ ತಲೆದಡವಿದವನಿಗೆ ಆತನ ಕೈಗಳು ಎಷ್ಟು ತಲೆಕೂದಲುಗಳನ್ನು ಸ್ಪರ್ಶಿಸಿದುವೋ ಅಷ್ಟು ಬೆಳಕುಗಳು ಪುನರುತ್ಥಾನದ ದಿವಸ ದೊರೆಯುವುವು.

ಪ್ರತಿ ಮನೆಗೊಂದು ಬೀಗದಕೈಯಿದೆ. ಸ್ವರ್ಗಕ್ಕಿರುವ ಬೀಗದಕೈ ಚಿಕ್ಕಮಕ್ಕಳನ್ನು ಮತ್ತು ಬಡವರನ್ನು ಪ್ರೀತಿಸುವುದಾಗಿದೆ.

ತಾನು ಇಚ್ಛಿಸುವುದನ್ನು ತನ್ನ ಸಹೋದರನಿಗೂ ಇಚ್ಛಿಸದವನು ಸತ್ಯ ವಿಶ್ವಾಸಿಯಲ್ಲ.

ಒಬ್ಬ ವೃದ್ಧನಾದ ದಾರಿಹೋಕ ಇಸ್ಲಾಮಿಗೆ ಮತಾಂತರಗೊಂಡನಂತರ ಈ ರೀತಿ ಹೇಳಿದುದಾಗಿ ವರದಿಯಾಗಿದೆ:

''ಪ್ರವಾದಿಯವರು ನನಗೆ ಏಳು ಸಂಗತಿಗಳ ಕುರಿತು ಆಜ್ಞಾಪಿಸಿರುವರು:

1. ಬಡವರನ್ನು ಪ್ರೀತಿಸಿ ಅವರಿಗೆ ಸಮೀಪವಿರುವವನಾಗು.
2. ಯಾವಾಗಲೂ ನಿನಗಿಂತ ಕೆಳಮಟ್ಟದಲ್ಲಿರುವವರನ್ನು ನೋಡುತ್ತಾ ಇರು. ನಿನಗಿಂತ ಉನ್ನತ ಮಟ್ಟದ ಜೀವನವನ್ನು ಅನುಭವಿಸುವವರನ್ನು ನೋಡಬೇಡ.
3. ಯಾರೊಡನೆಯೂ ಏನನ್ನೂ ಯಾಚಿಸಬೇಡ.
4. ನಿನ್ನ ತಂದೆ ತಾಯಿಗಳು ನಿನಗೆ ಅತೃಪ್ತಿಕರವಾಗಿ ವರ್ತಿಸಿದರೂ ವಿಧೇಯನಾಗಿರು.
5. ಸತ್ಯವು ಕಹಿಯಾದರೂ ಸತ್ಯವನ್ನೇ ಹೇಳು.
6. ನಿನ್ನ ಅವಹೇಳನ ನಿನ್ನನ್ನು ದೇವರ ದಾರಿಯಿಂದ ದೂರ ಸರಿಸದಿರಲಿ.
7. ಯಾವಾಗಲೂ ಹೇಳುತ್ತಾ ಇರು: 'ದೇವರ ಹೊರತು ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ' –ದೇವರ ಸಿಂಹಾಸನದ ಕೆಳಗೆ ಅಡಗಿಸಲ್ಪಟ್ಟಿರುವ ನಿಧಿಯಲ್ಲಿ ಇದೊಂದು ಅಂಶವಾಗಿದೆ".

ಆ ಮೇಲೆ ಭಕ್ತಿಪರವಶತೆ (ಸೂಫಿಸಂ) ಇಸ್ಲಾಮ್ ಧರ್ಮದಲ್ಲಿ ಪ್ರವೇಶಿಸಿದಾಗ ಆತ್ಮದ ಮುಂದಿರಿಸಿದ ಆದರ್ಶ ಇನ್ನಷ್ಟು ಉನ್ನತವಾಗಿತ್ತು: ಮನುಷ್ಯನ ಪರಿಪೂರ್ಣತೆ ಮತ್ತು ಮನುಷ್ಯನ ಸಂತೋಷ ದೇವರ ಗುಣಗಳನ್ನು ಅನುಕರಿಸುವುದರಿಂದ ಮತ್ತು ದೇವರ ಗುಣಗಳ ಯಥಾರ್ಥ ಸತ್ವವೇನೆಂದು ತಿಳಿಯುವುದರಿಂದ ಉಂಟಾಗುತ್ತದೆ ಎಂದು. (ಇದು ಸಹ ಈ ಪೈಗಂಬರ ವಚನವನ್ನಾಧರಿಸಿದೆ: 'ನೀವು ದೇವರ ಗುಣಗಳನ್ನು ನಿಮ್ಮ ಗುಣಗಳನ್ನಾಗಿ ಪರಿವರ್ತಿಸಿರಿ').

ಪೈಗಂಬರ್ ವಚನಗಳಿಂದ ಇನ್ನೊಂದು ಸಿದ್ಧಾಂತ ರೂಪಿಸಲ್ಪಟ್ಟು ಅದು ಇಸ್ಲಾಮಿಗೆ ಪ್ರತ್ಯೇಕ ಪ್ರಸಿದ್ಧಿಯನ್ನು ಕೊಟ್ಟಿದೆ. ದೇವರು ತನ್ನ ದಯೆಯನ್ನು ಮನುಷ್ಯನಿಗೆ ಮಾತ್ರ ಸೀಮಿತಗೊಳಿಸುವುದಿಲ್ಲವೆಂದೂ ದೇವರು ಪ್ರಾಣಿಗಳನ್ನು ಪ್ರೇಮದಿಂದಲೂ ಅನುಕಂಪದಿಂದಲೂ ಕಾಣುತ್ತಾನೆಂಬುದೇ ಈ ತತ್ವವಾಗಿದೆ. ಪ್ರಾಣಿಗಳ ಜೀವನವೂ ಮಾನವರ ಜೀವನವೂ ದೇವರ ದೃಷ್ಟಿಯಲ್ಲಿ ಮಹತ್ವದ್ದಾದುದರಿಂದ ಮನುಷ್ಯನು ದೇವರ ಕೋಪಕ್ಕೆ ಗುರಿಯಾಗದಿರಬೇಕಾದರೆ ಆತನು ಪ್ರಾಣಿಗಳ ಕುರಿತು ಸಹ ಸಹಾನುಭೂತಿಯುಳ್ಳವನಾಗಿರಬೇಕು, ಅವುಗಳಿಗೆ ಆಹಾರ, ನೀರು, ವಾಸಸ್ಥಳ ಮತ್ತು ವಿಶ್ರಾಂತಿ ಸಹ ನೀಡುವುದಾವಶ್ಯಕರವಾಗಿದೆ.

ಇಸ್ಲಾಮ್ ಧರ್ಮ ಖುರ್‌ಆನ್ ಮತ್ತು ಪೈಗಂಬರ್ ಚರ್ಯೆಗಳ ಮೂಲಕ ಸದ್ಗುಣ ಗಳಿಸುವ ದಾರಿ ತೋರಿಸುವಾಗ ಆವಶ್ಯಕತೆಗಳನ್ನು ಮರೆತಿಲ್ಲ. ಮತದ ಅನುಷ್ಠಾನ ಕ್ರಮಗಳನ್ನು ನಿರ್ಣಯಿಸುವಾಗ ಮಾನವರ ನ್ಯೂನತೆಗಳನ್ನು ಕಡೆಗಣಿಸದಂತೆ ಇಲ್ಲಿಯೂ ವರ್ತಿಸಿದೆ. ಇಸ್ಲಾಮ್ ಧರ್ಮ ಸಾಧಿಸಬೇಕಾದ ಒಂದು ಸದ್ಗುಣದ ಚಿತ್ರವನ್ನೀಯುವಾಗ ಅದು ಯಥಾರ್ಥತೆಯ ಮಿತಿಯ ಹೊರಗೆ ಹೋಗುವುದಿಲ್ಲ. ಕೇವಲ ಕೆಲವೇ ಮಂದಿ ಸಾಧನೆ ಮಾಡಿ ಗಳಿಸಬಹುದಾದ ಸದ್ಗುಣದ ಉಪದೇಶವನ್ನು ಅದು ಕೊಡುವುದಿಲ್ಲ. ಅದು ಜೀವನದಲ್ಲಿ ಅನುಸರಿಸಬಹುದಾದ ಮತ್ತು ಪರರ ಪ್ರಶಂಸೆಗೆ ಗುರಿಯಾಗ

ಬಹುದಾದ ಅಪ್ಪಟ ನೀತಿ ತತ್ವಗಳನ್ನು ಉಪದೇಶಿಸುತ್ತದೆ. ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯ ಆದರ್ಶವನ್ನು ಮುಂದಿಡುತ್ತಾ ಅದು ಜೀವನದ ನಿಯಮಗಳಿಂದ ದೂರ ಸರಿಯುವುದಿಲ್ಲ. ಅದು ಮನುಷ್ಯಪ್ರಕೃತಿಗೆ ಸಮೀಪ ವಾಗಿದ್ದುಕೊಂಡು ಪ್ರಾಮಾಣಿಕವಾದ ಸುಖಪ್ರಾಪ್ತಿಯ ಆಕಾಂಕ್ಷೆಯನ್ನು ಪರಿಗಣಿಸುತ್ತದೆ. ಮನುಷ್ಯನ ಧಾರ್ಮಿಕ ಜೀವನ ಬೇರೆ, ಪ್ರಾಪಂಚಿಕ ಜೀವನ ಬೇರೆ ಎಂಬ ವ್ಯತ್ಯಾಸವುಂಟುಮಾಡದೆ ಅದು ದೇವರ ದಾಸನೂ ಸಮಾಜದ ಸದಸ್ಯನೂ ಆಗಿರುವ ವ್ಯಕ್ತಿಗಳುಳ್ಳ ಸಮಾಜವನ್ನು ಕಟ್ಟಲು ಉದ್ದೇಶಿಸುತ್ತದೆ.

ದೇವರಿಗೆ ಕೃತಜ್ಞತೆ ಸೂಚಿಸುವ ಅತ್ಯುತ್ತಮ ರೀತಿ ದೇವರು ಕೊಟ್ಟುದರ ಅತ್ಯುತ್ತಮ ರೀತಿಯಲ್ಲಿ ಪ್ರಯೋಜನವನ್ನು ಪಡೆಯುವುದಾಗಿದೆ. ಪ್ರತಿಯೊಬ್ಬರ ಉಪಯೋಗಕ್ಕಾಗಿ ದೇವರು ಒದಗಿಸಿಕೊಟ್ಟ ಒಳ್ಳೆಯ ಸಾಮಾಗ್ರಿಗಳ ಸದುಪಯೋಗ ಪಡೆಯುವುದು ಕೇವಲ ಒಂದು ಸಂಭಾವ್ಯ ಸಂಗತಿ ಮಾತ್ರವಲ್ಲ ಅದೊಂದು ಕರ್ತವ್ಯವೇ ಆಗಿರುತ್ತದೆ. ಈ ಒಳ್ಳೆಯ ಸಾಮಾಗ್ರಿಗಳಲ್ಲಿ ವ್ಯಕ್ತಿಗೆ ಅಥವಾ ಆತನ ನೆರೆಕರೆಯವನಿಗೆ ಅಪಾಯವಿಲ್ಲದಿದ್ದರೆ ಸರಿ. ಖುರ್‌ಆನ್ ಈ ರೀತಿ ಹೇಳುತ್ತದೆ:

"ಸತ್ಯ ವಿಶ್ವಾಸಿಗಳಾಗಿ ಸತ್ಕಾರ್ಯ ಮಾಡುವವರು ತಿನ್ನುವುದರಲ್ಲಿ ಪಾಪವಿಲ್ಲ; ಅವರು ದೇವರನ್ನು ಭಯಭಕ್ತಿಯಿಂದ ನಂಬಿ ಸತ್ಕಾರ್ಯ ಮಾಡುತ್ತಾರೆ; ಪುನಃ ಅವರು ಭಯಭಕ್ತಿಯಿಂದ ನಂಬುತ್ತಾರೆ ಮತ್ತು ಅವರು ಭಯಭಕ್ತಿಯಿಂದ ಪರೋಪಕಾರ ಮಾಡುತ್ತಾರೆಂದಾದರೆ. ದೇವರು ಪರೋಪಕಾರಿಗಳನ್ನು ಪ್ರೀತಿಸುತ್ತಾನೆ". (5:94).

"ಹೇಳು: 'ದೇವರು ತನ್ನ ಸೇವಕರಿಗಾಗಿ ಸೃಷ್ಟಿಸಿದ ಸುಂದರ ಸಾಮಗ್ರಿಗಳನ್ನೂ ಉತ್ತಮ ಆಹಾರ ಪದಾರ್ಥಗಳನ್ನೂ ನಿಷಿದ್ಧವೆಂದು ಹೇಳಿದವರಾರು?' (7:33).

ಆರೋಗ್ಯಕರವಾದ ಜೀವನದ ಕಲ್ಪನೆಗೆ ಪೈಗಂಬರ್ ವಚನಗಳು ಬಲಯುತವಾದ ಸಹಾಯವನ್ನಿತ್ತಿವೆ. ಅತ್ಯುತ್ತಮ ನೈತಿಕ ಮೌಲ್ಯಗಳನ್ನೊಳಗೊಂಡ ಪೈಗಂಬರ್ ವಚನಗಳ ಕುರಿತು ನಾವು ಈ ಮೊದಲು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪುನರುಚ್ಚರಿಸಲು ಇಚ್ಛಿಸುತ್ತೇವೆ. ಯಾರಾದರೂ ಈ ವಚನಗಳ ಅಧಿಕೃತತೆಯ ಕುರಿತು ಪ್ರಶ್ನಿಸಿದರೆ ಅದೊಂದು ಗಮನಾರ್ಹ ಸಂಗತಿಯಲ್ಲ. ಮುಸ್ಲಿಮರು ಈ ಪರಂಪರಾಗತ ವಚನಗಳನ್ನು ಸತ್ಯವೆಂದು ಸ್ವೀಕರಿಸಿ ಅವುಗಳಲ್ಲಿ ಅಡಕವಾದ ಉಪದೇಶಗಳನ್ನು ಹೆಚ್ಚಾಗಿ ಅನುಸರಿಸುತ್ತಾರೆ.

ಒಂದು ಪ್ರಸಿದ್ಧ ಪೈಗಂಬರ್ ವಚನ ಈ ರೀತಿಯಾಗಿದೆ:

"ಇಸ್ಲಾಮಿನಲ್ಲಿ ಸನ್ಯಾಸವಿಲ್ಲ".* ಇಸ್ಲಾಮ್ ಧರ್ಮ ಸನ್ಯಾಸವನ್ನು ಅಂಗೀಕರಿಸುವುದಿಲ್ಲ. ಶರೀರವನ್ನು ವಿವಿಧ ರೀತಿಯಲ್ಲಿ ದಂಡಿಸುವುದು, ಅನಾವಶ್ಯವಾದ ಏಕಾಂತವಾಸ, ಬಿಡುವಿಲ್ಲದ ಉಪವಾಸ, ರಾತ್ರಿಯಿಡೀ ಪ್ರಾರ್ಥನೆ ಮಾಡುವುದು ಮೊದಲಾದ ಸನ್ಯಾಸ ಜೀವನವನ್ನು ಇಸ್ಲಾಮ್ ಒಪ್ಪುವುದಿಲ್ಲ. ಮದುವೆಯ ವಿಷಯದಲ್ಲಿ ಇಸ್ಲಾಮ್ ಮಧ್ಯೆಮಾರ್ಗ ಸ್ವೀಕರಿಸಿದೆ. ಅದು ಪ್ರಾಮಾಣಿಕವಾದ ಕಾರ್ಯನಿರತ ಜೀವನವನ್ನು ಉಪದೇಶಿಸುತ್ತದೆ. ದೇವರನ್ನು ಧ್ಯಾನಿಸುತ್ತಲೂ ಶರೀರದ, ಕುಟುಂಬದ, ಸಮಾಜದ ಹಕ್ಕುಗಳನ್ನೂ ಆವಶ್ಯಕತೆಗಳನ್ನೂ ಪೂರ್ತಿಗೊಳಿಸುತ್ತಲೂ ಇರಬೇಕೆಂದು ಅದು ಉಪದೇಶಿಸುತ್ತದೆ.

ಪೈಗಂಬರ್ ಮುಹಮ್ಮದ್ ಈ ರೀತಿ ಹೇಳಿದರು:

ಈ ಲೋಕದ ಸುಖಸಂತೋಷಗಳನ್ನು ಅನುಭವಿಸಲು ಪರಲೋಕವನ್ನು ಮರೆಯುವವನು ನಿಮ್ಮಲ್ಲಿ ಶ್ರೇಷ್ಠನಲ್ಲ. ಅದೇ ಪ್ರಕಾರ ಪರಲೋಕದ ಸುಖಸಂತೋಷಗಳಿಗಾಗಿ ಇಹಲೋಕವನ್ನು ಮರೆಯುವವನೂ ಶ್ರೇಷ್ಠನಲ್ಲ. ನಿಮ್ಮಲ್ಲಿ ಶ್ರೇಷ್ಠನು ಇಹಪರಲೋಕಗಳ ಕುರಿತು ಸದಾ ಜಾಗೃತನಾಗಿರುವವನು.

ಒಬ್ಬ ಉತ್ಸಾಹಿ ತರುಣನಿಗೆ ಪೈಗಂಬರ್ ಈ ರೀತಿ ಹೇಳಿದರು;

---

*ಇದನ್ನು ಖುರ್‌ಆನ್ ಈ ರೀತಿ ವ್ಯಕ್ತಗೊಳಿಸಿದೆ:

"ನಾವು ಪ್ರವಾದಿಗಳನ್ನು ಅವರ ಹೆಜ್ಜೆಗುರುತನ್ನು ಅನುಸರಿಸಲು ಕಳುಹಿಸಿದೆವು. ನಾವು ಮರ್‌ಯಮನ ಮಗ ಈಸಾನನ್ನೂ ಅವರನ್ನು ಅನುಸರಿಸುವಂತೆ ಕಳುಹಿಸಿದೆವು. ನಾವು ಆತನಿಗೆ ಸುವಾರ್ತೆಗಳನ್ನಿತ್ತೆವು. ಆತನನ್ನು ಅನುಸರಿಸಿದವರ ಹೃದಯದಲ್ಲಿ ದಯೆಯನ್ನೂ ಅನುಕಂಪವನ್ನೂ ಉಂಟುಮಾಡಿದೆವು. ಅವರು ಸನ್ಯಾಸ ಜೀವನವನ್ನು ತಮಗಾಗಿ ಆರಿಸಿಕೊಂಡರು— ಅದನ್ನು ನಾವು ಆದೇಶಿಸಿರಲಿಲ್ಲ. (57:28).

"ನಿನ್ನ ಶರೀರಕ್ಕೆ ನಿನ್ನ ಮೇಲೆ ಹಕ್ಕುಗಳಿದ್ದಂತೆಯೇ ನಿನ್ನ ಪತ್ನಿಗೆ ಆಕೆಯ ಹಕ್ಕುಗಳಿವೆ; ನಿನ್ನ ಅತಿಥಿಗೆ ಆತನ ಹಕ್ಕುಗಳಿವೆ".

ದಾನದ ಕುರಿತು ಪ್ರಶ್ನಿಸಿದವನಿಗೆ ಪೈಗಂಬರ್ ಈ ರೀತಿ ಹೇಳಿದರು:

"ಮೂರನೇ ಒಂದಂಶ ಕೊಡು. ಅದು ಸಾಕಷ್ಟಾಯಿತು. ನಿನ್ನ ವಾರೀಸುದಾರರು ಭಿಕ್ಷಾಟನೆ ನಡೆಸದಂತೆ ಅವರಿಗಾಗಿ ಸಂಪತ್ತನ್ನು ತೊರೆದು ಹೋಗುವುದುಚಿತ".

ವಿವಾಹವಾಗದೆ ಇರುವುದನ್ನು ಇಸ್ಲಾಮ್ ಕಠಿಣವಾಗಿ ವಿರೋಧಿಸಿದೆ. ಅದು ಪೈಗಂಬರರು ಸ್ಥಾಪಿಸಿದ ಸಂಪ್ರದಾಯಗಳಿಗೆ ವಿರುದ್ಧವಾಗಿದೆ. ಬ್ರಹ್ಮಚರ್ಯೆಯನ್ನು ಪಾಲಿಸುತ್ತಿದ್ದ ಒಬ್ಬ ಅರಬನನ್ನು ಪೈಗಂಬರ್ ಮುಹಮ್ಮದ್ ಈ ರೀತಿ ಸಿಟ್ಟಿನಿಂದ ಸಂಬೋಧಿಸಿದುದು ವರದಿಯಾಗಿದೆ:


"ನೀನು ಸೈತಾನನ ಮಗನಾಗಲು ನಿಶ್ಚಯಿಸಿರುವೆಯೋ? ನೀನು ಕ್ರೈಸ್ತ ಪಾದರಿಯಂತಾಗುವೆಯೋ? ಆ ರೀತಿಯಾಗಿದ್ದರೆ ಎದ್ದು ನಿಂತು ಬಹಿರಂಗವಾಗಿ ಹೇಳಿ ಅವರ ಜೊತೆಗೆ ಸೇರು. ನೀನು ನಮ್ಮ ಪೈಕಿಯವನಾಗಿದ್ದರೆ ನಮ್ಮ ದಾರಿಯನ್ನು ಅನುಸರಿಸು. ನಮ್ಮ ದಾರಿ ವೈವಾಹಿಕ ಜೀವನವಾಗಿದೆ".

ಜೀವಿತದ ಸುಖಸೌಕರ್ಯಗಳನ್ನು ಅನುಭವಿಸುವುದರ ಕುರಿತು ಇಸ್ಲಾಮ್ ಧರ್ಮ ತನ್ನ ಅನುಯಾಯಿಗಳಿಗೆ ವಿಧಿಸಿದ ಮೇರೆಗಳು ಕೆಲವೇ ಆಗಿದ್ದು ಸರ್ವರಿಗೂ ಸಮಾನವಾಗಿದ್ದು ಮಹತ್ತಾದ ಜಾಣ್ಮೆಯನ್ನು ತೋರಿಸುತ್ತದೆ.

ಈಗಿನ ಕಾಲದಲ್ಲಿ ಪಾಶ್ಚಿಮಾತ್ಯರಾಜ್ಯಗಳು ಕುಡುಕತನ ಮತ್ತು ಜುಗಾರಿ ಆಟದ ಕುರಿತು ಯುದ್ಧವನ್ನೇ ಸಾರಿದ್ದು ಅವುಗಳನ್ನು ಮದ್ಯನಿರೋಧ ಮತ್ತು ಜುಗಾರಿ ಪ್ರತಿಬಂಧಕ ಕಾನೂನುಗಳ ಮೂಲಕ ನಿಯಂತ್ರಿಸಲು ಯತ್ನಿಸುತ್ತಿರುವಾಗ ಆತ್ಮಕ್ಕೂ ಐಶ್ವರ್ಯಕ್ಕೂ ಭಂಗತರುವಂತಹ ಈ ಎರಡು "ಅಪಾಯಕರವಾದ ಬಾಗಿಲು"ಗಳನ್ನು ಎಂದೋ ಮುಚ್ಚಿದ ಕುರಿತು ಇಸ್ಲಾಮ್ ಧರ್ಮವನ್ನು ನಿಂದಿಸಲು ಸಾಧ್ಯವಿದೆಯೇ? ಮಿತವ್ಯಯ ಖುರ್‌ಆನಿನ ಉಪದೇಶದ ಪ್ರಕಾರ ಒಂದು ಸದ್ಗುಣವಾಗಿದೆ. ಆದರೆ ಇದು ಸಾಕಾಗಲಾರದು. ಪವಿತ್ರ ಖುರ್‌ಆನ್ ಜುಗಾರಿ ಆಟಗಳನ್ನು ಮಾತ್ರವಲ್ಲ ಸಾಲದ ಮೇಲೆ ಬಡ್ಡಿ ವಸೂಲು ಮಾಡುವುದನ್ನೂ ನಿಷಿದ್ಧಗೊಳಿಸಿದೆ. ಅನ್ಯಾಯಕರವಾದ ಸಂಪಾದನೆಯನ್ನು ತಡೆಯುವ ಈ ಆಜ್ಞೆಗಳಲ್ಲಿ ದೇವರ ಬುದ್ಧಿವಂತಿಕೆಯ ಪ್ರಕಾಶ ಪ್ರಜ್ವಲಿಸುತ್ತಿದೆಯೆಂದು ನೀವು ಹೇಳದೆ ಇರಬಲ್ಲಿರಾ?

ಮನುಷ್ಯರಿಗೆ ಧರ್ಮವೊಂದು ಬೇಕಾಗಿದೆ. ಅದು ಅವರ ಆವಶ್ಯಕತೆಗಳನ್ನು ಪೂರೈಸುವಂತಾಗಬೇಕಿದೆ. ಅದು ಅವರ ಭಾವನೆಗಳಿಗೆ ಸಾಮರಸ್ಯವನ್ನುಂಟುಮಾಡಬೇಕಾಗಿದೆ. ಅದು ಶಾಂತಿ ಸಮಾಧಾನಗಳನ್ನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ನೀಡುವಂತದ್ದಾಗಿರಬೇಕಾಗಿದೆ. ಇಸ್ಲಾಮ್ ಈ ಎಲ್ಲಾ ಅವಶ್ಯಗಳನ್ನು ಪೂರೈಸುತ್ತಿದೆ. ಅದೊಂದು ಧರ್ಮಸಿದ್ಧಾಂತ ಮಾತ್ರವಲ್ಲದೆ ಜೀವನ ಸಿದ್ಧಾಂತವೂ ಆಗಿದೆ. ಅದು ಸರಿಯಾದ ಚಿಂತನ, ಸರಿಯಾದ ವರ್ತನೆ, ಪ್ರಾಮಾಣಿಕತನದ ಮಾತುಕತೆಯ ಉಪದೇಶವನ್ನಿತ್ತಿದೆ. ಈ ಕಾರಣದಿಂದಲೇ ಇಸ್ಲಾಮ್ ಧರ್ಮ ಮನುಷ್ಯನ ಮನಸ್ಸನ್ನೂ ಹೃದಯವನ್ನೂ ಕಷ್ಟವಿಲ್ಲದೆ ಆಕರ್ಷಿಸಲು ಶಕ್ತವಾಗಿದೆ.

(ಅನುವಾದಕ: ಎಂ. ಯು. ರಶೀದ್.)



# ✳ ಮೂವರು ಆಂಗ್ಲ ಅಹ್ಮದಿ ಮಹಿಳೆಯರೊಡನೆ ಸಂದರ್ಶನ ✳

ಲಂಡನ್ ನಗರದ ದಿನಪತ್ರಿಕೆಯಾದ "ಡೈಲಿ ಮೈಲ್" ಪ್ರತಿನಿಧಿಯ ಸಂದರ್ಶನ ವರದಿಯು ಆ ಪತ್ರಿಕೆಯ 23ನೆ ಆಗಸ್ಟ್ 1978ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದರ ಭಾಷಾಂತರವನ್ನು ಈ ಕೆಳಗೆ ಕೊಡಲಾಗಿದೆ.

—ಸಂ.

## ತಾಯಿ ಪೂರ್ವಾಭಿಮುಖಳಾದಾಗ-

ಆಕೆಯ ಮಕ್ಕಳಿಕೆ ಕುಡಿತವಿಲ್ಲ, ನರ್ತನವಿಲ್ಲ, ಲಿಂಗಬೇಧ ಪರಿಗಣಿಸದ ಸಹವಾಸವಿಲ್ಲ.

ರಮ್‌ಝಾನ್ ತಿಂಗಳ ಉಪವಾಸದ ಕಾಲವಿದು. ಇದು ಧಾರ್ಮಿಕ ನಿಯಮಗಳನ್ನು ತಪ್ಪದೆ ಪಾಲಿಸುತ್ತಿರುವ ಮುಸ್ಲಿಂ ಸಂಘಟನೆಗೆ ಮತಾಂತರ ಹೊಂದಿದ ಮೂವರು ಇಂಗ್ಲಿಷ್ ಗೃಹಿಣಿಯರ ವಿಚಿತ್ರ ಕಥೆಯಾಗಿದೆ.

### ಮಿಸ್ಸೆಸ್ ವೆಲರಿ ವಾರ್ಡ್

ಮಿಸ್ಸೆಸ್ ವಾರ್ಡ್ (29 ವರ್ಷ ಪ್ರಾಯ) ಇಂಗ್ಲಿಷ್ ಅಧ್ಯಾಪಿಕೆಯಾಗಿರುವಳು. ಆಕೆ ತನಗಾಗಿ ಮತ್ತು ತನ್ನ ಆಂಗ್ಲೇಯನಾದ ಪತಿಗಾಗಿ ಉಪಾಹಾರ ತಯಾರಿಸಲು ಬೆಳಗ್ಗಿನ ಜಾವ 4 ಗಂಟೆಗೆ ಎದ್ದಳು. ಅನಂತರ ಆಕೆ ಪೂರ್ವಾಭಿಮುಖಳಾಗಿ* ಪ್ರಾರ್ಥಿಸಿದಳು. ಈ ರೀತಿ ಆಕೆ ಐದು ಸಾರಿ ಪ್ರಾರ್ಥಿಸುವಳು.

ಮುಸ್ಲಿಮರು ರಮ್‌ಝಾನ್ ತಿಂಗಳ ಉಪವಾಸ ಆಚರಿಸುತ್ತಿದ್ದು ಸೂರ್ಯೋದಯದ ಮುಂಚಿನ ಕಾಲದಿಂದ ಸೂರ್ಯಾಸ್ತದ ತನಕ ಉಪವಾಸ ಮಾಡುತ್ತಾರೆ. ವೆಲರಿ ಮತ್ತು ಆಕೆಯ ಗಂಡ ಧಾರ್ಮಿಕ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವ ಅಹ್ಮದಿಯಾ ಸಂಘಟನೆಗೆ ಸೇರಿದವರಾಗಿದ್ದಾರೆ.

ಪರದಾ ಸಂಪ್ರದಾಯ, ಹೆತ್ತವರು ಏರ್ಪಡಿಸಿದ ವಿವಾಹ, ತಲೆಯಿಂದ ಕಾಲಿನ ತನಕ ಪೂರ್ಣಶರೀರವನ್ನು ಮುಚ್ಚುವಂತಹ ವಸ್ತ್ರವನ್ನು ಸ್ತ್ರೀಯರು ಧರಿಸುವುದು ಮೊದಲಾದುವುಗಳನ್ನು ಹೆಚ್ಚಿನವರು ಸ್ವೀಕರಿಸುತ್ತಾರೆ. ತಮ್ಮ ಅಥವಾ ಪತಿಯ ಕುಟುಂಬದ ಪುರುಷರನ್ನು ಮಾತ್ರ ಭೇಟಿಯಾಗುತ್ತಾರೆ. ನರ್ತಿಸುವುದು, ಬಹಿರಂಗವಾಗಿ ಹಾಡುವುದು ಅವರಿಗೆ ನಿಷಿದ್ಧ.

* ಇಂಗ್ಲೆಂಡಿನಿಂದ ಕಅಬಕ್ಕೆ ಅಭಿಮುಖವಾಗಿ ಪ್ರಾರ್ಥಿಸಲು ಪೂರ್ವಾಭಿಮುಖವಾಗಿ ನಿಲ್ಲಬೇಕಾಗುತ್ತದೆ. —ಅನು.

ಬ್ರಿಟನ್‌ನಲ್ಲಿ ಈ ಸಂಘಟನೆ ವಿಸ್ತಾರಗೊಳ್ಳುತ್ತಿದೆ. ಅವರ ನಾಯಕರಾದ ಇಮಾಮ್ ಲಂಡನಿಗೆ ಇಪ್ಪತ್ತು ವರ್ಷಗಳ ಮೊದಲು ಬಂದಾಗ ಇವರ ಸಂಖ್ಯೆ 149‡ ಆಗಿತ್ತು. ಈಗ ಇಲ್ಲಿ ಹತ್ತು ಸಾವಿರ ಅಹ್ಮದಿಗಳಿದ್ದಾರೆ.

ಹೆಚ್ಚಿನ ಸ್ತ್ರೀಯರು ತೊರೆಯಲು ಸಂತೋಷ ಪಡುವಂತಹ ನಿರ್ಬಂಧಗಳನ್ನು ಒಬ್ಬ ಇಂಗ್ಲಿಷ್ ಮಹಿಳೆ, ಆಕೆ ಆ ರೀತಿಯ ವಾತಾವರಣದಲ್ಲಿ ಬೆಳೆಯದಿದ್ದರೂ ಸ್ವೀಕರಿಸಲು ಕಾರಣವೇನು?

ವೆಲರಿ, ತನ್ನ ಮಕ್ಕಳು ತನ್ನಂತೆ ಪಾಲಿಸಲ್ಪಡಬಾರದೆಂಬುದರ ಕುರಿತು ದೃಢ ಚಿತ್ತಳಾಗಿದ್ದಾಳೆ. ಆಕೆಗೆ ಶಾಲೆಯಲ್ಲಿ ಬಾಲಕರಾದ ಸ್ನೇಹಿತರಿದ್ದರು. ಅವರು ಆಕೆಯ ಕೈಗಳನ್ನು ಹಿಡಿದು ಚುಂಬಿಸಿದ್ದರು. ಬರ್ಮಿಂಗ್ ಹಾಮಿನಲ್ಲಿರುವ ಟೀಚರ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ಆಕೆಗೆ ನೆವಿಲ್ಲೆಯ ಪರಿಚಯವಾಯಿತು. ಅವರು ಜೊತೆಯಾಗಿ ಪಾನಗೃಹಗಳನ್ನು ಸಂದರ್ಶಿಸುತ್ತಿದ್ದರು. ಟ್ರೈನಿಂಗ್ ಮುಗಿದ ನಂತರ ಅವರು ಮದುವೆಯಾಗಿ ಅನಂತರ ಮತಾಂತರಗೊಂಡರು.

"ನನಗೆ ಇಸ್ಲಾಮ್ ಧರ್ಮದ ನಂಬಿಕೆಗಳು ಸಯುಕ್ತಿಕವೆಂದು ತೋರುತ್ತದೆ" ಎಂದು ಆಕೆ ಹೇಳಿದಳು.

"ನನ್ನ ತಾಯಿಗೆ ಇದು ವಿಚಿತ್ರವಾಗಿ ಕಂಡಿತು. ಆದರೆ ಆಕೆ ಅದನ್ನು ತಿರಸ್ಕರಿಸಲಿಲ್ಲ. ನೆವಿಲ್ಲೆ ನಾಲ್ಕು ಹೆಂಡಿರನ್ನು ಹೊಂದಬಹುದೆ? ಎಂಬುದನ್ನು ತಿಳಿಯಲು ಆಕೆ ಉತ್ಸುಕಳಾಗಿದ್ದಳು.

‡ ಈ ಸಂಖ್ಯೆ ಸರಿಯೆಂದು ಕಾಣುವುದಿಲ್ಲ. —ಅನು.

"ಇದು ಸಾಧ್ಯವಿದೆ. ನನ್ನ ಪತಿ ಧಾರ್ಮಿಕ ಕಾರಣ ದಿಂದ ಇನ್ನೋರ್ವ ಪತ್ನಿಯನ್ನು ಹೊಂದಲು ಇಚ್ಛಿಸುತ್ತಾರೆಂದು ನನಗೆ ಮನದಟ್ಟಾದರೆ ಮತ್ತು ಅದು ಸರಿಯೆಂದು ನಾನು ತಿಳಿದರೆ ನಾನು ಅದಕ್ಕೆ ಒಪ್ಪುವೆನು. ಆದರೆ ಅದನ್ನು ನಾನು ಇಷ್ಟಪಡುವೆನೆಂದು ಹೇಳಲಾರೆನು. ಪುರುಷರು ಒಂದಕ್ಕಿಂತ ಹೆಚ್ಚು ವಿವಾಹ ಬಯಸುವವರಾಗಿದ್ದಾರೆ."

ಮಿಡ್ಲೆಸ್ಸೆಕ್ಸ್ ಪ್ರಾಂತ್ಯದ ಹೆಯ್ಸ್ (Hayes in Middlesex) ನಲ್ಲಿ ಒಬ್ಬ ಆಂಗ್ಲೇಯ ಸ್ತ್ರೀ ಎಷ್ಟು ಪರದಾ ಸಂಪ್ರದಾಯ ಆಚರಿಸಬಲ್ಲಳೋ ಅಷ್ಟು ವೆಲರಿ ಸಹ ವಿವಾಹದ ನಂತರ ಆಚರಿಸಿದಳು.

"ನಾನು ಇಲ್ಲಿ ಅವಕುಂಠನವನ್ನು ಧರಿಸುವುದಿಲ್ಲ. ನಾನು ಮುಖಪರದೆ ಧರಿಸಿದರೆ ಜನರು ನನ್ನನ್ನು ದಿಟ್ಟಿಸಿ ನೋಡಲು ತೊಡಗುತ್ತಾರೆ. ಪರದೆಯ ಉದ್ದೇಶ ಪುರುಷರ ಗಮನ ಸ್ತ್ರೀಯರ ಕಡೆಗೆ ಹರಿಯದಂತೆ ಮಾಡುವುದಾಗಿದೆ. ನಾನು ಹೊರಗೆ ಯಾವುದಾದರೂ ಅಂಗಡಿಗೆ ಹೋಗುವಾಗ ನನ್ನ ಶರೀರವನ್ನು ಪೂರ್ಣವಾಗಿ ಮುಚ್ಚುವಂತಹ ಬಟ್ಟೆಗಳನ್ನು ಧರಿಸುತ್ತೇನೆ. ನಾನು ಇಜಾರು ಅಥವಾ ನೀಳವಾದ ಉಡುಪನ್ನೂ ಉದ್ದವಾದ ಕೋಟನ್ನೂ ತಲೆ ಮುಚ್ಚುವ ಬಟ್ಟೆಯನ್ನೂ ಧರಿಸುತ್ತೇನೆ. ನಾನು ಸೌಂದರ್ಯವರ್ಧಕ ಸಾಧನಗಳನ್ನು ಅತ್ಯಲ್ಪ ಉಪಯೋಗಿಸುತ್ತೇನೆ–ಪರರು ನನ್ನ ಕಡೆಗೆ ಆಕರ್ಷಿತರಾಗದಂತೆ ಮಾಡಲಿಕ್ಕಾಗಿ. ನಾನು ಪುರುಷರನ್ನು ನೋಡುವುದಿಲ್ಲ".

"ಗ್ಯಾಸಿನ ಮೀಟರನ್ನು ನೋಡಲು ಯಾರಾದರೂ ಪುರುಷ ಬಂದರೆ ನಾನು ಆತನಿಗೆ ಮನೆಯೊಳಗೆ ಬರಲು ಅನುಮತಿಸುತ್ತೇನೆ. ಆದರೆ ಹೆಚ್ಚಿನ ಮಾತಿಗೆ ಆಸ್ಪದ ಕೊಡುವುದಿಲ್ಲ. ನನ್ನ ಪತಿಯ ಸ್ನೇಹಿತರಾದ ಪುರುಷರು ಯಾರಾದರೂ ಮನೆಗೆ ಬಂದರೆ ಅವರಿಗೆ ಟೀ ಕೊಡುತ್ತೇನೆ. ಆದರೆ ಅವರ ಜೊತೆ ಕುಳಿತು ಕೊಳ್ಳಲಾರೆನು. ಅವರು ತಮ್ಮ ಪತ್ನಿಯರನ್ನು ಕರೆತಂದರೆ ನಾವು ಸ್ತ್ರೀಯರು ಪ್ರತ್ಯೇಕ ಕೋಣೆಯಲ್ಲಿ ಮಾತಾಡಲು ಒಟ್ಟಿಗೆ ಸೇರುವೆವು".

"ಸ್ತ್ರೀ ಪುರುಷರನ್ನು ಬೇರೆ ಬೇರೆಯಾಗಿಡುವುದರಿಂದ ಜೀವನ ಸುಖಕರವಾಗಿರುವುದೆಂದು ನಾವು ಗ್ರಹಿಸುತ್ತೇವೆ. ನಮ್ಮ ಮಕ್ಕಳು ಅವರ ಭಿನ್ನಲಿಂಗದ ಸ್ನೇಹಿತರನ್ನು ಹೊಂದಲಾರರೆಂದು ಆಶಿಸುತ್ತೇವೆ. ಸ್ತ್ರೀ ಪುರುಷರು ವಿವಾಹಕ್ಕೆ ಮುಂಚೆ ಸಂಪರ್ಕ ಸ್ಥಾಪಿಸುವುದರಿಂದ ನೈತಿಕವಾದ ಬಹಳ ದೊಡ್ಡ ಆಪತ್ತು ಸಂಭವಿಸುವುದು".

"ನನ್ನ ಮಗಳಿಗೆ ಯೋಗ್ಯ ಶಿಕ್ಷಣವಿತ್ತು ಆಕೆ ನರ್ತನಕ್ಕೆ ಹೋಗದಂತಹ ಮತ್ತು ಪುರುಷ ಸ್ನೇಹಿತರನ್ನು ಬಯಸದಂತಹ ಮನಸ್ಥಿತಿ ಹೊಂದುವಂತೆ ಮಾಡುವೆನು" ಎಂದು ಆಕೆ ಹೇಳಿದಳು. ವೆಲರಿಯ ಮಗ ಆದಮನಿಗೆ 3½ ವರ್ಷ ಪ್ರಾಯ ಮಗಳು ಆಯಿಷಾಳಿಗೆ 2 ವರ್ಷ ಪ್ರಾಯವಾಗಿದೆ".

"ಬಲಶಾಲಿಯಾದ ಕೌಟುಂಬಿಕ ಜೀವನ ಹೊಂದಿರುವುದರಿಂದ ನಾವು ತುಂಬಾ ಲಾಭ ಪಡೆದಿದ್ದೇವೆ" ಎಂದು ಆಕೆ ಹೇಳಿದಳು.

## ಮಿಸ್ಸೆಸ್ ಮೇರಿ ಸಾಖಿ

ಮೇರಿಗೆ ಆಕೆಯ ಫೊಟೋ ತೆಗೆಸಲು ಇಷ್ಟವಿಲ್ಲ. "ನಾನು ಪರದಾ ಸಂಪ್ರದಾಯ ಆಚರಿಸುವ ಸ್ತ್ರೀ. ಅದನ್ನು ಚಿಂತಿಸಲು ಸಹ ಸಾಧ್ಯವಿಲ್ಲ"* ಎಂದು ಆಕೆ ಹೇಳಿದಳು.

ಡೊರ್‌ಸೆಟ್ ಬೋರ್ಡಿಂಗ್ ಸ್ಕೂಲ್ (Dorset Boarding School)ನ ಕನ್ಯಾಸ್ತ್ರೀಯರು ಮೇರಿಯ ಈ ಅಭಿಪ್ರಾಯದ ಕುರಿತು ಏನು ಯೋಚಿಸುವರು? ಮೇರಿ ಇದೇ ಶಾಲೆಯಲ್ಲಿ ಮೇರಿ ಪರ್ಟ್ (Mary Peart) ಎಂಬ ಹೆಸರಿನಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಳು. ಮೇರಿಯ ತಾಯಿ ಒಬ್ಬ ಅಧ್ಯಾಪಿಕೆ ಮತ್ತು ತಂದೆ ವ್ಯಾಪಾರಿಯಾಗಿದ್ದರು. ಆಕೆ ಅವರ ಏಕಮಾತ್ರ ಪುತ್ರಿ. ಮೇರಿ ಒಬ್ಬ ಅಹ್ಮದಿಯಾ ಮಿಶನರಿಯನ್ನು ಭೇಟಿಯಾಗಿ ಮತಾಂತರಗೊಂಡಾಗ "ನನ್ನ ತಾಯಿ ನಾನು ಹುಚ್ಚಿಯಾಗಿರುವೆನೆಂದು ಎಣಿಸಿದರು" ಎಂದಳು.

ಮಿಸ್ಸೆಸ್ ಸಾಖಿ ಕ್ಲಾಪ್‌ಹ್ಯಾಮ್ (Clapham) ಎಂಬಲ್ಲಿ ವಾಸಿಸುತ್ತಾಳೆ. ಅವಳು ಅಲ್ಲಿ ಮುಖಪರದೆ ಧರಿಸುವುದಿಲ್ಲ. ಅದು ಸರಿಯೆನಿಸುವುದಿಲ್ಲ. ಅವಳ ಮಗನಿಗೆ 17 ವರ್ಷ ಪ್ರಾಯ ಮಗಳು ಸಾರಾಳಿಗೆ 21 ವರ್ಷವಾಗಿದೆ. "ಸಾರಾ ಪರದೆಯನ್ನು ಯಾವಾಗ ಧರಿಸುವಳು" ಎಂದು ಹೆಂಗಸರು ಮಸೀದಿಯಲ್ಲಿ ಕೆಲವೊಮ್ಮೆ ಕೇಳುತ್ತಾರೆ. "ಅವಳು ಪರದೆಯನ್ನು ಧರಿಸಿದರೆ ಅವಳು

---

* ಪತ್ರಿಕೆಯಲ್ಲಿ ಪ್ರಕಟಗೊಳಿಸಲಿಕ್ಕಾಗಿ ಫೊಟೋ ತೆಗೆಯುವುದನ್ನು ಈ ಮಹಿಳೆ ಬಯಸಲಿಲ್ಲವೆಂದು ತಿಳಿಯಬೇಕಾಗಿದೆ. —ಅನು.

ಯಾವುದೋ ಅಭಿನಯ ಮಾಡುತ್ತಿದ್ದಾಳೆಂದು ಸಹಪಾಠಿಗಳು ಯೋಚಿಸುವರು. ಅವಳು ಪಾಕಿಸ್ಥಾನಕ್ಕೆ ಹೋದರೆ ಪರದೆ ಧರಿಸುವಳು" ಎಂದು ಮಿಸ್ಸೆಸ್ ಸಾಖಿ ಹೇಳುತ್ತಾಳೆ.

ಸಾರಾ ತನ್ನ ಕ್ಲಾಸಿನಲ್ಲಿ ಅತ್ಯುತ್ತಮ ಸ್ಥಾನವನ್ನು ಪಡೆದು ಪಾಸಾಗಿದ್ದು ಈಗ ಲಂಡನ್ ಯೂನಿವರ್ಸಿಟಿಗೆ ಹೋಗಿ ಸೈಕೋಲಜಿ (ಮನಶ್ಶಾಸ್ತ್ರ) ಕಲಿಯುತ್ತಿದ್ದಾಳೆ. ಅವಳು ಮನೆಯಲ್ಲಿಯೇ ವಾಸಿಸುತ್ತಿದ್ದಾಳೆ. ಆಕೆಗೆ ಪುರುಷ ಸ್ನೇಹಿತರಿಲ್ಲ. ಆಕೆ ಸಂಜೆ ಹೊತ್ತು ಮನೆಯಿಂದ ಹೊರಗೆ ಹೋಗುವುದೂ ಇಲ್ಲ. ಅವಳ ಪ್ರಾಯವನ್ನು ಪರಿಗಣಿಸಿದರೆ ಅವಳು ಸಂಯಮನದಿಂದ ಕೂಡಿದ ಏಕಾಂತ ಜೀವನವನ್ನು ಅನುಭವಿಸುತ್ತಿದ್ದಾಳೆ. ಸಾರಾ ನೈತಿಕವಾಗಿ ಸುರಕ್ಷಿತವಾಗಿರುವ ಭಾಗ್ಯವನ್ನು ಹೊಂದಿರುವಳೆಂದು ತಾಯಿ ಹೇಳುತ್ತಾಳೆ. ಸಾರಾ ಅದನ್ನು ಒಪ್ಪುತ್ತಾಳೆ.

ಸಿನಿಮಾಕ್ಕೆ ಹೋಗುವುದು ಅಥವಾ ನರ್ತನಮಾಡು ಆಕೆಗೆ ಊಹಿಸಲು ಕೂಡಾ ಸಾಧ್ಯವಿಲ್ಲ. "ಅದು ಸಾಧ್ಯವೇ ಇಲ್ಲ. ಅದು ನನ್ನ ಹೃದಯವನ್ನೊಡೆಯುವುದು" ಎಂದು ಮಿಸ್ಸೆಸ್ ಸಾಖಿ ಹೇಳುತ್ತಾಳೆ. "ಸಾರಾ ಕಾಲೇಜಿನ ಸಮಯದ ನಂತರ ಮನೆಯಲ್ಲೇ ಇರುತ್ತಾಳೆ. ಅದನ್ನು ಅವಳು ಇಷ್ಟಪಡುತ್ತಾಳೆ. ಅದು ಆಕೆಗೆ ಒಳ್ಳೆಯದೆಂದು ಭಾವಿಸುತ್ತಾಳೆ. ಒಬ್ಬ ಸ್ತ್ರೀ ತನ್ನ ಪತಿಗಾಗಿ ಕಣ್ಣೆರಿಸಬೇಕಾಗಿದೆ. ಈ ರಾಜ್ಯದಲ್ಲಿ ಅಲೆದಾಡುತ್ತಿರುವ ಹುಡುಗಿಯರು ಯಥಾರ್ಥವಾಗಿ ಗಂಡಂದಿರನ್ನು ಹುಡುಕುತ್ತಿದ್ದಾರೆ. ಸಾರಾಳಿಗೆ ಇದು ಅಗತ್ಯವಿಲ್ಲ. ಇದೊಂದು ಅನುಕೂಲತೆಯಾಗಿದೆ".

ಸಾರಾಳಿಗೆ ಏರ್ಪಾಡುಗೊಳಿಸಲ್ಪಟ್ಟ ವಿವಾಹ ನಡೆಯುವುದು. ಮಿಸ್ಸೆಸ್ ಸಾಖಿಯ ವಿವಾಹದ ಏರ್ಪಾಡು ಆಕೆಯ ತಂದೆ ತಾಯಿಗಳ ನಿಧನದ ನಂತರ ಅಹ್ಮದಿಯಾ ಮಿಶನರಿ ಮಾಡಿದರು.

"ನಾನು ಈ ಮಾರ್ಗವನ್ನು ಸ್ವೀಕರಿಸಿದುದು ನನಗೆ ತುಂಬಾ ಅನುಕೂಲಕರವಾಯಿತು" ಎಂದು ಮಿಸ್ಸೆಸ್ ಸಾಖಿ ತನ್ನ ಲಂಡನ್ನಿನಲ್ಲಿರುವ ಮನೆಯಲ್ಲಿ ಸುರಕ್ಷಿತಳೂ ಸಂತೋಷಭರಿತಳೂ ಆಗಿದ್ದು ಹೇಳಿದರು. "ನನ್ನ ತಾಯಿ ತೀರಿ ಹೋದಾಗ ಮಿಶನರಿ ಹೇಳಿದಳು 'ನೀವು ಒಬ್ಬಂಟಿಗಳಾಗಿರುವುದು ನಿಮಗೆ ಕಷ್ಟಕರವಾಗಬಹುದು. ಪಾಕಿಸ್ಥಾನಕ್ಕೆ ಹೊರಡಲು ಸಿದ್ಧನಾಗಿರುವ ಒಬ್ಬರ ಪರಿಚಯ ನನಗಿದೆ. ನೀವು ಒಪ್ಪುವುದಾದರೆ ನಿಮ್ಮ ವಿವಾಹವಾಗಲು ಅವರು ಸಿದ್ಧರಿದ್ದಾರೆ'".

"ನಿಮ್ಮನ್ನು ವಿವಾಹಕ್ಕಾಗಿ ಪ್ರಥಮ ಭೇಟಿಯಾದಾಗ ನಿಮ್ಮ ಪತಿ ನಿಮ್ಮ ಕುರಿತು ಯಾವ ಭಾವನೆ ಹೊಂದಿದ್ದರು ಎಂದು ನಿಮ್ಮ ಪತಿ ಕಳೆದ ಇಪ್ಪತ್ತಕ್ಕಿಂತ ಹೆಚ್ಚು ವರ್ಷದ ವೈವಾಹಿಕ ಜೀವಿತ ಕಾಲದಲ್ಲಿ ಯಾವಾಗಲಾದರೂ ಹೇಳಿರುವರೋ?'' ಎಂದು ಕೇಳಿದಾಗ ಮಿಸ್ಸೆಸ್ ಸಾಖಿ ಹೇಳಿದರು: "ನಾನು ಆ ರೀತಿ ಪ್ರಶ್ನಿಸಿಯೇ ಇಲ್ಲ. ನನ್ನ ಪತಿ ನನ್ನೊಡನೆ ಸದಾಕಾಲ ಉತ್ತಮವಾಗಿ ವರ್ತಿಸುತ್ತಿದ್ದಾರೆ. ನನ್ನ ಮಗಳನ್ನು ಬಹಳ ಆದರಿಸುತ್ತಾರೆ. ಸಾರಾ ಜನಿಸಿದಾಗ ನನ್ನ ಪತಿ ಆಸ್ಪತ್ರೆಗೆ ಬಂದು ನನ್ನನ್ನು ಕಂಡರು. ಆಗ ತಾನೆ ಮಗುವನ್ನು ಪ್ರಸವಿಸಿದ ನನ್ನನ್ನು ಅವರು ಚುಂಬಿಸಬಹುದೆಂದು ನಾನು ಗ್ರಹಿಸಿದ್ದೆ. ಅವರು ಆ ರೀತಿ ಮಾಡಲಿಲ್ಲ. 'ನಾನು ಅಷ್ಟು ವಿಕಾರಗೊಂಡಿರುವೆನೆ?' ಎಂದು ನಾನು ಆಲೋಚಿಸಿದೆ. ಆದರೆ ಅವರು ತಮ್ಮ ಪ್ರೇಮವನ್ನು ಕೇವಲ ಬಾಹ್ಯವಾಗಿ ಪ್ರಕಟಗೊಳಿಸುವುದಿಲ್ಲವೆಂದು ಆ ಮೇಲೆ ತಿಳಿಯಿತು''.

ಮಿಸ್ಸೆಸ್ ಸಾಖಿ ತನ್ನ ಮುಖವನ್ನು ಮುಚ್ಚುವುದಿಲ್ಲ. ಆದರೆ ಆಕೆ ತನ್ನ ತಲೆಯನ್ನು ಮುಚ್ಚಿ ಉದ್ದವಾದ ಬಟ್ಟೆಗಳನ್ನು ಧರಿಸಿ ಹೊರಗೆ ಹೋಗುತ್ತಾಳೆ. ಅವಳು ಪುರುಷರೊಂದಿಗೆ ಸಾಮಾಜಿಕ ಕೂಟಗಳಲ್ಲಿ ಸೇರುವುದಿಲ್ಲ. "ನನ್ನ ಪತಿಯವರು ಪುರುಷ ಸ್ನೇಹಿತರನ್ನು ಮನೆಗೆ ಕರೆತಂದರೆ ನಾನು ಹೋಗಿ ಅವರ ಜೊತೆ ಕುಳಿತುಕೊಳ್ಳಲಾರೆನು". ಆ ಸಂದರ್ಭಗಳಲ್ಲಿ ಚಾ ಮತ್ತು ತಿಂಡಿಯನ್ನು ಅವರಿಗೆ ಕೊಟ್ಟು ಮಿಸ್ಸೆಸ್ ಸಾಖಿ ಮನೆಯೊಳಗೆ ಹೋಗುವಳು.

### ಮಿಸ್ಸೆಸ್ ಸೆಲ್ಮಾ ಖಾನ್

ಸೆಲ್ಮಾಳಿಗೆ ಈಗ 35 ವರ್ಷ ಪ್ರಾಯ. ಅಹ್ಮದಿಯಾ ಸಂಘಟನೆಗೆ ಸೇರುವಾಗ ಆಕೆ 21 ವರ್ಷ ಪ್ರಾಯದ ಒಬ್ಬ ನರ್ಸ್ ಆಗಿದ್ದಳು. ಆಕೆಯ ಪತಿ ಒಬ್ಬ ಆಸ್ಪತ್ರೆಯ ವೈದ್ಯರಾಗಿದ್ದಾರೆ. ಅವರು ಸಹ ಅಹ್ಮದಿ. ಅವರು ಲೀಡ್ಸ್‌ನಲ್ಲಿ ವಾಸವಾಗಿದ್ದಾರೆ. ಅವರಿಗೆ ನಾಲ್ಕು ಮಕ್ಕಳಾಗಿವೆ. ಮಗಳು ತಾಹಿರಳಿಗೆ 11 ವರ್ಷ ಪ್ರಾಯ. ಗಂಡು ಮಕ್ಕಳಾದ ಖಾಲಿದ್ 9 ವರ್ಷ, ಕರೀಮ್ 8 ವರ್ಷ, ಇಮ್ರಾನ್ 4 ವರ್ಷ ಪ್ರಾಯದವರಾಗಿದ್ದಾರೆ.

"ನಾನು ನರ್ಸ್ ಆಗಿದ್ದಾಗ ಕೆಲವು ನರ್ತನಗಳಿಗೆ ಮತ್ತು ಸಾಮಾಜಿಕ ಕೂಟಗಳಿಗೆ ಹೋಗಿದ್ದೆ. ಆದರೆ ನನಗೆ ಅವುಗಳಲ್ಲಿ ಹೆಚ್ಚಿನ ಆಸಕ್ತಿ ಇರಲಿಲ್ಲ. ನಾನು ಮೆಥೋಡಿಸ್ಟ್ ಸಂಪ್ರದಾಯಕ್ಕೆ ಸೇರಿದ ಕುಟುಂಬದವಳಾಗಿದ್ದೆ. ನಾನು ಲೇಕ್ ಡಿಸ್ಟ್ರಿಕ್ಟ್‌ನ ಯಂಗ್ ನರ್ಸಸ್ ಕ್ರಿಶ್ಚಿಯನ್ ಅಸೋಸಿಯೇಶನ್ (ಯುವ ಕ್ರೈಸ್ತ ನರ್ಸ್‌ಗಳ ಸಂಘ)ಗೆ ಸೇರಿದ್ದೆ. ನಾವು ವಿವಿಧ ಧರ್ಮಗಳ ಕುರಿತು ಚರ್ಚಿಸುತ್ತಿದ್ದೆವು. ಅಹ್ಮದಿಯಾ ಸಿದ್ಧಾಂತಗಳು ನನಗೆ ಆಕರ್ಷಕವಾಗಿದ್ದುವು. ನಾನು ಮತಾಂತರಗೊಂಡಾಗ ನನ್ನ ಸಹೋದರಿಯರು ಬಹಳ ಸಹಾನುಭೂತಿ ತೋರಿಸಿದರು. ನನ್ನ ತಾಯಿಗೆ ಅದು ಮೊದಲಿಗೆ ಇಷ್ಟಕರವಾಗಿಲಿರಲ್ಲವಾದರೂ ಈಗ ಆಕೆ ಸಂತೋಷಗೊಂಡಿದ್ದಾಳೆ.

ನಾನು ಮತಾಂತರಗೊಂಡು ಆರು ತಿಂಗಳು ಕಳೆದ ನಂತರ ನನ್ನ ಭಾವೀ ಪತಿಯನ್ನು ಭೇಟಿಯಾದೆನು. ನಾನು ಅವರ ಪತ್ನಿಯಾಗುವೆನೋ ಎಂದು ಅವರು ನನ್ನನ್ನು ಕೇಳಿದರು. ಅವರು ನನ್ನ ಕೈ ಹಿಡಿಯಲಿಲ್ಲ. ನನ್ನನ್ನು ಚುಂಬಿಸಲೂ ಇಲ್ಲ. ನನ್ನನ್ನು ಪ್ರೀತಿಸುವುದಾಗಿ ಹೇಳಲೂ ಇಲ್ಲ. ನಾನು ಅವರಲ್ಲಿ ತುಂಬಾ ಅನುರಕ್ತಳಾಗಿದ್ದೆ. ಆದರೆ ನಾನು ಅದನ್ನು ತೋರಿಸಲಿಲ್ಲ.

"ಮಧ್ಯಪೂರ್ವದಲ್ಲಿ ಪರದಾ ಪದ್ಧತಿಯನ್ನು ಯಾವ ರೀತಿ ಆಚರಿಸುತ್ತಿದ್ದಾರೋ ಆ ರೀತಿಯಲ್ಲಿ ನಾನು ಪರದಾ ಪದ್ಧತಿಯನ್ನು ಆಚರಿಸುತ್ತಾ ಇಲ್ಲ. ನಾನು ಹೊರಗೆ ಹೋಗುವಾಗ ತಲೆಯನ್ನು ಮುಚ್ಚುವಂತೆ ವಸ್ತ್ರಧಾರಣೆ ಮಾಡುತ್ತೇನೆ".

"ನಾನು ಅಂಗಡಿಗೆ ಹೋಗಿ ಏನಾದರೂ ಸಾಮಗ್ರಿ ಖರೀದಿ ಮಾಡುವಾಗ ಇತರರಂತೆ ಮಾತಾಡುತ್ತೇನೆ. ಆದರೆ ಹರಟುವುದಿಲ್ಲ".

"ಸ್ತ್ರೀ ಮತ್ತು ಪುರುಷರ ಮಧ್ಯೆ ಒಂದು ಪರದೆಯಿರಿಸುವುದೇ ಪರದಾ ಪದ್ಧತಿಯ ಅರ್ಥ. ಕುಟುಂಬದಲ್ಲಿ ಪುರುಷರ ಸಂಪರ್ಕವಿರುತ್ತದೆ. ಪುರುಷಸ್ನೇಹಿತರ ನಷ್ಟಕ್ಕಿಂತ ಹೆಚ್ಚು ಲಾಭ ಪರದಾ ಪದ್ಧತಿಯಿಂದ ಕುಟುಂಬಕ್ಕೆ ದೊರೆಯುತ್ತದೆ".

"ಸಮಯಬಂದಾಗ ನನ್ನ ಮಕ್ಕಳ ವಿವಾಹ ನಾನು ಏರ್ಪಡಿಸುವೆನು. ಕ್ರಮಪಡಿಸಿದ ವಿವಾಹ ಸಂಪ್ರದಾಯ ಬಹಳ ವಿಜಯಕರವೆಂದು ಕಂಡುಬರುತ್ತದೆ. ಪಾಶ್ಚಿಮಾತ್ಯ ಸಮಾಜದಲ್ಲಿರುವ ವಿವಾಹ ವಿಚ್ಛೇದನದ ಆಧಿಕ್ಯ ಮತ್ತು ಅವಿವಾಹಿತ ಮಾತೃತ್ವದ ಸಂಖ್ಯೆಯನ್ನು ನೋಡಿರಿ. ನಾವು ಈ ರೀತಿಯ ಪ್ರೇರಣೆಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುತ್ತೇವೆ".

"ನನ್ನ ಮಗಳಿಗೆ ಈಗ 11 ವರ್ಷ ಪ್ರಾಯ. ಹುಡುಗರೊಂದಿಗೆ ಸೇರಬಾರದೆಂದು ಅವಳಿಗೆ ಈಗಾಗಲೇ ಗೊತ್ತಿದೆ. ಅವಳ ಸ್ನೇಹಿತೆ ಒಂದು ಔತಣವೇರ್ಪಡಿಸಿ ಹುಡುಗರನ್ನು ಆಮಂತ್ರಿಸಿದರೆ ಆಕೆ ನನ್ನೊಡನೆ ಹೇಳುತ್ತಾಳೆ. ನಾನು ಅವಳಿಗೆ ಬೇರೆಯೇ ಸತ್ಕಾರದ ಏರ್ಪಾಡು ಮಾಡಿ ಅವಳು ಹುಡುಗರ ಔತಣ ಕೂಟಕ್ಕೆ ಹೋಗದೆ ಇದ್ದುದನ್ನು ಪರಿಹರಿಸುತ್ತೇನೆ".

(ಅನುವಾದ: M. U. R.)


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ◆ ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

# ★ ಡಾ। ಕೋವೂರ್ ಮತ್ತು ಅಹ್ಮದಿಯರು ★

ಡಾ। ಕೋವೂರ್, ಸಪ್ಟೆಂಬರ್ 18ರಂದು ಶ್ರೀಲಂಕಾದಲ್ಲಿ ನಿಧನರಾದರು. ಅವರು ಪ್ರಸಿದ್ಧ ವಿಚಾರವಾದಿಯೂ ನಾಸ್ತಿಕನೂ ಆಗಿದ್ದರು. ದಿವ್ಯತ್ವವನ್ನು ವಾದಿಸುವವರಿಗೆ ಪಂಥಾಹ್ವಾನವಿತ್ತು ಅವರು ಕೋಲಾಹಲವೆಬ್ಬಿಸುತ್ತಿದ್ದರೆಂದೂ ಬಹಿರಂಗ ಪಂಥಾಹ್ವಾನದ ಮೂಲಕ ದೈವವಿಶ್ವಾಸಿಗಳೆಡೆಯಲ್ಲಿ ಗೊಂದಲವನ್ನುಂಟುಮಾಡಿದ್ದರೆಂದೂ ಅವರ ಮರಣವಾರ್ತೆಯನ್ನು ಪ್ರಕಟಿಸಿ ಕೇರಳದ ಒಂದು ದಿನಪತ್ರಿಕೆ ಪ್ರಸ್ತಾಪಿಸಿತ್ತು.

ಡಾ। ಕೋವೂರರ ಪಂಥಾಹ್ವಾನಗಳು ಯಥಾರ್ಥ ದೈವವಿಶ್ವಾಸಿಗಳಿಗಾಗಲೀ, ಅವರ ಧಾರ್ಮಿಕ ವಿಶ್ವಾಸಗಳಿಗಾಗಲೀ ತುಸುವಾದರೂ ಹಾನಿಯನ್ನುಂಟುಮಾಡಲು ಪ್ರಯೋಜನಕಾರಿಯಾಗಲಿಲ್ಲವೆಂಬುದು ವಾಸ್ತವಿಕ. ದೈವವಿಶ್ವಾಸದ ಹೆಸರಿನಲ್ಲಿ ಮೋಸಮಾಡುವವರ ನಿಜರೂಪವನ್ನು ಬಯಲುಗೊಳಿಸಲು ಅವರಿಗೆ ಸಾಧ್ಯವಾಗಿರಬಹುದು. ಆದರೆ ಯಥಾರ್ಥ ಭಕ್ತರ ಸತ್ಯವಿಶ್ವಾಸವನ್ನು ತುಸುವಾದರೂ ಬಲಹೀನಗೊಳಿಸಲಿಕ್ಕೋ ನಿರ್ವೀರ್ಯಗೊಳಿಸಲಿಕ್ಕೋ ಅವರಿಗೆ ಸಾಧ್ಯವಾಗಲಿಲ್ಲವೆಂಬುದು ಸತ್ಯ.

ಡಾ। ಕೋವೂರ್ ಇತ್ತೀಚೆಗೆ ದೈವವಿಶ್ವಾಸಿಗಳಿಗೂ ದಿವ್ಯದೃಷ್ಟಾಂತಗಳನ್ನು ತೋರಿಸಬಹುದೆಂದು ವಾದಿಸುವವರಿಗೂ ವಿರುದ್ಧವಾಗಿ ಎಸೆದ ಪಂಥಾಹ್ವಾನದ ಕುರಿತು ಹೈದರಾಬಾದಿನ ಒಬ್ಬ ಅಹ್ಮದಿ ಸಹೋದರರಾದ ಫಾರ್‍ಖಿಲ್ ಅಲ್ಲಾವುದ್ದೀನ್ ಸಾಹೇಬರು ಕಳೆದ ಏಪ್ರಿಲ್ ತಿಂಗಳಿನಲ್ಲಿ ಅಹ್ಮದಿಯಾ ಸಂಘಟನೆಯ ಆಧ್ಯಾತ್ಮಿಕ ನಾಯಕರಿಗೆ ಒಂದು ಪತ್ರ ಬರೆದಿದ್ದರು. ಅದಕ್ಕೆ ಉತ್ತರವಾಗಿ, ಡಾ। ಕೋವೂರ್ ತನ್ನೊಂದಿಗೆ ಆರು ತಿಂಗಳ ಕಾಲ ರಬ್ವಾದಲ್ಲಿ ವಾಸಿಸುವ ಪಕ್ಷದಲ್ಲಿ, ದೈವಾಸ್ತಿತ್ವದ ಕುರಿತು ಬೋಧ್ಯವಾಗುವ ದಿವ್ಯದೃಷ್ಟಾಂತವನ್ನು ತೋರಿಸಿಕೊಡಬಹುದೆಂದೂ ಅದಕ್ಕೆ ಸಂಬಂಧಿಸಿದ ಪ್ರಯಾಣ ಖರ್ಚು ಮತ್ತು ಇತರ ಎಲ್ಲಾ ವೆಚ್ಚವನ್ನು ತಾನು ವಹಿಸಿಕೊಳ್ಳುವೆನೆಂದೂ ಈ ನಿರ್ದೇಶವನ್ನು ಡಾ। ಕೋವೂರರ ಮುಂದೆ ಸಮರ್ಪಿಸಬೇಕೆಂದೂ ಅಹ್ಮದಿಯಾ ಖಲೀಫರು ಬರೆದು ತಿಳಿಸಿದರು.

ಫಾರ್‍ಖಿಲ್ ಅಲ್ಲಾವುದ್ದೀನ್ ಸಾಹೇಬರು ಡಾ। ಕೋವೂರರಿಗೆ ಈ ಸಂದೇಶವನ್ನು ತಲಪಿಸಿದರು. ರಿಜಿಸ್ಟರ್ ಮಾಡಿದ ಪತ್ರಗಳು ಡಾ। ಕೋವೂರರಿಗೆ ಹಸ್ತಗತವಾಗಿದ್ದರೂ ಪ್ರಸ್ತುತ ನಿರ್ದೇಶವನ್ನು ಸ್ವೀಕರಿಸಲಿಕ್ಕೋ, ಮರುತ್ತರವಾದರೂ ನೀಡಲಿಕ್ಕೋ ಅವರು ಒಡಂಬಡಲಿಲ್ಲ. ಫಾರ್‍ಖಿಲ್ ಸಾಹೇಬರು ಇದರ ಕುರಿತು ಮದ್ರಾಸಿನ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬರಿಗೆ ತಿಳಿಸಿದರು. ಅವರು ಶ್ರೀಲಂಕಾದ ಇನ್‌ಚಾರ್ಜ್ ಮಿಶನರಿಯೂ ಆಗಿರುವುದರಿಂದ, ಈ ವಿಷಯದಲ್ಲಿ ಶ್ರೀಲಂಕಾ ಅಹ್ಮದಿಯಾ ಜಮಾಅತಿನ ಅಧ್ಯಕ್ಷರಿಗೂ ಕಾರ್ಯದರ್ಶಿಯವರಿಗೂ ಪತ್ರ ಬರೆದರು. ಡಾ। ಕೋವೂರರನ್ನು ಕೊಲಂಬೊದಲ್ಲಿರುವ ಅವರ "ತಿರುವಲ್ಲ" ಎಂಬ ವಸತಿಯಲ್ಲಿ ಭೇಟಿಯಾಗಿ ಅಹ್ಮದಿಯಾ ನಾಯಕರ ಸಂದೇಶವನ್ನು ಅವರ ಮುಂದಿರಿಸಿ, ಒಂದು ಮರುತ್ತರವನ್ನು ಕಳುಹಿಸುವಂತೆ ಮಾಡಬೇಕೆಂದು ಅವರಿಗೆ ತಿಳಿಸಲಾಗಿತ್ತು. ಅದರನ್ವಯ ಕಳೆದ ಆಗಸ್ಟ್ 23ರಂದು ಸಂಜೆ ಶ್ರೀಲಂಕಾ ಅಹ್ಮದಿಯಾ ಅಧ್ಯಕ್ಷರ ನೇತೃತ್ವದಲ್ಲಿ ನಾಲ್ವರ ಒಂದು ಪ್ರತಿನಿಧಿಸಂಘ ಡಾ। ಕೋವೂರರ ವಸತಿಗೆ ಹೋಗಿ ಅವರನ್ನು ಭೇಟಿಯಾಗಿ ಖಲೀಫರ ನಿರ್ದೇಶವನ್ನು ಡಾ। ಕೋವೂರರ ಮುಂದೆ ಇನ್ನೊಮ್ಮೆ ಇರಿಸಲಾಯಿತು.

ಡಾ। ಕೋವೂರ್ ಆರು ತಿಂಗಳ ಕಾಲ ರಬ್ವಾದಲ್ಲಿ ತನ್ನೊಂದಿಗೆ ವಾಸಿಸುವ ಪಕ್ಷದಲ್ಲಿ ಒಂದು ದಿವ್ಯದೃಷ್ಟಾಂತವನ್ನು ತೋರಿಸಬಹುದೆಂದೂ ಅವರ 'ಬ್ಲಡ್ ಕ್ಯಾನ್ಸರ್' (ರಕ್ತ ಅರ್ಬುದ) ರೋಗ ಪ್ರಾರ್ಥನೆಯ ಮುಖಾಂತರ ಗುಣಪಡಿಸಬಹುದೆಂದೂ ಅಹ್ಮದಿಯಾ ಖಲೀಫರು ಕಳುಹಿಸಿದ ಸಂದೇಶವಾಗಿತ್ತು. ಆದರೆ ಈ ವಿಷಯದಲ್ಲಿ ಡಾ। ಕೋವೂರರ ಉತ್ತರ ಸಂಪೂರ್ಣ ನಿರಾಶದಾಯಕವಾಗಿತ್ತು. ಸಾವಿರ ರೂಪಾಯಿ ಠೇವಣಿ ಇರಿಸಬೇಕೆಂದು ಅವರು ಅಗತ್ಯಪಡಿಸಿದರಲ್ಲದೆ, ಒಬ್ಬ ಮನಶ್ಶಾಸ್ತ್ರಜ್ಞನಿಗೆ ರೋಗವನ್ನು ಗುಣಪಡಿಸಲು ಸಾಧ್ಯವಿದೆಯೆಂದೆಲ್ಲಾ ಹೇಳಿ ನಿರ್ದೇಶದ ಮೌಲ್ಯವನ್ನು ಕಡಿಮೆಮಾಡಿ ತೋರಿಸಲು ಪ್ರಯತ್ನಿಸಿದರು. ಒಂದು ಬೆಕ್ಕಿನಮರಿಯನ್ನು ಕಾಣಿಸಿಕೊಡುವ ರೀತಿಯಲ್ಲಿ

(21ನೆ ಪುಟಕ್ಕೆ)

# ಓದಿದ್ದು............

## ಶ್ಲಾಘನೆ

"ನಮ್ಮೆರಡು ರಾಜ್ಯಗಳು ಬಹಳ ದೂರವಾಗಿದ್ದರೂ ಇತ್ತೀಚೆಗಿನ ವರ್ಷಗಳಲ್ಲಿ ಕಾನೂನಿಗೆ ಮತ್ತು ಧರ್ಮಕ್ಕೆ ಸಂಬಂಧಿಸಿದ ಸಾಮಾಜಿಕ ಸಂಪರ್ಕದಿಂದಾಗಿ ನಮ್ಮೆರಡು ರಾಷ್ಟ್ರಗಳ ಸಂಬಂಧ ವರ್ಧಿಸಿದುದು ಕುತೂಹಲಕಾರಿಯಾದರೂ ಸ್ವಾಗತಾರ್ಹ ಮತ್ತು ಫಲಕಾರಿಯಾದ ವಾಸ್ತವಿಕತೆಯಾಗಿದೆ. ಮೂರು ವರ್ಷಗಳ ಹಿಂದೆ ನಿಮ್ಮ ರಾಜ್ಯದ ಇನ್ನೋರ್ವ ಸುಪುತ್ರರಾದ ನ್ಯಾಯವಾದಿ, ರಾಜಕಾರಣಿ ಮತ್ತು ಧಾರ್ಮಿಕ ಮುಂದಾಳಾದ ಸರ್ ಮುಹಮ್ಮದ್ ಝಫ್ರುಲ್ಲಾ ಖಾನರ ಸಂದರ್ಶನದ ಸೌಭಾಗ್ಯವನ್ನು ನಮಗೆ ಪಡೆಯಲು ಸಾಧ್ಯವಾಯಿತು. ಅದಕ್ಕಿಂತ ಎಷ್ಟೋ ಸಮಯದ ಹಿಂದ ಆತ್ಮೋನ್ನತಿಯ ಮಾರ್ಗದಲ್ಲಿ ನಮ್ಮ ಜನರು ನಿಮ್ಮ ರಾಜ್ಯದ ಅಹ್ಮದಿಯಾ ಸಂಘಟನೆಗೆ ಸೇರಿದ ಉತ್ಸಾಹಿಗಳೂ ತ್ಯಾಗಶೀಲರೂ ಆದ ಇಸ್ಲಾಮ್ ಧರ್ಮ ಬೋಧಕರ ಸದಾ ವಿಸ್ತೃತಗೊಳ್ಳುತ್ತಿರುವ ವರ್ಚಸ್ಸಿನಿಂದ ಪ್ರಭಾವಿತರಾಗಿ ಗಣಿಸಲಸಾಧ್ಯವಾದ ಪ್ರಯೋಜನ ಪಡೆದಿರುವರು. ಈ ಸಂಘಟನೆಯ ಕಾರ್ಯಕರ್ತರ ಕರ್ತೃತ್ವ ಶಕ್ತಿಯಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಸ್ಥಾಪಿತವಾಗಿ ಉತ್ತಮ ಫಲವನ್ನಿತ್ತಿವೆ. ಈ ವಿದ್ಯಾಸಂಸ್ಥೆಗಳಿಂದ ಹೊರಬರುತ್ತಿರುವ ವಿದ್ಯಾರ್ಥಿಗಳು ಪೈಗಂಬರರ ಜಾಣ್ಮೆಯ ಪ್ರತೀಕಗಳಾಗಿದ್ದು ನಮ್ಮ ರಾಜ್ಯದಲ್ಲಿ ಬಹುಸಂಖ್ಯೆಯಲ್ಲಿರುವ ಮುಸ್ಲಿಮ್ ಜನಸಮೂಹದ ಆಧ್ಯಾತ್ಮಿಕ ಜೀವನಕ್ಕೆ ಫಲದಾಯಕ ಮತ್ತು ಸದಾ ವಿಸ್ತರಿಸುವ ಕೊಡುಗೆಯನ್ನೀಯುತ್ತಿದ್ದಾರೆ".

—1976ನೆ ಇಸವಿ ಡಿಸೆಂಬರ್ 8ರಿಂದ 12ರ ತನಕ ಕರಾಚಿಯಲ್ಲಿ ನಡೆದ "ಥರ್ಡ್ ಪಾಕಿಸ್ಥಾನ್ ಜ್ಯೂರಿಸ್ಟ್ಸ್ ಕಾನ್‌ಫರೆನ್ಸ್"ನಲ್ಲಿ ಘಾನಾ (ಆಫ್ರಿಕ) ರಾಜ್ಯದ ಪ್ರಧಾನ ನ್ಯಾಯಾಧೀಶರಾದ ಜಸ್ಟಿಸ್ ಅಝುಕ್ರಾಬ್ಬೆ (**Mr. Justice Azucrabbe, Chief Justice of Ghana**) ತನ್ನ ಭಾಷಣದಲ್ಲಿ ಹೇಳಿದ್ದು.

("The Third Pakistan Jurists' Conference 1976", published by the Pakistan Bar Council, page 77).

## ಪಾಕಿಸ್ಥಾನದಲ್ಲಿ ಅಹ್ಮದಿಯರು

"ಖಾದಿಯಾನಿಗಳ (ಅಂದರೆ ಅಹ್ಮದಿಯರ—ಸಂ.) ಈಗಿನ ಸ್ಥಿತಿಯ ಕುರಿತು ವಿಚಾರಿಸಿದೆನು. ಉನ್ನತ ಸರಕಾರಿ ಹುದ್ದೆಗಳಲ್ಲಿ ಅವರಿದ್ದಾರೆ. ಸೈನ್ಯದಲ್ಲಿಯೂ ಅವರು ಒಂದು ಒಳ್ಳೆಯ ಶೇಕಡಾಂಶ ಇದ್ದಾರೆ. ವಾಸ್ತವವಾಗಿ ಖಾದಿಯಾನಿಗಳನ್ನು ಮುಸ್ಲಿಮೇತರ ಅಲ್ಪಸಂಖ್ಯಾಕರೆಂದು ಘೋಷಿಸಲಾಗಿದೆ ಎಂದಲ್ಲದೆ, ಅದನ್ನು ಕಾರ್ಯರೂಪದಲ್ಲಿ ತರಲು ಯಾವುದೇ ಪ್ರಯತ್ನವನ್ನು ಭುಟ್ಟೋ ಸರಕಾರ ಮಾಡಿರಲಿಲ್ಲ. ಅವರಿಗೆ ಅದರ ಉದ್ದೇಶವೂ ಇರ

---

(20ನೆ ಪುಟದಿಂದ)

ದೇವರನ್ನು ತೋರಿಸಿಕೊಡಬೇಕೆಂದಾಗಿತ್ತು ಅವರ ಮನಸ್ಥಿತಿ! ಯಾತ್ರೆಯ ಖರ್ಚನ್ನೂ ಇನ್ನಿತರ ಎಲ್ಲಾ ವೆಚ್ಚವನ್ನೂ ವಹಿಸಿಕೊಳ್ಳಲಾಗುವುದೆಂಬ ಸನ್ನದ್ಧತೆಯನ್ನು ಪ್ರಕಟಿಸಿಯೂ ಅವರು ಗೌರವಬುದ್ಧಿಯಿಂದ ಅದನ್ನು ಪರಿಗಣಿಸಲು ಸಿದ್ಧರಿಲ್ಲವೆಂದು ತೋರಿದಾಗ, ಹೆಚ್ಚಿನ ಸಮಯವನ್ನು ವ್ಯಯಿಸುವುದರಿಂದ ಪ್ರಯೋಜನವಿಲ್ಲವೆಂದು ಅರಿತು, ಅಹ್ಮದಿಯಾ ಪ್ರತಿನಿಧಿಗಳು ಹಿಂತಿರುಗಿದರು. ಡಾ। ಕೋವೂರ್ ವಿಜ್ಞಾನಾರ್ಜನೆಗಾಗಿ ಸತ್ಯಾನ್ವೇಷನೆಗೆ ಹೊರಟ ವ್ಯಕ್ತಿಯೆಂದಾಗಿದ್ದರೆ, ಅವರು ಲೋಕದ ಯಾವುದೇ ಕಡೆಗೂ ಹೋಗಲಿಕ್ಕೆ ಸನ್ನದ್ಧರಿರಬೇಕಲ್ಲವೇ? ಅಹ್ಮದಿಯಾ ಸಂಘಟನೆಯು ದೈವವಿಶ್ವಾಸವನ್ನು ಈ ಕಾಲದಲ್ಲಿ ಪುನರುಜ್ಜೀವನಗೊಳಿಸಲು ದೈವನಿಯುಕ್ತವಾಗಿದೆಯೆಂದು ಅದು ಘೋಷಿಸುತ್ತದೆ. ಅದರ ಆಧ್ಯಾತ್ಮಿಕ ನಾಯಕರ ನಿರ್ದೇಶವನ್ನು ಅಂಗೀಕರಿಸಲು ಸನ್ನದ್ಧರಾಗಿದ್ದರೆ ಖಂಡಿತವಾಗಿಯೂ ಡಾ। ಕೋವೂರರಿಗೆ ಅದರಿಂದ ಪ್ರಯೋಜನ ಸಿದ್ಧಿಸುತಿತ್ತು. ಆದರೆ ಅವರಿಗೆ ಆ ಭಾಗ್ಯವಿರಲಿಲ್ಲ.

—ಸತ್ಯದೂತನ್.

ಲ್ಲಿ. ಮುಸ್ಲಿಂ ರಾಷ್ಟ್ರಗಳ ಒತ್ತಾಯಕ್ಕೆ ಮಣಿದು ಹಾಗೆ ಘೋಷಿಸಲಾಯಿತು, ಅಷ್ಟೇ. (ರಾಬಿತದ ಗೊತ್ತುವಳಿ ಮೊದಲಾದುದು ಇಲ್ಲಿ ಸ್ಮರಣಾರ್ಹ). ಪಾಕಿಸ್ಥಾನದಲ್ಲಿ ಖಾದಿಯಾನಿಗಳು ಈಗಲೂ 'ಮುಸ್ಲಿಮ್'ಗಳಾಗಿಯೇ ಇದ್ದಾರೆ— ಬಹಿರಂಗವಾಗಿ ಖಾದಿಯಾನಿಗಳೆಂದು ಹೇಳದಿದ್ದರೆ ಈಗಿನ ಸರಕಾರಕ್ಕೂ ಅವರ ಕುರಿತು ಸ್ಪಷ್ಟವಾದ ಯಾವುದೇ ಹಿಡಿತವಿಲ್ಲ; ದಿಟ ಧೋರಣೆ ಇಲ್ಲ. ಉನ್ನತ ಸ್ಥಾನಗಳಲ್ಲಿ ಅವರ ಇರುವಿಕೆ ಪಾಕಿಸ್ಥಾನದ ಇಸ್ಲಾಮೀಕರಣದ ಮುಂದೆ ದೊಡ್ಡದಾದ ಪ್ರತಿಬಂಧಕವಾಗಿದೆ".

—ಪಾಕಿಸ್ಥಾನದ ಪ್ರವಾಸಮಾಡಿ ಹಿಂತಿರುಗಿ ಬಂದ ಟಿ. ಕೆ. ಇಬ್ರಾಹಿಂ ಕುಟ್ಟಿ ಸಾಹೇಬರು 'ಪ್ರಬೋಧನಂ' ಮಲೆಯಾಳಿ ವಾರಪತ್ರಿಕೆಯಲ್ಲಿ ಬರೆದ ಸಂದರ್ಶನ ವರದಿ. ('ಪ್ರಬೋಧನಂ', 1978 ಸಪ್ಟೆಂಬರ್ 23).

### ರಾಬಿತದ ತಿಳಿಗೇಡಿತನ

"ಧಾರ್ಮಿಕ ಸಂಗತಿಗಳಲ್ಲಿ ರಾಬಿತ (ಜಾಗತಿಕ ಮುಸ್ಲಿಂ ಸಂಸ್ಥೆ, ಮಕ್ಕಾ —ಸಂ.) ಮತಭ್ರಾಂತಿಯನ್ನು ತೋರಿಸುತ್ತದೆಂದು ಅದರ ಇಂಗ್ಲಿಷ್ ಮತ್ತು ಅರಬಿ ಭಾಷೆಗಳಲ್ಲಿರುವ ಸಾಹಿತ್ಯಗಳನ್ನು ಓದಿದರೆ ತಿಳಿದುಕೊಳ್ಳಬಹುದು. ಇಸ್ಲಾಮಿನ ವಿಶಾಲತೆಯ ಸ್ಪರ್ಶಜ್ಞಾನವೇ ಅದಕ್ಕಿಲ್ಲ. ಬಹಳ ಅಸಹಿಷ್ಣುತೆಯನ್ನೂ ಹ್ರಸ್ವಮನಸ್ಥಿತಿಯನ್ನೂ ಅದು ಪ್ರಕಟಿಸುತ್ತದೆ. ಇತ್ತೀಚೆಗಿನ ಒಂದು ಉದಾಹರಣೆ, 40 ವರ್ಷ ಕಾಲ ಖುರ್‌ಆನಿನ ಶೋಧನೆ ಮಾಡಿ ಒಂದು ತರ್ಜುಮೆ ತಯಾರು ಮಾಡಿದ ಡಾಕ್ಟರ್ ಹಾಶಿಂ ಅಮೀರಲಿಯವರ ಮತ್ತು ನವಮುಸ್ಲಿಮನೂ ಪಂಡಿತನೂ ಆಗಿರುವ ಲಿಯೊಪೊಲ್ಡ್ ವೀಸಿಯವರ (ಡಾಕ್ಟರ್ ಆಸಾದರ) ಖುರ್‌ಆನ್ ತರ್ಜುಮೆ ಮತ್ತು ವ್ಯಾಖ್ಯಾನವನ್ನು ಯಾರೂ ಓದಬಾರದೆಂದು ನಿಷೇಧಿಸಿದ್ದಾಗಿದೆ. (Muslim World News of July 31, 1978, ಅರಬಿ ಸಂಚಿಕೆ ನೋಡಿರಿ). ಈ ಖುರ್‌ಆನ್ ಪ್ರತಿಗಳನ್ನು ಕಂಡಲ್ಲಿ ಸುಟ್ಟುಹಾಕಬೇಕೆಂದು ರಾಬಿತದ ಸುಗ್ರಿವಾಜ್ಞೆಯಾಗಿದೆ. ಈಸಾನಬಿ (ಯೇಸು ಕ್ರಿಸ್ತರು —ಸಂ.) ಮೃತಪಟ್ಟಿರುವರೆಂದು ಬರೆದದ್ದು ಡಾಕ್ಟರ್ ಆಸಾದರ ಭಯಂಕರ ಅಪರಾಧ!

ಅಹ್ಮದಿಯರನ್ನು ಮುಸ್ಲಿಮೇತರರೆಂದು ಘೋಷಿಸಿದಾಗಲೇ ಇಸ್ಲಾಂ ಮತವೆಂದರೆ ಏನೆಂದು ರಾಬಿತದವರಿಗೆ ಗೊತ್ತಿದಲ್ಲಿಲ್ಲವೆಂದು ಖಚಿತವಾಯಿತು".

—'ಕೃಪ' ತ್ರೈಮಾಸಿಕ, ಕೊಚ್ಚಿನ್: ಒಕ್ಟೋಬರ್ 1978.


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"………ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"………ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ.

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore575 001.

# ಸಂಪಾದಕರಿಗೆ ಪತ್ರ

ಮಾನ್ಯರೇ,

......ಯುಗರಶ್ಮಿಯನ್ನು ಓದಿ, ಅದರ ವೈಚಾರಿಕ ದೃಷ್ಟಿ, ವಿಶಾಲ ಮನೋಭಾವ, ಸರ್ವಸಮನ್ವಯಭಾವ, ನಿಷ್ಪಕ್ಷಪಾತ ಧೋರಣೆ ನಮಗೆ ಮೆಚ್ಚುಗೆಯಾಯಿತು. ಆದರೆ ಲೇಖನಗಳಲ್ಲಿ ಇನ್ನೂ ಸರಳೀಕೃತ ಸಾಲುಗಳು ಸ್ಪಂದಿಸಿದರೆ, ಸಂವಹನ ಸಮರ್ಥವಾಗುತ್ತದೆ ಎನಿಸುತ್ತದೆ. ಒಂದು ಸುಂದರ ಸಂಚಿಕೆ 'ಯುಗರಶ್ಮಿ'. ಇದರ ಪ್ರಗತಿಯನ್ನು ಹೆಚ್ಚು ಕಾಣುವ ಅಭಿಲಾಷೆ ನಮಗಿದೆ.

ಎಂ. ಜಿ. ನಾಗರಾಜ್,

ರಾಮನಗರಂ. ಪ್ರಧಾನ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಸಮಿತಿ.

ಮಿತ್ರರೇ,

"ಯುಗರಶ್ಮಿ" ಬಹಳ ಚೆನ್ನಾಗಿದೆ. 'ದೇವರು-ಧರ್ಮ' ಎಂಬ ಜೀವನಾಡಿಯಿಂದ ಉಳಿದುಕೊಂಡಿರುವ ನಮ್ಮ ಜನಾಂಗದ ಸಂಸ್ಕೃತಿಗೆ ಪೋಷಕವಾಗಿರುವ ಬೋಧಪ್ರದ ವಿಚಾರಗಳನ್ನು ತಿಳಿಸುವುದರ ಮೂಲಕ ನನ್ನಂತಹ ಓದುಗನಿಗೆ "ಬುದ್ಧ್ಯಾ ವಿಮರ್ಶ್ಯಾ" ಎಂಬ ಶ್ರೀಕೃಷ್ಣನ ವಚನದಂತೆ, ಸ್ವಬುದ್ಧಿಯಿಂದ ವಿಚಾರ ಸಂಗ್ರಹ ಮಾಡಿಕೊಳ್ಳುವಂತೆ, ಜ್ಞಾನ ಪ್ರಸಾರಣೆಯ ಪ್ರಯೋಜನ ಕೊಡುತ್ತದೆ. "ವಾರ್ಯನ್ನಗೋದಾನೇನ, ಬ್ರಹ್ಮದಾನ ವಿಶಿಷ್ಯತೇ" ಎಂಬ ಶಾಸ್ತ್ರ ಸೂಕ್ತಿಯಂತೆ ಜನತಾ ಕಲ್ಯಾಣ ಸಾಧಿಸುವಲ್ಲಿ ತಮ್ಮ "ಯುಗರಶ್ಮಿ"ಯ ಮೂಲಕವಾದ ಬ್ರಹ್ಮದಾನ ಅರ್ಥಾತ್ ಜ್ಞಾನ ಪ್ರಚಾರವು ಆವಶ್ಯಕವೇ ಹೌದು. ಈ ಮೊದಲಿನ ಸಂಚಿಕೆಗಳನ್ನು ಓದಿ ವಿಚಾರಸಂಗ್ರಹದಿಂದ ಲಾಭ ಪಡೆದೆ. ಆ ಬಗೆಗೆ ನಿಮ್ಮುಪಕಾರವನ್ನು ನೆನೆಯುತ್ತೇನೆ.

ಮಲ್ಪೆ. —ಎಂ. ಎಸ್. ಸಾಮುಕ ಹರಿದಾಸ್.

ಮಾನ್ಯ ಸಂಪಾದಕರೇ,

ಯುಗರಶ್ಮಿ ಬೇರೆ ಬೇರೆ ಧರ್ಮಗಳನ್ನು ಚೊಕ್ಕವಾಗಿ ತಿಳಿಸಲು ಇರುವ ಏಕೈಕ ಕನ್ನಡ ಪತ್ರಿಕೆ. ಹಿಂದೂ ಮುಸ್ಲಿಂ ಬಾಂಧವ್ಯವನ್ನು ಆದಷ್ಟು ಸಮೀಪಿಸಲು ಆ ಪತ್ರಿಕೆ ತುಂಬಾ ಸಹಕಾರಿಯಾಗಿದೆ ಎಂದು ನನ್ನ ಅಭಿಪ್ರಾಯ. ಆದಷ್ಟು ಬೇಗ ಈ ಪತ್ರಿಕೆಯನ್ನು ಮಾಸಪತ್ರಿಕೆಯನ್ನಾಗಿ ಮಾರ್ಪಡಿಸುವಿರೆಂದು ನಂಬಲೇ?

ಉಡುಪಿ. —ಓರ್ವ ಹಿಂದೂ ಓದುಗ.

ಮಾನ್ಯರೆ,

......ಸರಕಾರ ಕಡ್ಡಾಯಗೊಳಿಸಿರುವ ಏಕಪತ್ನಿ ಕಾಯಿದೆಯಿಂದ ಕಂಗಾಲಾಗಿರುವ ಹಿಂದು ಗೃಹಸ್ಥರ ದುರವಸ್ಥೆಯನ್ನು ವಿವರಿಸಲು ನನಗೆ ಶಬ್ದಗಳೇ ದೊರಕುವುದಿಲ್ಲ. ನಾನು ಒಬ್ಬ ಹಿಂದೂ ಬ್ರಾಹ್ಮಣನಾಗಿದ್ದರೂ ಮುಸ್ಲಿಂ ವಿವಾಹ ನಿಯಮಗಳನ್ನು ಮೆಚ್ಚುತ್ತೇನೆ. ಬಹುಭಾರ್ಯೆಯರನ್ನು ಹೊಂದುವ ಹಕ್ಕು ಹಿಂದೂಗಳಿಗೆ ಪುರಾತನ ಕಾಲದಿಂದಲೂ ಇತ್ತು. ಪುನಃ ಈ ಹಕ್ಕು ನಮಗೆ ದೊರಕಬಹುದೆಂದು ಆಶಿಸುತ್ತೇವೆ......

ಬೆಂಗಳೂರು. —ಎಸ್. ಆರ್. ವಾಸುದೇವಾಚಾರ್.

# * ಅಹ್ಮದಿಯಾ ವಾರ್ತೆಗಳು *

## ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಪರ್ಯಟನೆ

ತಮಿಳ್ನಾಡಿನ ಪರ್ಯಟನೆಯ ನಂತರ ಒಕ್ಟೋಬರ್ 14ರಂದು ಅಪರಾಹ್ನ 7 ಗಂಟೆಗೆ ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿಯವರಾದ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಕೇರಳದ **ಕರುನಾಗಪಳ್ಳಿ**ಗೆ ಆಗಮಿಸಿದರು. ಸ್ಥಳೀಯ ಜಮಾಅತಿನ ಅಧ್ಯಕ್ಷರಾದ ಜನಾಬ್ ಬಿ. ಅಲಿಯಾರ್ ಕುಞ್ಞ ಸಾಹೇಬ್ ಮತ್ತು ಕೇರಳ ಅಹ್ಮದಿಯಾ ಕೇಂದ್ರ ಸಮಿತಿ ಅಧ್ಯಕ್ಷ ಜನಾಬ್ ಎಸ್. ಅಮೀರಲಿ ಸಾಹೇಬರು ಪುಷ್ಪಹಾರ ಹಾಕಿ ಸ್ವಾಗತಿಸಿದರು. ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಪತ್ನಿ ಹಾಗೂ ಭಾರತದ ಲಜ್ನಯೆ ಇಮಾಇಲ್ಲಾ (ಮಹಿಳಾ ಸಂಘಟನೆ) ಅಧ್ಯಕ್ಷೆ ಆಗಿರುವ ಹಝ್ರತ್ ಸಯ್ಯಿದ ಅಮತುಲ್‌ಖುದ್ದೂಸ್‌ರವರನ್ನೂ ಮಗಳನ್ನೂ ಕರುನಾಗಪಳ್ಳಿ ಜಮಾಅತಿನ ಮಹಿಳಾ ಸಂಘದ ಅಧ್ಯಕ್ಷೆ ಮಹಿಳಾ ಸಂಗಡಿಗರೊಂದಿಗೆ ಸ್ವಾಗತಿಸಿದರು.

ಮಾರನೆದಿನ ಅಪರಾಹ್ನ 7 ಗಂಟೆಗೆ ಕರುನಾಗಪಳ್ಳಿ ಸರಕಾರಿ ಯು. ಪಿ. ಶಾಲೆಯ ಸಭಾಂಗಣದಲ್ಲಿ ಸೇರಿದ ಸ್ವಾಗತ ಸಭೆಯನ್ನು ಮಾಜಿ ಗುಜರಾತ್ ಗವರ್ನರ್ ಶ್ರೀ ಕೆ. ಕೆ. ವಿಶ್ವನಾಥನ್ ಉದ್ಘಾಟನೆ ಮಾಡಿದರು.

ಮೌಲಾನ ಮುಹಮ್ಮದ್ ಅಬುಲ್ ವಫಾ ಸಾಹೇಬ್ ಅಧ್ಯಕ್ಷತೆ ವಹಿಸಿದರು. ಎಂ. ಷಹೀದ್ ಅಹ್ಮದ್, ಮೌಲವಿ ಮುಹಮ್ಮದ್ ಉಮರ್ ಸಾಹೇಬ್, ಎಸ್. ಅಮೀರಲಿ ಸಾಹೇಬ್ ಮೊದಲಾದವರು ಭಾಷಣ ಮಾಡಿದರು. ಎಡ್ವಕೇಟ್ ವಿ. ಅಹ್ಮದ್‌ಕುಟ್ಟಿಯವರು ಆರಂಭದಲ್ಲಿ ಸ್ವಾಗತ ಬಯಸಿದರು. ಎ. ಅಬ್ದುಲ್ ರಶೀದ್ ಸಾಹೆಬ್ ಕೊನೆಗೆ ಧನ್ಯವಾದವಿತ್ತರು.

ಮರುದಿನ ಹಝ್ರತ್ ವಸೀಂ ಅಹ್ಮದ್ ಸಾಹೇಬರು **ಕರುನಾಗಪಳ್ಳಿ–ಕ್ವಿಲೋನ್** ಜಮಾಅತುಗಳು ಜಂಟಿಯಾಗಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದರು. ಎಚ್. ಎ. ಖಹ್ಹಾರ್ ಸಾಹೇಬರು ಕ್ವಿಲೋನ್ ಜಮಾಅತಿಗಾಗಿ ನಿರ್ಮಿಸಿದ ಮಸೀದಿಯನ್ನು ಅವರು ಉದ್ಘಾಟಿಸಿದರು. ಕ್ವಿಲೊನಿನ ಆರ್. ಡಿ. ಓ. ಶ್ರೀ ತೋಮಸ್ ಸಿ. ಕುನ್ನಿಕಲ್ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಪುರಸಭೆ ಅಧ್ಯಕ್ಷ ಎಸ್. ಎ. ರಹ್ಮಾನ್ ಸಾಹೇಬ್, ಮೌಲವಿ ಅಬುಲ್ ವಫಾ ಸಾಹೇಬ್, ಮೌಲವಿ ಉಮರ್ ಸಾಹೇಬ್, ಎಸ್. ಅಮೀರಲಿ ಸಾಹೇಬ್ ಭಾಷಣವಿತ್ತರು. ವಿ. ಅಹ್ಮದ್‌ಕುಟ್ಟಿ ಸ್ವಾಗತ ಭಾಷಣ ಮಾಡಿದರು. ಎ. ಕ್ಯೂ. ಮುಸ್ಲಿಂ ಕೃತಜ್ಞತೆ ಸಲ್ಲಿಸಿದರು.

17ರಂದು ವಸೀಂ ಅಹ್ಮದ್ ಸಾಹೇಬರು **ಅದಿನಾಡ್** ಸಂದರ್ಶಿಸಿದ ನಂತರ ಕರುನಾಗಪಳ್ಳಿಯಲ್ಲಿ ಏರ್ಪಡಿಸಲಾಗಿದ್ದ ತರ್‌ಬಿಯತ್ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಅದೇ ದಿನ ಮಹಿಳಾ ಸಂಘದ ಸಮ್ಮೇಳನ ಸಹ ಜರಗಿತು.

18ರಂದು **ಅಲೆಪ್ಪಿ** ಜಮಾಅತನ್ನು ಸಂದರ್ಶಿಸಿದರು. ಜನಾಬ್ ಅಬ್ದುಕುಟ್ಟಿ ಸಾಹೇಬ್ ಹಾಗೂ ಇನ್ನಿತರರು ಸ್ವಾಗತಿಸಿದರು. ಅಲ್ಲಿಯೂ ತರ್‌ಬಿಯತ್ ಸಮ್ಮೇಳನದಲ್ಲಿ ಮಾತನಾಡಿದರು.. ನಂತರ ಕುಟ್ಟನಾಡ್ ಮಾರ್ಗವಾಗಿ ಕಾರಿನಲ್ಲಿ **ಎರ್ನಾಕುಳಂ**ಗೆ ಹೊರಟರು. ಅಲ್ಲಿ ಮೌಲವಿ ಅಶ್ರಫ್ ಸಾಹೇಬರೂ ಇತರರೂ ಇದಿರ್ಗೊಂಡರು.

ಎರ್ನಾಕುಳಂನಿಂದ 20ರಂದು ಬೆಳಗಾತ **ಪಯಂಗಾಡಿ**ಗೆ ಆಗಮಿಸಿದರು. ರೈಲ್ವೇ ಸ್ಟೇಶನಿನಲ್ಲಿ ಸ್ಥಳೀಯ ಅಹ್ಮದಿಯಾ ಅಧ್ಯಕ್ಷ ಎಸ್. ವಿ. ಜೈನುದ್ದೀನ್ ಸಾಹೇಬರ ನಾಯಕತ್ವದಲ್ಲಿ ಪುರುಷರೂ ಸ್ತ್ರೀಯರೂ ಭವ್ಯ ಸ್ವಾಗತ ನೀಡಿದರು. ಸ್ವಾಗತ ಸಮಾರಂಭದಲ್ಲಿ ಮತ್ತು ತರ್‌ಬಿಯತ್ ಸಮ್ಮೇಳನದಲ್ಲಿ ವಸೀಂ ಅಹ್ಮದ್ ಸಾಹೇಬರು ಭಾಷಣವಿತ್ತರು. 22ರಂದು ಬೆಳಗಾತ **ಕೊಡಾಳಿ**ಯಲ್ಲಿ ಸ್ಥಳೀಯ ಅಧ್ಯಕ್ಷ ಡಾ। ಮನ್‌ಸೂರ್ ಅಹ್ಮದರ ನೇತೃತ್ವದಲ್ಲಿ ಮಸೀದಿಯಲ್ಲಿ ಸ್ವಾಗತ ನೀಡಲಾಯಿತು. ಅಲ್ಲಿ ಸೇರಿದ ಸಭಿಕರನ್ನು ಉದ್ದೇಶಿಸಿ ಭಾಷಣಮಾಡಿದರು. ಅಪರಾಹ್ನ **ಕಣ್ಣನ್ನೂರಿ**ಗೆ ತಲಪಿದರು. ಸ್ಥಳೀಯ ಅಧ್ಯಕ್ಷರಾದ ಎನ್. ಹಾಮಿದ್ ಸಾಹೇಬರೂ ಇತರರೂ ಸ್ವಾಗತಿಸಿದರು. ಮಸೀದಿಯ ವಠಾರದಲ್ಲಿ ರಾತ್ರಿ ಜರಗಿದ ಸ್ವಾಗತ ಸಭೆಯಲ್ಲಿ ವಸೀಂ ಅಹ್ಮದ್ ಸಾಹೇಬರು ಭಾಷಣಮಾಡಿದರು.

ಕಣ್ಣನ್ನೂರಿನಿಂದ 23ರಂದು ಮಧ್ಯಾಹ್ನ ಕಾರಿನಲ್ಲಿ ಮಡಿಕೇರಿಗೆ ತಲಪಿದರು. ಮೌಲವಿ ಮುಹಮ್ಮದ್ ಫಾರೂಕ್ ಸಾಹೇಬ್, ಅಧ್ಯಕ್ಷ ಜಿ. ಎಸ್. ಅಹ್ಮದ್ ಸಾಹೇಬ್ ಮತ್ತು ಕಾರ್ಯದರ್ಶಿ ಪಿ. ಕೆ. ಉಮರ್ ಸಾಹೇಬರೂ ಇತರರೂ ಸ್ವಾಗತ ನೀಡಿದರು. ಮಸೀದಿ ವಠಾರದಲ್ಲಿ ಏರ್ಪಡಿಸಲಾಗಿದ್ದ ತರ್‌ಬಿಯತ್ ಸಭೆಯಲ್ಲಿ ವಸೀಂ ಅಹ್ಮದ್ ಸಾಹೇಬರ ಭಾಷಣ ಕೇಳಲು ಪುರುಷರೂ ಸ್ತ್ರೀಯರೂ ಮಕ್ಕಳೂ ಬಹುಸಂಖ್ಯೆಯಲ್ಲಿ ಆಗಮಿಸಿದ್ದರು.

ಮರುದಿನ ಕಾರಿನಲ್ಲಿ ಮಡಿಕೇರಿಯಿಂದ ಮೊಗ್ರಾಲಿಗೆ ಬರುವಾಗ ದಾರಿಯಲ್ಲಿ ಕೊಯನಾಡಿನಲ್ಲಿ ತುಸುಕಾಲ ತಂಗಿದರು. ಬಿ. ಶೇಕಾಲಿ ಸಾಹೇಬ್, ಎಂ. ಎ. ಬಶೀರ್ ಅಹ್ಮದ್ ಸಾಹೇಬ್ ಮೊದಲಾದವರು ಸ್ವಾಗತಿಸಿದರು.

24ರಂದು ಅಪರಾಹ್ನ 2½ ಗಂಟೆಗೆ ವಸೀಂ ಅಹ್ಮದ್ ಸಾಹೇಬರು ಕಾರಿನಲ್ಲಿ ಮೊಗ್ರಾಲಿಗೆ ಆಗಮಿಸಿದರು. ಕೇರಳ ಕೇಂದ್ರ ಸಮಿತಿ ಅಧ್ಯಕ್ಷ ಎಸ್. ಅಮೀರಲಿ ಸಾಹೇಬರೂ ಸ್ಥಳೀಯ ಯುವಜನ ಸಂಘದ ಮುಖಂಡ ಎಂ. ಪಿ. ಇಬ್ರಾಹಿಂ ಸಾಹೇಬರೂ ಅನೇಕ ಪುರುಷರೂ ಸ್ತ್ರೀಯರೂ ಮಕ್ಕಳೂ ಅಹ್ಮದಿಯಾ ವಾಚನಾಲಯದ ಸಮೀಪ ಸ್ವಾಗತಿಸಿದರು. ಸಂಜೆ ನಡೆದ ಸ್ವಾಗತ ಸಮಾರಂಭದಲ್ಲಿ ಅಹ್ಮದಿಯಾ ವಿಶ್ವಾಸಾದರ್ಶಗಳ ಕುರಿತು ವಸೀಂ ಅಹ್ಮದ್ ಸಾಹೇಬರು ಭಾಷಣವಿತ್ತರು. . ಎಸ್. ಬಶೀರ್ ಅಹ್ಮದ್ ಸ್ವಾಗತ ಭಾಷಣಮಾಡಿದರು. ಕೊನೆಗೆ ಸ್ಥಳೀಯ ಕಾರ್ಯದರ್ಶಿ ಎಸ್. ಅಶ್ರಫಲಿಯವರು ಧನ್ಯವಾದ ಅರ್ಪಿಸಿದರು.

25ರಂದು ಅಪರಾಹ್ನ ಮಂಜೇಶ್ವರಕ್ಕೆ ಬಂದರು. ಸ್ಥಳೀಯ ಅಧ್ಯಕ್ಷ ಎಂ. ಎ. ರಶೀದ್ ಸಾಹೇಬ್, ಯುಗ ರಶ್ಮಿಯ ಸಂಪಾದಕ ಮುಹಮ್ಮದ್ ಯೂಸುಫ್ ಹಾಗೂ ಇನ್ನಿತರರು ಅವರನ್ನು ಬರಮಾಡಿಕೊಂಡರು. ಸೂರ್ಯಾಸ್ತಮಾನವನ್ನು ವೀಕ್ಷಿಸುತ್ತಾ ಅವರು ತನ್ನ ಸಂಗಡಿಗರೊಂದಿಗೆ ದೋಣಿಯಲ್ಲಿ ಸಮುದ್ರ ವಿಹಾರ ಮಾಡಿದರು. ಅದರ ನಂತರ ರಶೀದ್ ಸಾಹೇಬರ ವಸತಿಯಲ್ಲಿ ಸೇರಿದ ತರ್‌ಬಿಯತ್ ಸಭೆಯಲ್ಲಿ ಮಾತನಾಡಿದರು.

26ರಂದು ಸಾಯಂಕಾಲ ಮೈಲುಗಾಡಿಯಲ್ಲಿ ಕಾಸರಗೋಡಿನಿಂದ ಕಲ್ಲಿಕೋಟೆ ತಲಪಿದರು. ರೈಲ್ವೇ ಸ್ಟೇಶನಿನಲ್ಲಿ ಪ್ರೆಸಿಡೆಂಟ್ ಎಂ. ಪಿ. ಕೋಯಕುಟ್ಟಿ ಸಾಹೇಬರ ನಾಯಕತ್ವದಲ್ಲಿ ಭವ್ಯ ಸ್ವಾಗತವನ್ನು ನೀಡಲಾಯಿತು. 27ರಂದು ಬೆಳಗಾತ 10 ಗಂಟೆಗೆ ಪ್ರೆಸ್‌ಕ್ಲಬ್ಬಿನಲ್ಲಿ ಪತ್ರಿಕಾ ಗೋಷ್ಠಿ ನಡೆಯಿತು. ಸಾಯಂಕಾಲ ಟೌನ್‌ಹಾಲ್‌ನಲ್ಲಿ "ಸರ್ವಮತಾಚಾರ್ಯರ ದಿನ" ಸಮ್ಮೇಳನವನ್ನು ಉದ್ಘಾಟಿಸಿದರು.

ಚೇಲಕ್ಕರದಲ್ಲಿ ತರ್‌ಬಿಯತ್ ಸಭೆಯಲ್ಲಿ ಮಾತನಾಡಿದರು. ಮಂಜ್ಞಾ ಫೋರ್ಟ್‌ನಲ್ಲಿ ಎಂ. ಕೆ. ಮುಹಮ್ಮದ್ ಸಾಹೇಬರ ನೇತೃತ್ವದಲ್ಲಿ ಸ್ವಾಗತ ನೀಡಲಾಯಿತು. ಅಲ್ಲಿಯೂ ತರ್‌ಬಿಯತ್ ಸಭೆಯನ್ನು ಜರಗಿಸಲಾಗಿತ್ತು. ಮುರಿಯಕಣ್ಣಿ ಮತ್ತು ಅಲನೆಲ್ಲೂರಿನಲ್ಲೂ ಭಾರೀ ಸ್ವಾಗತ ನೀಡಲಾಗಿತ್ತು. ವಾಣಿಯಂಬಲದಲ್ಲಿ ಸಿ. ಕೆ. ಅಲವಿ ಸಾಹೇಬರೂ ಇನ್ನಿತರರೂ ಸ್ವಾಗತಿಸಿದರು. ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು. ರಾತ್ರಿ ನಿಲಂಬೂರಿನಲ್ಲಿ ಉಳಕೊಂಡರು, ಕರುಳಾಯಿಯಲ್ಲಿ ಸೇರಿದ ತರ್‌ಬಿಯತ್ ಸಭೆಯಲ್ಲಿ ಭಾಷಣ ಮಾಡಿದರು. ಪತ್ತಪಿರಿಯಂನಲ್ಲಿ ಸಿ. ಮುಹಮ್ಮದ್ ಸಾಹೇಬರೂ ಇತರರೂ ಸ್ವಾಗತ ನೀಡಿದರು. 31ರಂದು ರಾತ್ರಿ 10 ಗಂಟೆಗೆ ಕಲ್ಲಿಕೋಟೆಗೆ ಹಿಂತೆರಳಿದರು. ತರ್‌ಬಿಯತ್ ಸಭೆಯಲ್ಲೂ ಮಹಿಳಾ ಸಂಘದ ಸಭೆಯಲ್ಲೂ ಮಾತನಾಡಿದರು.

ನವೆಂಬರ್ 1ರಂದು ಮೈಲುಗಾಡಿಯಲ್ಲಿ ಮದರಾಸಿಗೆ ಹೊರಟರು.

## ಮದರಾಸಿನಲ್ಲಿ ಮಸೀದಿ ಉದ್ಘಾಟನೆ ಮತ್ತು ಸಮ್ಮೇಳನ

ಮದರಾಸಿನಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಅಹ್ಮದಿಯಾ ಮಸೀದಿಯನ್ನು ಕಳೆದ ನವಂಬರ್ ತಿಂಗಳ 3ನೇ ದಿನಾಂಕ ಶುಕ್ರವಾರದಂದು ಜುಮಾ ಪ್ರಾರ್ಥನೆಯು ಮುಂಚಿತವಾಗಿ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿದರು. ಏಕದೈವೋಪಾಸನೆಗಾಗಿ ಎಲ್ಲರಿಗೂ ಈ ಮಸೀದಿಯು ತೆರೆದಿರಿಸಲ್ಪಟ್ಟಿದೆಯೆಂದು ಅವರು ಘೋಷಿಸಿದರು.

ಅದೇ ದಿನ ಅಪರಾಹ್ನ 3½ ಗಂಟೆಗೆ ಮಿಶನ್ ಹೌಸಿನ ಸಭಾಂಗಣದಲ್ಲಿ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಪತ್ನಿ ಹಾಗೂ ಭಾರತೀಯ ಅಹ್ಮದಿಯಾ ಮಹಿಳಾ ಸಂಘದ ಅಧ್ಯಕ್ಷೆ ಸಯ್ಯಿದ ಅಮತುಲ್ ಖುದ್ದೂಸರ ಅಧ್ಯಕ್ಷತೆಯಲ್ಲಿ ಮಹಿಳಾ ಸಭೆ ಜರಗಿತು.

ನವೆಂಬರ್ 5ರಂದು ವಾರ್ಷಿಕ ಸಮ್ಮೇಳನವು ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಸಮ್ಮೇಳನವನ್ನು ತಮಿಳ್ನಾಡಿನ ರಾಜ್ಯಪಾಲ ಶ್ರೀ ಪ್ರಭುದಾಸ್ ಪಟ್ವಾರಿ ಉದ್ಘಾಟಿಸಿದ್ದರು.

ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದ್ದ "ಧರ್ಮವೇ ಜೀವನ ಮಾರ್ಗ" ಎಂಬ ಸಿಂಪೋಸಿಯಂನಲ್ಲಿ ವಿವಿಧ ಮತಸ್ಥರಾದ ವಿದ್ವಾಂಸರು ಪಾಲ್ಗೊಂಡರು.

ತಮಿಳ್ನಾಡು ಲೆಜಿಸ್ಲೇಟಿವ್ ಕೌನ್ಸಿಲಿನ ಚೇರ್ ಮ್ಯಾನ್ M. P. S. ಗ್ರಮಣಿ, ಮದರಾಸಿನ ಆರ್ಚ್ ಬಿಷಪರಾದ ರೆವ। ಸುಂದರ್ ಕ್ಲಾರ್ಕ್, ಥಿಯೋಸೋಫಿಕಲ್ ಸೊಸೈಟಿಯ ಅಂತಾರಾಷ್ಟ್ರೀಯ ಅಧ್ಯಕ್ಷ ಮಿ। ಜೋನ್ ಬಿ. ಎಸ್. ಕೋಟ್ಸ್, ಮದರಾಸ್ ಹೈಕೋರ್ಟಿನ ಜಸ್ಟಿಸ್ ಮಹಾರಾಜನ್ (Chairman of Official Language Commission), ಮೌಲಾನ ಷರೀಫ್ ಅಹ್ಮದ್ ಅಮೀನಿ ಸಾಹೇಬ್, ಡಾ। ಬಿ. ಕೆ. ರೆಡ್ಡಿ, ಮೈವಝಿ ಸಲ್ಯಾ ಪಂಥದ ಆಧ್ಯಾತ್ಮಿಕ ನೇತಾರ ಡಾ। ಮುರುಗ, ಭಾರತೀಯ ವಿಚಾರವಾದಿಗಳ ಸಂಘದ ಕಾರ್ಯದರ್ಶಿ ಮಿ। ಸೂರ್ಯನಾರಾಯಣ ಮೊದಲಾದವರು ವಿವಿಧ ಧಾರ್ಮಿಕ ಪಂಥಗಳ ಕುರಿತು ಭಾಷಣ ಮಾಡಿದರು.

ಪ್ರಾರಂಭದಲ್ಲಿ ಮುಹಮ್ಮದ್ ಕರೀಮುಲ್ಲಾ ನೌಜವಾನ್ ಸಾಹೇಬರು ಸ್ವಾಗತ ಭಾಷಣ ಮಾಡಿದರು. ಕೊನೆಗೆ ಮೌಲವಿ ಮುಹಮ್ಮದ್ ಉಮರ್ ಸಾಹೇಬರು ಧನ್ಯವಾದವಿತ್ತರು.

## ಯಾದಗಿರಿಯಲ್ಲಿ ಸೆಮಿನಾರ್ ಮತ್ತು ಸಮ್ಮೇಳನ

ನವೆಂಬರ್ 6ನೇ ದಿನಾಂಕದಂದು ಯಾದಗಿರಿ ಅಹ್ಮದಿಯಾ ಸಂಘಟನೆಯ ವತಿಯಿಂದ "ಧರ್ಮ-ಸಾಮುದಾಯಿಕ ಶಾಂತಿಗೆ ಆವಶ್ಯಕ" ಎಂಬ ಒಂದು ಸೆಮಿನಾರ್ ಜರುಗಿತು. ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಅಧ್ಯಕ್ಷತೆಯನ್ನು ವಹಿಸಿದರು. ಮೌಲಾನ ಷರೀಫ್ ಅಹ್ಮದ್ ಅಮೀನಿ ಸಾಹೇಬ್ (ಖಾದಿಯಾನ್) ಮತ್ತು ಮೌಲವಿ ಮುಹಮ್ಮದ್ ಉಮರ್ ಸಾಹೇಬ್ (ಮದರಾಸ್) ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಸೇಟ್ ಮುಹಮ್ಮದ್ ಇಲ್ಯಾಸ್ ಸಾಹೇಬರು ಸ್ವಾಗತ ಭಾಷಣ ಮಾಡಿದರು. ಲಂಡನಿನಿಂದ ಮುಹಮ್ಮದ್ ಝಫರುಲ್ಲಾ ಖಾನ್ (ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ), ಆಂಧ್ರ ಪ್ರದೇಶದ ರಾಜ್ಯಪಾಲ ಕೆ. ಸಿ. ಅಬ್ರಹಾಂ, ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರು, ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಚೆನ್ನಾ ರೆಡ್ಡಿ ಮೊದಲಾದವರು ಕಳುಹಿಸಿದ ಸಂದೇಶಗಳನ್ನು ಮೌಲಾನ ಅಮೀನಿ ಸಾಹೇಬರು ಓದಿದರು.

ಮೌಲವಿ ಮುಹಮ್ಮದ್ ಉಮರ್ ಸಾಹೇಬ್ H. A. ಮುಹಮ್ಮದ್ ಕರೀಮುಲ್ಲಾ ನೌಜವಾನ್ ಸಾಹೇಬ್ (ಮದ್ರಾಸ್), ಮೌಲಾನ ಷರೀಫ್ ಅಹ್ಮದ್ ಅಮೀನಿ ಸಾಹೇಬ್ ಮೊದಲಾದವರು ಭಾಷಣವಿತ್ತರು. ಕೊನೆಗೆ ಸೇಟ್ ಮುಹಮ್ಮದ್ ನಿಅಮತುಲ್ಲಾ ಸಾಹೇಬ್ ಧನ್ಯವಾದವಿತ್ತರು.

ನವೆಂಬರ್ 7ರಂದು ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ವಾರ್ಷಿಕ ಸಮ್ಮೇಳನ ಜರುಗಿತು. ಮೌಲವಿ ಹಮೀದುದ್ದೀನ್ ಸಾಹೇಬ್ ಶಮ್ಸ್, ಮೌಲವಿ ಮನ್‌ಜೂರ್ ಅಹ್ಮದ್ ಸಾಹೇಬ್, ಮೌಲಾನ ಅಮೀನಿ ಸಾಹೇಬ್, ಕರೀಮುಲ್ಲಾ ನೌಜವಾನ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು. ಕೊನೆಗೆ ಸೇಟ್ ಮುಹಮ್ಮದ್ ಇಲ್ಯಾಸ್ ಸಾಹೇಬರು ಕೃತಜ್ಞತೆ ಸಮರ್ಪಿಸಿದರು. ಮುಖ್ಯ ಅತಿಥಿಗಳಿಗೆ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಮತ್ತು ಇನ್ನಿತರ ಅಹ್ಮದಿಯಾ ಸಾಹಿತ್ಯಗಳನ್ನು ಗೌರವಾರ್ಥವಾಗಿ ನೀಡಲಾಯಿತು.

## ಖುರ್‌ಆನಿನ ಪ್ರಚಾರ

ಅಹ್ಮದಿಯಾ ಖಲೀಫರು ಒಕ್ಟೋಬರ್ 3ರಂದು ಲಂಡನಿನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ; ಯು. ಕೆ. ಯಲ್ಲಿರುವ ಪ್ರತಿಯೊಂದು ಹೋಟೆಲ್ ಕೊಠಡಿಯಲ್ಲಿ ಒಂದೊಂದು ಖುರ್‌ಆನಿನ ಪ್ರತಿಯನ್ನು ಇರಿಸುವ ತಮ್ಮ ಯೋಜನೆಯ ಕುರಿತು ಹೇಳಿದರು. ಜಗತ್ತಿನ ಪ್ರಧಾನ ಭಾಷೆಗಳಲ್ಲಿ ಖುರ್‌ಆನಿನ ಭಾಷಾಂತರ ಮೂಡುವ ಹಾಗೂ ಪ್ರಧಾನ ಕೇಂದ್ರಗಳಲ್ಲಿ ಮಸೀದಿಗಳನ್ನು ನಿರ್ಮಿಸುವ ಬಗ್ಗೆ ಸಹ ಅವರು ನುಡಿದರು.

(ಹಿಂಬದಿ ಹೊರಕವಚದ ಒಳಗಿನ ಪುಟ ನೋಡಿರಿ)

# ಇಸ್ಲಾಂ ಮತ ತತ್ವಜ್ಞಾನ

## (2)

ಲೇಖಕ: ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್.

ಅನುವಾದಕ: ಮುಹಮ್ಮದ್ ಯೂಸುಫ್.

## ತ್ರಿವಿಧ ಸಂಸ್ಕಾರ ಘಟ್ಟಗಳು ಮತ್ತು ಖುರ್‌ಆನಿನ ನಿರ್ದೇಶಗಳು

ಮನುಷ್ಯನನ್ನು ಪ್ರಾಕೃತಾವಸ್ಥೆಯಿಂದ ಉದ್ಧರಿಸಿ ಕ್ರಮೇಣ ಅತ್ಯುತ್ಕೃಷ್ಟವಾದ ಆಧ್ಯಾತ್ಮಿಕಾವಸ್ಥೆಯ ಮಟ್ಟಕ್ಕೆ ತಲಪಿಸಲು ಖುರ್‌ಆನ್ ನೀಡುವ ನಿರ್ದೇಶಗಳೇನೆಂದು ಪರಿಶೋಧಿಸಿದಾಗ ನನಗೆ ಕಾಣಲು ಸಾಧ್ಯವಾದ ವಿವೇಕಯುತವಾದ ವ್ಯವಸ್ಥೆಗಳು ಇವು: ಒಂದನೆಯದಾಗಿ, ಪವಿತ್ರ ಖುರ್‌ಆನ್ ಸಾಮೂಹಿಕ ಜೀವಿತಕ್ಕೆ ಅವಶ್ಯಕವಾದ ವ್ಯವಹಾರ ಸಂಪ್ರದಾಯಗಳನ್ನೂ ದಿನಚರ್ಯೆಗಳನ್ನೂ ಕ್ರಮಪಡಿಸುವ ವಿಧಾನಗಳನ್ನು ನಿರ್ದೇಶಿಸಿ, ಮನುಷ್ಯನನ್ನು ಅಜ್ಞತೆಯ ರೀತಿನೀತಿಗಳಿಂದ ಉದ್ಧರಿಸಲು ಉದ್ದೇಶಿಸುತ್ತದೆ. ಈ ಘಟ್ಟದಲ್ಲಿ ಅದು ಅವನನ್ನು ಮೃಗೀಯತೆಯಿಂದ ವಿಮುಕ್ತನನ್ನಾಗಿ ಮಾಡಿ ಸಭ್ಯಾಚಾರದ ಪ್ರಥಮ ಹಂತದ ನೀತಿಗುಣಗಳನ್ನು ಬೋಧಿಸುತ್ತದೆ. ಎರಡನೆಯದಾಗಿ, ಅದು ಮನುಷ್ಯನ ಸ್ವಾಭಾವಿಕ ನೀಚಗುಣಗಳನ್ನು ಸುಧಾರಿಸಿ ಉತ್ಕೃಷ್ಟ ಧಾರ್ಮಿಕಗುಣಗಳನ್ನು ಅನುಗ್ರಹಿಸಲು ಉದ್ದೇಶಿಸುತ್ತದೆ. ಈ ಎರಡೂ ವಿಧಾನಗಳು ಶಾರೀರಿಕಾವಸ್ಥೆಯನ್ನು ಸಂಸ್ಕರಿಸುವವುಗಳಾದುದರಿಂದ ಯಥಾರ್ಥದಲ್ಲಿ ಒಂದೇ ಆಗಿದ್ದರೂ ಉಚ್ಚ ಮತ್ತು ನೀಚವೆಂಬ ಅವುಗಳ ಸ್ಥಿತಿಬೇಧವು ಅವನ್ನು ಎರಡಾಗಿ ವಿಭಾಗಿಸುತ್ತದೆ. ಹೀಗೆ ಮನುಷ್ಯನು ಕೀಳು ಮಟ್ಟದಿಂದ ಬಹಳ ಉತ್ಕೃಷ್ಟಮಟ್ಟಕ್ಕೆ ತಲಪಲು ಸಾಧ್ಯವಾಗುವಂತೆ ಸರ್ವಜ್ಞನಾದ ಸೃಷ್ಟಿಕರ್ತನು ನೈತಿಕ ವ್ಯವಸ್ಥೆಯನ್ನು ಅನುಕ್ರಮವಾಗಿ ನಿರ್ದೇಶಿಸಿರುವುದಾಗಿ ಕಾಣಬಹುದು.

ಪುರೋವೃದ್ಧಿಯ ಮೂರನೆಯ ಹಂತವಾಗಿ ನಿರ್ದೇಶಿಸಲಾದುದು, ಮನುಷ್ಯನು ತನ್ನ ಸೃಷ್ಟಿಕರ್ತನಾದ ಪರಮಾತ್ಮನೊಡನಿರುವ ಅನುರಾಗದಿಂದಲೂ ಅನುಸರಣೆಯಿಂದಲೂ ಮಗ್ನನಾಗಿ, ತನ್ನ ಜೀವಿತಸರ್ವಸ್ವವನ್ನೂ ಪರಮಾತ್ಮನಿಗೆ ಸಮರ್ಪಿಸಬೇಕೆಂದಾಗಿದೆ. ತ್ಯಾಗದಿಂದ ಕೂಡಿದ ಈ ಉಚ್ಚಸ್ಥಾನವನ್ನು ಜ್ಞಾಪಕದಲ್ಲಿಟ್ಟುಕೊಳ್ಳಲಿಕ್ಕಾಗಿ ಮುಸ್ಲಿಮರ ಧರ್ಮಕ್ಕೆ ಇಸ್ಲಾಂ ಎಂದು ನಾಮಕರಣಮಾಡಲಾಗಿದೆ. ಏಕೆಂದರೆ ಇಸ್ಲಾಂ ಎಂಬುದರ ಅರ್ಥ ಸಂಪೂರ್ಣವಾಗಿ ದೈವೇಚ್ಛೆಗೆ ವಿಧೇಯನಾಗಿ ಸರ್ವಸ್ವವನ್ನೂ ಪರಮಾತ್ಮನಿಗಾಗಿ ಸಮರ್ಪಿಸುವುದಾಗಿದೆ. ಇದರ ಕುರಿತು ಖುರ್‌ಆನಿನಲ್ಲಿ ಪರಮಾತ್ಮನು ಹೀಗೆನ್ನುತ್ತಾನೆ:

"ಬಲಾ ಮನ್ ಅಸ್ಲಮ ವಜ್‌ಹಹೂ ಲಿಲ್ಲಾಹಿ ವಹುವ ಮುಹ್‌ಸಿನುನ್ ಫಲಹೂ ಅಜ್‌ರುಹೂ ಇಂದ ರಬ್ಬಿಹೀ ವಲಾ ಖೌಫುನ್ ಅಲೈಹಿಮ್ ವಲಾಹುಮ್ ಯಹ್‌ಜನೂನ್" (2 : 113) — ತನ್ನ ಸರ್ವಸ್ವವನ್ನು ಪರಮಾತ್ಮನಿಗರ್ಪಿಸಿ ಅವನ ಇಚ್ಛೆಗೆ ಸಂಪೂರ್ಣ ವಿಧೇಯನಾಗುವವನು, ವಾಕ್‌ಮಾತ್ರದ ವಿಶ್ವಾಸದಿಂದ ತೃಪ್ತಿಪಡದೆ ಅದನ್ನು ಸತ್ಕರ್ಮಗಳ ಮೂಲಕ ಸಾಕ್ಷ್ಯಪಡಿಸುವವನು, ಖಂಡಿತವಾಗಿಯೂ ಮುಕ್ತನು; ಅವನಿಗೆ ತನ್ನ ಒಡೆಯನಿಂದ ಪ್ರತಿಫಲವು ಲಭಿಸುವುದು; ಇಂತಹವರಿಗೆ ಯಾವ ಭೀತಿಯೂ ಇಲ್ಲ; ಅವರು ದುಃಖಕ್ಕೀಡಾಗಲಾರರು.

"ಖುಲ್ ಇನ್ನ ಸಲಾತೀ ವ ನುಸುಕೀ ವ ಮಹ್ ಯಾಯ ವ ಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್. ಲಾ ಷರೀಕಲಹೂ ವ ಬಿಜಾಲಿಕ ಉಮಿರ್‍ತು ವ ಅನಾ ಅವ್ವ ಲುಲ್ ಮುಸ್ಲಿಮೀನ್" (6 : 163, 164). — ಹೇಳು- ನನ್ನ ಪ್ರಾರ್ಥನೆ, ನನ್ನ ತ್ಯಾಗ, ನನ್ನ ಜೀವಿತ, ನನ್ನ ಮರಣ ಎಲ್ಲವನ್ನೂ ಲೋಕಾಧಿಪತಿಯಾದ ಏಕನಾದ ಪರಮಾತ್ಮನಿಗೆ ಸಮರ್ಪಿಸುತ್ತೇನೆ. ಇದಕ್ಕಾಗಿಯೇ ನಾನು ಆಜ್ಞಾಪಿಸಲ್ಪಟ್ಟಿರುವೆನು. "ಇಸ್ಲಾಂ" ಎಂಬ ಪದದ ಅರ್ಥವನ್ನು ಗ್ರಹಿಸಿ ಜೀವಿಸುವವರಲ್ಲಿ, ಅಂದರೆ ದೈವ ಮಾರ್ಗದಲ್ಲಿ ಸ್ವಯಂ ಅರ್ಪಿಸುವವರಲ್ಲಿ ನಾನು ಮೊದಲಿ ಗನು.

"ವ ಅನ್ನ ಹಾಜಾ ಸಿರಾತೀ ಮುಸ್ತಖೀಮನ್ ಫತ್ತಬಿಊಹು ವಲಾ ತತ್ತಬಿಉ ಸ್ಸುಬುಲ ಫತಫರ್‍ರಖ ಬಿಕುಮ್ ಅನ್ ಸಬೀಲಿಹೀ" (6 : 154). — ಇದು ನನ್ನ ಸನ್ಮಾರ್ಗವಾಗಿದೆ. ಆದುದರಿಂದ ಬನ್ನಿರಿ; ನನ್ನ ಮಾರ್ಗವನ್ನು ಅನುಸರಿಸಿರಿ; ಬೇರೆ ಮಾರ್ಗವನ್ನು ಅನುಸರಿಸದಿರಿ; ಅದು ಖಂಡಿತವಾಗಿಯೂ ನಿಮ್ಮನ್ನು ಪರಮಾತ್ಮನಿಂದ ದೂರವಿಡುವುದು.

"ಖುಲ್ ಇನ್ ಕುನ್ತುಮ್ ತುಹಿ ಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹು ವ ಯಗ್ ಫಿರ್ಲಕುಮ್ ಜುನೂಬಕುಮ್ ವಲ್ಲಾಹು ಗಫೂರುನ್(ನ್) ರ್‍ರಹೀಮ್" (3 : 32). — (ಪ್ರವಾದಿಯೇ) ಹೇಳು: ನಿಮಗೆ ದೇವರೊಡನೆ ಪ್ರೀತಿಯಿದ್ದರೆ ನನ್ನನ್ನು ಅನುಸರಿಸಿರಿ. ಆಗ ದೇವರು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು; ಅವನು ದಿಟವಾಗಿಯೂ ಕ್ಷಮಿಸುವವನೂ ಕರುಣೆಯುಳ್ಳವನೂ ಆಗಿದ್ದಾನೆ.

ಇನ್ನು ಮೇಲೆ ಹೇಳಿದ ಮೂರು ಸ್ಥಿತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಬಹುದು. ಅವನ್ನು ಆರಂಭಿಸುವ ಮೊದಲು ಒಂದು ವಿಷಯವನ್ನು ಇಲ್ಲಿ ವಿಷದೀಕರಿಸಬೇಕಾದುದು ಅತ್ಯಾವಶ್ಯಕವಾಗಿದೆ. ಅದೇ ನೆಂದರೆ, ದೋಷಪ್ರವಣತೆಯುಳ್ಳ ಆತ್ಮಸ್ಥಿತಿಯ ಪ್ರಕಟ ರೂಪವಾದ ಶಾರೀರಿಕಾವಸ್ಥೆಯು ಖುರ್‌ಆನಿನ ಸಿದ್ಧಾಂತ ದ ಪ್ರಕಾರ ನೈತಿಕಾವಸ್ಥೆಯಿಂದ ಭಿನ್ನವಾದುದಲ್ಲ. ಖುರ್ ಆನ್ ಮನುಷ್ಯನ ಸ್ವಾಭಾವಿಕ ಗುಣಗಳನ್ನೂ ದೈಹಿಕೇಚ್ಛೆ ಗಳನ್ನೂ ಆಕಾಂಕ್ಷೆಗಳನ್ನೂ ಪ್ರಾಕೃತಿಕಾವಸ್ಥೆಯ ವರ್ಗಕ್ಕೆ ಸೇರಿಸಿದೆ. ಈ ಪ್ರಾಕೃತಿಕ ಗುಣಗಳನ್ನು ಸರಿಯಾದ ರೀತಿಯಲ್ಲಿ ಕ್ರಮಪಡಿಸಿ ಯಥೋಚಿತವಾಗಿ ವಿನಿಯೋಗಿಸಿ ದಾಗ ಅವು ಉತ್ಕೃಷ್ಟ ನೈತಿಕಗುಣಗಳಾಗಿ ಮಾರ್ಪಡು ತ್ತವೆ. ಅದೇ ಪ್ರಕಾರ ನೈತಿಕಾವಸ್ಥೆಯು ಆಧ್ಯಾತ್ಮಿಕಾ ವಸ್ಥೆಯಿಂದ ಭಿನ್ನವಾದುದಲ್ಲ. ಓರ್ವನು ದೈವಭಕ್ತಿ ಯಲ್ಲಿ ತಲ್ಲೀನನಾಗಿ, ಆತ್ಮಶುದ್ಧಿಯಿಂದ ಎಲ್ಲಾ ದುಷ್ಕೃತ್ಯ ಗಳಿಂದ ಮುಕ್ತನಾಗಿ ದೈವಪ್ರೀತಿಯಲ್ಲೂ ದೈವವಿಚಾರದ ಲ್ಲೂ ಮಗ್ನನಾಗಿ ಅಚಂಚಲವಾದ ದೈವವಿಶ್ವಾಸದಿಂದಲೂ ಶಾಂತಿ-ಸಮಾಧಾನಗಳಿಂದಲೂ ಜೀವಿಸುತ್ತಾ ದೇವರಿಗೆ ಸಂಪೂರ್ಣ ವಿಧೇಯತೆಯನ್ನು ತೋರಿಸುವಾಗ ನೈತಿಕಾ ವಸ್ಥೆಯಿಂದ ಆಧ್ಯಾತ್ಮಿಕಾವಸ್ಥೆಯ ಮೆಟ್ಟಕ್ಕೇರುವನು. ಶಾರೀರಿಕಾವಸ್ಥೆಯು ಎಷ್ಟರವರೆಗೆ ನೈತಿಕಾವಸ್ಥೆಯಾಗಿ ರೂಪಾಂತರಗೊಳ್ಳುವುದಿಲ್ಲವೋ, ಅಷ್ಟರ ವರೆಗೆ ಮಾನ ವನು ಪ್ರಶಂಸಾರ್ಹನಲ್ಲ. ಏಕೆಂದರೆ, ಇಂತಹ ಶಾರೀರಿಕ ಗುಣಗಳು ಮೃಗಗಳಲ್ಲಿಯೂ ಅಚರವಸ್ತುಗಳಲ್ಲಿಯೂ ಸಾಮಾನ್ಯವಾಗಿ ತೋರುತ್ತವೆ. ಹಾಗೆಯೇ ಕೇವಲ ನೈತಿಕ ಗುಣಗಳನ್ನು ಸಂಪಾದಿಸಿದ ಮಾತ್ರದಿಂದಲೇ ಆಧ್ಯಾತ್ಮಿಕ ಗುಣಗಳು ಲಭಿಸಲಾರವು. ದೈವಾಸ್ತಿಕ್ಯವನ್ನು ಅಲ್ಲಗಳೆಯುವ ನಾಸ್ತಿಕನಿಗೆ ಸಹ ಕೆಲವು ಸದ್ಗುಣಗಳನ್ನು ತೋರ್ಪಡಿಸಲು ಸಾಧ್ಯವಿದೆ. ಸೌಮ್ಯತೆ, ಸಹನೆ, ಸಮಾ ಧಾನಶೀಲತೆ, ಅಹಿಂಸೆ ಮೊದಲಾದ ಗುಣಗಳು ಮೋಕ್ಷ ಮಾರ್ಗದ ಕುರಿತು ಅರಿವಿಲ್ಲದ ಸಾಮಾನ್ಯನಿಗೆ ಸಹ ಇರು ತ್ತವೆ. ನಿರುಪದ್ರವಿಗಳಾದ, ಸೌಮ್ಯಸ್ವಭಾವದ, ಪಳಗಿ ಸಿದರೆ ಪಳಗುವ ಹಲವಾರು ಮೃಗಗಳನ್ನು ನಾವು ಕಾಣು ತ್ತೇವೆ. ಅವುಗಳ ಮೇಲೆ ಎಷ್ಟು ಪ್ರಹಾರಗಳನ್ನು ಮಾಡಿದರೂ ಅವು ಪ್ರತೀಕಾರವನ್ನು ತೋರಿಸುವುದಿಲ್ಲ. ಆದರೆ ಅವುಗಳನ್ನು ಮನುಷ್ಯವರ್ಗಕ್ಕೆ ಯಾರೂ ಸೇರಿಸ ಲಿಕ್ಕಿಲ್ಲ. ಅಂಧಶ್ರದ್ಧೆಯಿಂದಲೂ ದುರ್ವೃತ್ತಿಯಿಂದಲೂ ನಡೆಯುವವರ ಪೈಕಿ ಕೆಲವರು ಇಂತಹ ಸ್ವಭಾವಗಳನ್ನು ತೋರಿಸಬಹುದು. ತನ್ನ ವ್ರಣದಲ್ಲಿರುವ ಕೀಟಗಳನ್ನಾ ಗಲೀ, ತಲೆಗೂದಲಿನಲ್ಲಿರುವ ಹೇನುಗಳನ್ನಾಗಲೀ ಜಠರ ದಲ್ಲಿ ಅಥವಾ ಕರುಳಿನಲ್ಲಿರುವ ಹುಳಗಳನ್ನಾಗಲೀ ನಾಶ ಪಡಿಸಲು ಸಮ್ಮತಿಸದಂತಹ ದಯಾಬುದ್ಧಿಯುಳ್ಳವರು ಇರಬಹುದು. ಜೇನುನೊಣಗಳನ್ನು ಗೂಡಿನಿಂದ ಓಡಿಸಿ ಯೂ ಹಲವನ್ನು ಕೊಂದೂ ಲಭಿಸುವ ಜೇನನ್ನು ಸೇವಿಸ

ದಿರುವಂತೆಯೇ, ಕಸ್ತೂರಿಮೃಗವನ್ನು ಕೊಂದು ಅದರ ಮರಿಗಳನ್ನು ತಾಯಿಯಿಂದ ಬೇರ್ಪಡಿಸಿ, ದುಃಖಕ್ಕೆ ಗುರಿ ಮಾಡಿ ಲಭಿಸುವ ಕಸ್ತೂರಿಯನ್ನು ಉಪಯೋಗಿಸದಂತಿರುವ ದಯಾರ್ದ್ರತೆ ಕೆಲವರಿಗೆ ಇರಬಹುದು. ಬಡ ಹುಳುಗಳನ್ನು ಕೊಲ್ಲುವುದರ ಮೂಲಕ ಮುತ್ತುಗಳೂ ರೇಶ್ಮೆಯೂ ದೊರೆಯುವುದರಿಂದಾಗಿ ಅವುಗಳನ್ನು ಉಪಯೋಗಿಸದಂತಹ ಕರುಣೆಯುಳ್ಳವರಿರಬಹುದು. ಹಾಗೆಯೇ ವ್ರಣಕ್ಕೆ ಮದ್ದನ್ನು ಹಚ್ಚಿದರೆ ಕ್ರಿಮಿಗಳು ನಶಿಸುವುದರಿಂದಾಗಿ, ಅದಕ್ಕೊಪ್ಪದೆ ಸ್ವತಃ ವೇದನೆಯನ್ನು ಸಹಿಸಲು ಸಿದ್ಧರಿರುವವರಿರಬಹುದೆಂಬುದನ್ನು ನಾನು ಅಲ್ಲಗಳೆಯುವುದಿಲ್ಲ. ಇಷ್ಟು ಮಾತ್ರವಲ್ಲ, ಕೆಲವರು ನೀರಿನಲ್ಲಿರುವ ಕ್ರಿಮಿಗಳನ್ನು ಕಾಪಾಡಲು ಯತ್ನಿಸಿ ನೀರನ್ನು ಕುಡಿಯದೆ ಸ್ವಯಂ ನಾಶವನ್ನು ಪಡೆಯುವ ಪೂರ್ಣ ದಯಾಳುಗಳಿರಬಹುದೆಂಬುದನ್ನು ನಾನು ನಿಷೇಧಿಸುವುದಿಲ್ಲ. ಆದರೆ ಈ ಸಹಜಸ್ವಭಾವಗಳನ್ನು ನೈತಿಕ ಗುಣಗಳೆಂದು ಸಮ್ಮತಿಸಲಾಗದು. ಪರಮಾತ್ಮನೊಡನೆ ಬಂಧವನ್ನು ಸ್ಥಾಪಿಸಲು ಪ್ರತಿಬಂಧಕಗಳಾದ ಆಂತರಿಕ ಮಾಲಿನ್ಯಗಳನ್ನು ಅವು ಹೋಗಲಾಡಿಸುತ್ತವೆಯೆಂದು ಸಹ ಒಪ್ಪಲು ಸಾಧ್ಯವಿಲ್ಲ. ಮನುಷ್ಯರಲ್ಲಿ ಕಂಡುಬರುವುದಕ್ಕಿಂತ ಹೆಚ್ಚಾಗಿ ಕೆಲವು ಮೃಗಗಳಲ್ಲಿಯೂ ಪಕ್ಷಿಗಳಲ್ಲಿಯೂ ಅಬಾಧಕತೆಯನ್ನೂ ಸೌಮ್ಯತೆಯನ್ನೂ ಕಾಣಬಹುದು. ಆದುದರಿಂದ ಇಂತಹ ಗುಣಗಳು ಉತ್ತಮ ಮನುಷ್ಯತ್ವವನ್ನು ಗಳಿಸಲು ಕಾರಣವಾಗುವುದೆಂದು ಹೇಳಲು ಸಾಧ್ಯವಿಲ್ಲ. ತದ್ವಿರುದ್ಧವಾಗಿ, ಹಾಗೆ ವರ್ತಿಸುವುದು ಪ್ರಕೃತಿಯೊಡನೆ ಹೋರಾಡುವುದೂ ದೈವೇಚ್ಛೆಗೆ ವಿರೋಧವನ್ನು ತೋರಿಸುವುದೂ ಪ್ರಕೃತಿಯ ಅನುಗ್ರಹಗಳನ್ನು ನಿರಾಕರಿಸುವುದೂ ಆಗಿದೆ. ಸಕಲ ನೈತಿಕ ಗುಣಗಳನ್ನು ಸಂದರ್ಭೋಚಿತವಾಗಿ ವಿನಿಯೋಗಿಸಿ, ದೈವಪಥದಲ್ಲಿ ನಿಷ್ಕಳಂಕ ಭಕ್ತಿಯಿಂದ ಚಲಿಸಿ, ದೈವೇಚ್ಛೆಗೆ ಬೇಕಾಗಿ ತನ್ನ ಸರ್ವಸ್ವವನ್ನೂ ಅರ್ಪಿಸುವುದರಿಂದ ಮಾತ್ರವೇ ಆಧ್ಯಾತ್ಮಿಕ ಪರಿಪೂರ್ಣತೆ ಪ್ರಾಪ್ತವಾಗುವುದು. ಯಾವೊಬ್ಬನು ದೈವಪಥದಲ್ಲಿ ಆತ್ಮ ಸಮರ್ಪಣೆ ಮಾಡುವನೋ ಅವನಿಗೆ ಪರಮಾತ್ಮನನ್ನು ಬಿಟ್ಟು ಬದುಕಲು ಸಾಧ್ಯವಾಗದು. ಅಂತಹ ಭಕ್ತನು ಪರಮಾತ್ಮನ ದಿವ್ಯಹಸ್ತದಿಂದ ಬಲಿಯರ್ಪಿಸಲ್ಪಟ್ಟ, ದೈವಾನುರಾಗವೆಂಬ ಸರೋವರದಲ್ಲಿ ಈಜಾಡುತ್ತಿರುವ ಮೀನಿಗೆ ಸಮಾನನು.

ಇನ್ನು, ಪ್ರಥಮ ವಿಷಯದತ್ತ ಹಿಂತಿರುಗುವಾ. ಅರಿಷಡ್ವರ್ಗಾದಿಗಳಿಗೆ ವಶವಾಗಿರುವ ಆತ್ಮ (ನಫ್ಸ್ ಅಮ್ಮಾರ), ಸ್ವಯಂ ದೂಷಿಸುವ ಆತ್ಮ (ನಫ್ಸ್ ಲವ್ವಾಮ), ಶಾಂತಿಯನ್ನು ಹೊಂದಿರುವ ಆತ್ಮ (ನಫ್ಸ್ ಮುತ್ಮಇನ್ನ) ಎಂಬೀ ಮನುಷ್ಯನ ವಿವಿಧ ಸ್ಥಿತಿಗಳಿಗೆ ಮೂರು ಉಗಮಸ್ಥಾನಗಳಿವೆಯೆಂದು ನಾನು ವಿವರಿಸಿರುವೆನಷ್ಟೇ. ಅವುಗಳಿಗೆ ಅನುಸಾರವಾದ ಮೂರು ಸಂಸ್ಕರಣ ವಿಧಾನಗಳನ್ನು ಪವಿತ್ರ ಖುರ್‌ಆನ್ ನಿರ್ದೇಶಿಸಿರುತ್ತದೆ. ಪ್ರಥಮವಾಗಿ, ಅಪರಿಷ್ಕೃತರಾದ ಕಿರಾತರನ್ನು ಭೋಜನಕ್ರಮ, ವಿವಾಹ ಸಂಪ್ರದಾಯ ಮೊದಲಾದ ನಾಗರಿಕ ವ್ಯವಹಾರ ಧರ್ಮಗಳಿಗೆ ವಿಧೇಯರನ್ನಾಗಿ ಮಾಡಿ ಮನುಷ್ಯರಂತೆ ಜೀವಿಸಲು ಕಲಿಸುವುದಾಗಿದೆ. ಅದು ಹೇಗೆಂದರೆ, ನಗ್ನರಾಗಿ ತಿರುಗಾಡದಿರುವುದು, ನಾಯಿಗಳಂತೆ ಹೆಣಗಳನ್ನು ತಿನ್ನದಿರುವುದು, ಅನಾಚಾರ ಪ್ರವರ್ತಿಸದಿರುವುದು ಮುಂತಾದ ಪ್ರಾಥಮಿಕಾಚಾರಗಳನ್ನು ಅವರಿಗೆ ಬೋಧಿಸುವುದಾಗಿದೆ. ಅನಾಗರಿಕರಾದ ಕಿರಾತರನ್ನು ಸುಧಾರಿಸಲು ಮೊದಲನೆಯದಾಗಿ ಅವರನ್ನು ಈ ವಿಧಾನದ ಮೂಲಕ ನಡೆಸಿ ಸಾಮೂಹಿಕ ವ್ಯವಹಾರ ಧರ್ಮಗಳ ಹಾಗೂ ಪ್ರಥಮ ಹಂತದ ನೈತಿಕ ಗುಣಗಳ ತರಬೇತಿಯನ್ನು ಕೊಡಬೇಕಾಗಿದೆ. ಬಾಹ್ಯವಾದ ಈ ಸಾಮಾಜಿಕ ಧರ್ಮಗಳನ್ನು ಸರಿಯಾದ ಕ್ರಮದಲ್ಲಿ ಅನುಸರಿಸಿದವರು ದ್ವಿತೀಯ ಪರಿಷ್ಕರಣ ವಿಧಾನದಲ್ಲಿ ಪ್ರವೇಶಿಸಲು ಅರ್ಹರಾಗುತ್ತಾರೆ. ಈ ಘಟ್ಟದಲ್ಲಿ ಅವರಿಗೆ ಉತ್ಕೃಷ್ಟವಾದ ನೈತಿಕ ಪಾಠಗಳನ್ನೂ ಮಾನವನಲ್ಲಿ ನಿಗೂಢವಾಗಿರುವ ವಿಶಿಷ್ಟ ಶಕ್ತಿಗಳನ್ನೂ ಸಂದರ್ಭಾನುಸಾರವಾಗಿ ವಿನಿಯೋಗಿಸಲು ಕಲಿಸಬೇಕು. ಹೀಗೆ ಉತ್ಕೃಷ್ಟ ನೈತಿಕ ಗುಣಗಳನ್ನು ಪಡೆದವರು ತೃತೀಯ ಘಟ್ಟವನ್ನು ಪ್ರವೇಶಿಸಲು ಅರ್ಹರಾಗುತ್ತಾರೆ. ಈ ವಿಧಾನವನ್ನನುಸರಿಸಿ ಚಲಿಸುವ ಭಕ್ತರಿಗೆ ಪರಮಾತ್ಮನ ಮೇಲಿರುವ ಪ್ರೀತಿಯೆಂಬ ಪಾನೀಯವನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ. ಇವು ಖುರ್‌ಆನ್ ನಿರ್ದೇಶಿಸುವ ಮೂರು ರೀತಿಯ ಪರಿಷ್ಕಾರ ವಿಧಾನಗಳಾಗಿವೆ.

## ಪೈಗಂಬರರ ಅವತಾರ

ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಪೈಗಂಬರರು (ಪರಮಾತ್ಮನು ಅವರ ಮೇಲೆ ತನ್ನ ಇಷ್ಟಾಶೀರ್ವಾದಗಳನ್ನೂ ಅನುಗ್ರಹಗಳನ್ನೂ ಸುರಿಸಲಿ) ಅವತರಿಸಿದುದು.

ಪ್ರಪಂಚವು ಅಜ್ಞಾನ ಹಾಗೂ ಅಧರ್ಮದಿಂದ ಅಂಧಕಾರಾವೃತವಾದ ಸಮಯದಲ್ಲಾಗಿತ್ತು. ಇದರ ಕುರಿತು ಅಲ್ಲಾಹು ಹೀಗೆನ್ನುತ್ತಾನೆ. "ಜಹರಲ್ ಫಸಾದ ಫಿಲ್ ಬರ್‍ರಿ ವಲ್ ಬಹ್ರಿ" (ಖುರ್‌ಆನ್ 30 : 42) – ಭೂಮಿಯಲ್ಲೂ ಸಮುದ್ರದಲ್ಲೂ ಅಧರ್ಮವು ವ್ಯಾಪಿಸಿದೆ.

ಈ ರೂಪಕ ವಾಕ್ಯವು ಸೂಚಿಸುವುದೇನೆಂದರೆ ದೈವೋಕ್ತಗ್ರಂಥದ ಅನುಗ್ರಹವನ್ನು ಪಡೆದಿರುವವರೂ ಪಡೆಯದಿರುವವರೂ ಒಂದೇ ರೀತಿಯಲ್ಲಿ ಕೆಟ್ಟುಹೋಗಿರುವರೆಂದಾಗಿದೆ. ಹೀಗೆ ನಿರ್ಜೀವ ಜನರನ್ನು ಪುನರುಜ್ಜೀವನಗೊಳಿಸುವುದಾಗಿದೆ ಖುರ್‌ಆನಿನ ಲಕ್ಷ್ಯ. ಖುರ್‌ಆನ್ ಹೇಳುವುದನ್ನು ನೋಡಿರಿ:

> "ಇಅ್‌ಲಮೂ ಅನ್ನಲ್ಲಾಹ ಯುಹ್‌ಯಿಲ್ ಅರ್‌ಲ ಬಅದ ಮೌತಿಹಾ". (57:18)
>
> ನಿರ್ಜೀವಿಯಾಗಿರುವ ಭೂಮಿಯನ್ನು ಪರಮಾತ್ಮನು ಪುನರುಜ್ಜೀವನಗೊಳಿಸಲು ತೊಡಗಿರುವುದನ್ನು ತಿಳಿಯಿರಿ.

ಆ ಕಾಲದಲ್ಲಿ ಅರಬ್ ರಾಜ್ಯದಲ್ಲಿಡೀ ಅಜ್ಞತೆಯೂ ಅನಾಗರಿಕತೆಯೂ ವ್ಯಾಪಿಸಿತ್ತು. ಯಾವುದೇ ಸಾಮಾಜಿಕ ನಿಯಮವನ್ನು ಅವರು ಅನುಸರಿಸುತ್ತಿರಲಿಲ್ಲ. ಎಲ್ಲಾ ವಿಧ ಪಾಪಕೃತ್ಯಗಳೂ ದುರಾಚಾರಗಳೂ ಅವರ ದೃಷ್ಟಿಯಲ್ಲಿ ಅಭಿಮಾನಕರವಾಗಿತ್ತು. ಒಬ್ಬೊಬ್ಬನು ಅಸಂಖ್ಯ ಸ್ತ್ರೀಯರನ್ನು ವರಿಸುತ್ತಿದ್ದನು. ದುಷ್ಟಾರ್ಜನೆ ಅವರಿಗೆ ಬಹಳ ಇಷ್ಟವಾಗಿತ್ತು. ತಾಯಂದಿರೊಡನೆ ಲೈಂಗಿಕಬಂಧ ಸಹ ಯುಕ್ತವೆಂದು ಅವರು ಪರಿಗಣಿಸಿದ್ದರು. ಈ ನಿಂದ್ಯ ಸಂಪ್ರದಾಯವನ್ನು ನಿರೋಧಿಸುವುದಕ್ಕಾಗಿ ಅಲ್ಲಾಹು ಖುರ್‌ಆನಿನಲ್ಲಿ: "ಹುರ್‍ರಿಮತ್ ಅಲೈಕುಮ್ ಉಮ್ಮಹಾತುಕುಮ್" (4 : 24) — "ನಿಮ್ಮ ತಾಯಂದಿರು ನಿಮಗೆ ನಿಷಿದ್ಧ" ಎಂದು ವಿಧಿಸಿದನು. ಅವರು ಹೆಣಗಳನ್ನು ಭಕ್ಷಿಸಲು ಹಿಂಜರಿಯುತ್ತಿರಲಿಲ್ಲ. ನರಭಕ್ಷಣವು ಸಹ ಅವರ ರೂಢಿಯಾಗಿತ್ತು. ಅವರು ಮಾಡಿರದ ಯಾವುದೇ ಪಾಪಕೃತ್ಯ ಬಾಕಿಯುಳಿದಿಲ್ಲ. ಅವರಲ್ಲಿ ಹೆಚ್ಚಿನವರು ಪಾರತ್ರಿಕ ಜೀವಿತದಲ್ಲಿ ವಿಶ್ವಾಸವಿಲ್ಲದವರಾಗಿದ್ದರು. ದೈವಾಸ್ತಿಕ್ಯ ನಿಷೇಧಿಗಳು ಬಹುಸಂಖ್ಯೆಯಲ್ಲಿದ್ದರು. ಹೆಣ್ಣುಮಕ್ಕಳನ್ನು ತಮ್ಮ ಸ್ವಂತ ಕೈಯಿಂದಲೇ ಕೊಲ್ಲುತ್ತಿದ್ದರು. ಅನಾಥ ಮಕ್ಕಳನ್ನು ಕೊಂದು ಅವರ ಸಂಪತ್ತನ್ನು ವಶ ಪಡಿಸುತ್ತಿದ್ದರು. ಹೊರನೋಟಕ್ಕೆ ಅವರು ಮನುಷ್ಯರಾಗಿ ತೋರಿದರೂ ಯಥಾರ್ಥದಲ್ಲಿ ವಿವೇಕ, ಮರ್ಯಾದೆ, ಲಜ್ಜೆ, ಅಭಿಮಾನ ಮೊದಲಾದ ಮನುಷ್ಯ ಗುಣಗಳು ಅವರಲ್ಲಿ ಕಂಡುಬರುತ್ತಿರಲಿಲ್ಲ. ಅವರು ಮದ್ಯಪಾನದಲ್ಲಿ ಅತ್ಯಾಸಕ್ತರಾಗಿದ್ದರು. ವ್ಯಭಿಚಾರದಲ್ಲಿ ಅಗ್ರಣಿ ಅವರಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಿದ್ದನು. ಅಜ್ಞತೆಯು ಅವರಲ್ಲಿ ಎಷ್ಟರಮಟ್ಟಿಗೆ ವ್ಯಾಪಿಸಿತ್ತೆಂದರೆ, ನೆರೆರಾಜ್ಯದವರು ಅವರನ್ನು "ಉಮ್ಮಿ" (ನಿರಕ್ಷರ ಕುಕ್ಷಿ) ಗಳೆಂದು ಕರೆಯುತ್ತಿದ್ದರು. ಅಂತಹ ಕಾಲ ಘಟ್ಟದಲ್ಲಿ ಈ ಜನಾಂಗದ ಸುಧಾರಣೆಗಾಗಿ ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಪೈಗಂಬರರು (ಸ.) ಮಕ್ಕಾಪಟ್ಟಣದಲ್ಲಿ ಆವಿರ್ಭವಿಸಿದರು. ಮೇಲೆ ಹೇಳಿರುವ ತ್ರಿವಿಧ ಸಂಸ್ಕಾರಗಳ ಸರಿಯಾದ ಸಂದರ್ಭವು ಇದೇ ಆಗಿತ್ತು. ಇದೇ ಕಾರಣದಿಂದಲೇ ಪವಿತ್ರ ಖುರ್‌ಆನ್, ಅದು ಇತರ ಮಾರ್ಗದರ್ಶಕ ಗ್ರಂಥಗಳಿಗಿಂತ ಪರಿಪೂರ್ಣವೂ ಅನ್ಯೂನವೂ ಆಗಿದೆಯೆಂದು ವಾದಿಸುತ್ತದೆ. ಈ ಗ್ರಂಥದ ಹೊರತು ಬೇರೊಂದು ಮತಗ್ರಂಥಕ್ಕೆ ಈ ಮೂರು ವಿಧ ಸುಧಾರಣೆಗಳ ಸಂದರ್ಭ ದೊರೆಯಲಿಲ್ಲ. ನಾಗರಿಕತೆಯಿಲ್ಲದೆ ಪಶು ಸಮಾನರಾಗಿದ್ದವರನ್ನು ಮನುಷ್ಯರನ್ನಾಗಿಯೂ ಮನುಷ್ಯರನ್ನು ನೀತಿವಂತರನ್ನಾಗಿಯೂ ನೀತಿವಂತರನ್ನು ದೈವಭಕ್ತರನ್ನಾಗಿಯೂ ಮಾಡಿ ಅಧ್ಯಾತ್ಮದ ಉತ್ಕೃಷ್ಟಸ್ಥಾನಕ್ಕೆ ತಲಪಿಸುವುದೇ ಪವಿತ್ರ ಖುರ್‌ಆನಿನ ಉದ್ದೇಶವಾಗಿದೆ. ಆ ಕಾರಣದಿಂದ ಈ ಮೂರು ಸಂಗತಿಗಳ ಕುರಿತು ಅದು ಧಾರಾಳವಾಗಿ ಪ್ರಸ್ತಾಪಿಸಿರುತ್ತದೆ.

ಪ್ರಸ್ತುತ ಮೂರು ವಿಧಾನಗಳ ಕುರಿತು ಸವಿಸ್ತಾರವಾಗಿ ಪ್ರತಿಪಾದಿಸುವ ಮೊದಲು ಒಂದು ವಿಷಯವನ್ನು ಇಲ್ಲಿ ತಿಳಿಸುವುದು ಅತ್ಯಾವಶ್ಯಕವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಬಲಾತ್ಕಾರದಿಂದ ಒಪ್ಪಿಕೊಳ್ಳಬೇಕಾದ ಸಂಗತಿಯೇನೂ ಇಲ್ಲ. ಆ ಪವಿತ್ರ ಗ್ರಂಥದ ಉದ್ದೇಶ ಈ ತ್ರಿವಿಧ ಸುಧಾರಣೆಗಳು ಮಾತ್ರವಾಗಿದೆ. ಅದರ ಎಲ್ಲಾ ತತ್ವೋಪದೇಶಗಳು ಈ ಸುಧಾರಣೆಗಳ ಕುರಿತಾಗಿವೆ. ಮತ್ತಿತ್ತರ ನಿಯಮ ವ್ಯವಸ್ಥೆಗಳೆಲ್ಲಾ ಈ ಉದ್ದೇಶವನ್ನು ಸಾಧಿಸಲಿಕ್ಕಿರುವ ಮಾಧ್ಯಮಗಳಾಗಿವೆ. ಶಾರೀರಿಕ ರೋಗಗಳನ್ನು ಗುಣಪಡಿಸಲಿಕ್ಕಾಗಿ ಕೆಲವೊಮ್ಮೆ ಡಾಕ್ಟರ್ ಶಸ್ತ್ರಕ್ರಿಯೆಯನ್ನು ಮಾಡುವನು, ಕೆಲವೊಮ್ಮೆ ಮುಲಾ

ಮನ್ನು ಹಚ್ಚುವನು. ಅಂತೆಯೇ ಖುರ್‌ಆನ್ ಸಹ ಮನುಷ್ಯರ ಒಳಿತಿಗಾಗಿ ಇದೇ ವಿಧಾನಗಳನ್ನು ಯಥೋಚಿತವಾಗಿ ನಿರ್ದೇಶಿಸಿರುತ್ತದೆ. ಅದರ ಎಲ್ಲಾ ತತ್ವೋಪದೇಶಗಳ, ಸಿದ್ಧಾಂತಗಳ ಮತ್ತು ಧರ್ಮಬೋಧನೆಗಳ ಮುಖ್ಯೋದ್ದೇಶ ಮನುಷ್ಯನನ್ನು ಮೃಗೀಯ ಶಾರೀರಿಕಾವಸ್ಥೆಯಿಂದ ನೈತಿಕ ಮಟ್ಟಕ್ಕೂ ಅಲ್ಲಿಂದ ಎಲ್ಲೆ ಇಲ್ಲದ ಆಧ್ಯಾತ್ಮಿಕ ಮಟ್ಟಕ್ಕೆತ್ತುವುದೂ ಆಗಿದೆ.

## ನೈತಿಕ ಗುಣಗಳ ನಿರೂಪಣೆ

ಶಾರೀರಿಕಾವಸ್ಥೆ ನೈತಿಕಾವಸ್ಥೆಯಿಂದ ಭಿನ್ನವಾದುದಲ್ಲವೆಂದು ಮೊದಲು ಪ್ರಸ್ತಾಪಿಸಲಾಗಿದೆ. ಶಾರೀರಿಕಾವಸ್ಥೆಯ ಚಟುವಟಿಕೆಗಳನ್ನು ವಿವೇಕದಿಂದಲೂ ಸಂದರ್ಭೋಚಿತವಾಗಿಯೂ ಕ್ರಮಪಡಿಸುವಾಗ ಅವು ನೈತಿಕ ಗುಣಗಳಾಗಿ ಮಾರ್ಪಡುತ್ತವೆ. ನೈತಿಕ ಗುಣಗಳಿಗೆ ಬಹಳ ಹೋಲುವ ಕರ್ಮವು ಒಬ್ಬನಿಂದ ಪ್ರಕಟಿಸಲ್ಪಡುವುದಾದರೂ ಅದು ವಿವೇಕಶೂನ್ಯವು ಅನಿಯಂತ್ರಿತವೂ ಆಗಿದ್ದರೆ ಅದು ಸದ್ಗುಣವೆಂದು ಪರಿಗಣಿಸಲ್ಪಡಲಾರದು. ಅದು ಕೇವಲ ಅವನ ಸ್ವಾಭಾವಿಕ ಪ್ರೇರಣೆಯ ಫಲವಾಗಿದೆ. ಉದಾಹರಣೆಗಾಗಿ, ಒಂದು ನಾಯಿ ಅಥವಾ ಒಂದು ಆಡು ತನ್ನ ಯಜಮಾನನೊಡನೆ ತೋರಿಸುವ ಸ್ನೇಹ ಮತ್ತು ವಿಧೇಯತೆಯನ್ನು ಸದ್ಗುಣವೆಂದಾಗಲೀ ಸದಾಚಾರವಾಗಲೀ ಹೇಳಲು ಸಾಧ್ಯವಿಲ್ಲ. ಹಾಗೆಯೇ ತೋಳ ಅಥವಾ ಸಿಂಹದ ಕ್ರೂರ ಸ್ವಭಾವವನ್ನು ದುರ್ಗುಣವೆಂದು ತಿಳಿಯಬಾರದು. ಮೊದಲು ಪ್ರಸ್ತಾಪಿಸಿದಂತೆ, ಯಾವುದೇ ಕಾರ್ಯವನ್ನೂ ಸಂದರ್ಭೋಚಿತವಾಗಿಯೂ ವಿವೇಕದಿಂದಲೂ ಮಾಡುವ ಘಟ್ಟದಲ್ಲಿ ನೈತಿಕಾವಸ್ಥೆ ಆರಂಭವಾಗುತ್ತದೆ. ತನ್ನ ಪ್ರವೃತ್ತಿಗಳಲ್ಲಿ ಬುದ್ಧಿಯನ್ನೂ ವಿವೇಕವನ್ನೂ ಉಪಯೋಗಪಡಿಸದವನನ್ನು ಬುದ್ಧಿಪಕ್ವವಾಗದ ಶಿಶುವಿಗೋ ಅಥವಾ ಹತಬುದ್ಧಿಯ ಹುಚ್ಚನಿಗೋ ಹೋಲಿಸಬಹುದು. ಮಗುವಿನ ಅಥವಾ ಚಿತ್ತಭ್ರಮೆಯಾದವನ ವರ್ತನೆಗಳು ಕೆಲವೊಮ್ಮೆ ಸತ್ಕರ್ಮಗಳಿಗೆ ಸದೃಶವಾಗಿ ತೋರಬಹುದು. ಆದರೆ ಅವು ಸಂದರ್ಭಾನುಸಾರವಾಗಿಯಾಗಲೀ ವಿವೇಕಪೂರ್ಣವಾಗಿಯಾಗಲೀ ಇಲ್ಲದಿರುವುದರಿಂದ ಅವನ್ನು ವಿವೇಕಶಾಲಿಗಳ್ಯಾರೂ ಸದಾಚಾರಗುಣಗಳೆಂದು ಪರಿಗಣಿಸಲಾರರು. ಅವು ಕೇವಲ ಸ್ವಾಭಾವಿಕ ಗುಣಗಳಾಗಿವೆ. ಉದಾಹರಣೆಗೆ ಶಿಶುವು ಜನ್ಮವೆತ್ತಿದ ಕೂಡಲೇ ತಾಯಿಯ ಸ್ತನಗಳೆಡೆಗೆ ಮುಖವನ್ನು ತಿರುಗಿಸುತ್ತದೆ. ಕೋಳಿಮರಿ ಮೊಟ್ಟೆಯೊಡೆದು ಹೊರಗೆ ಬಂದಾಕ್ಷಣ ಕಾಳನ್ನು ಹೆಕ್ಕಲು ಓಡುತ್ತದೆ. ಜಿಗಳೆಯ ಮರಿ ಜಿಗಳೆಯ ಸ್ವಭಾವವನ್ನು ಪಡೆದಿರುತ್ತದೆ. ಸರ್ಪದ ಮರಿಯು ಅದರ ಗುಣವನ್ನು ಪ್ರಕಟಪಡಿಸುವುದು. ಸಿಂಹದ ಮರಿಯು ಅದರ ಸ್ವಭಾವವನ್ನು ತೋರಿಸುವುದು. ಒಂದು ಶಿಶುವನ್ನು ನಾವು ಪರಿಶೋಧಿಸುವುದಾದರೆ, ಅದು ಜನ್ಮತಾಳಿದ ಕೂಡಲೇ ಮನುಷ್ಯ ಸ್ವಭಾವವನ್ನು ಪ್ರಕಟಿಸಲು ತೊಡಗಿ, ಬೆಳೆಯುತ್ತಾ ಹೋದಂತೆ ಅದು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಈಗ ಅದು ಮೊದಲಿಗಿಂತ ಜೋರಾಗಿ ಅಳುತ್ತದೆ. ಮೊದಲಿನ ಮುಗುಳ್ನಗೆಯ ಬದಲು ಈಗ ಗಟ್ಟಿಯಾಗಿ ನಗುತ್ತದೆ. ಅದರ ಕಣ್ಣುಗಳಲ್ಲಿ ಉದ್ದೇಶಿತ ನೋಟದ ಚಿಹ್ನೆಗಳು ತೋರುವುವು. ಅದು ತನ್ನ ಇಷ್ಟಾನಿಷ್ಟಗಳನ್ನು ಅವಯುವಗಳ ಮುಖಾಂತರ ಪ್ರಕಟಪಡಿಸುತ್ತದೆ. ಕೆಲವೊಮ್ಮೆ ಅದು ಹೊಡೆಯಲಿಕ್ಕೆ ಕೈಯೆತ್ತುತ್ತದೆ. ಕೆಲವೊಮ್ಮೆ ಅದು ಏನನ್ನಾದರೂ ಕೊಡಲಿಕ್ಕೆ ಕೈ ನೀಡುತ್ತದೆ. ಆದರೆ ಯಥಾರ್ಥದಲ್ಲಿ ಎಲ್ಲಾ ಚೇಷ್ಟೆಗಳು ಸ್ವಾಭಾವಿಕವಾಗಿವೆ. ಬುದ್ಧಿಪರವಾಗಿ ಅಪೂರ್ಣಾವಸ್ಥೆಯಲ್ಲಿರುವ ಅನಾಗರಿಕ ಮನುಷ್ಯನ ಸ್ಥಿತಿಯನ್ನು ಈ ಮಗುವಿನ ಸ್ಥಿತಿಯೊಂದಿಗೆ ಹೋಲಿಸಬಹುದು. ಅವನು ತನ್ನ ಮಾತಿನಲ್ಲೂ ಪ್ರವೃತ್ತಿಯಲ್ಲೂ ಚಲನವಲನಗಳಲ್ಲೂ ಮೌನದಲ್ಲೂ ಸ್ವಾಭಾವಿಕತೆಯನ್ನು ತೋರಿಸುತ್ತಾನೆ. ಅವನು ಸದಾ ಸ್ವಾಭಾವಿಕ ಉದ್ವೇಗಕ್ಕೆ ಅಧೀನನಾಗಿರುತ್ತಾನೆ. ಅವನ ಯಾವುದೇ ವರ್ತನೆ ಅಂತಃಕರಣದ ಪ್ರಚೋದನೆಯ ಪರಿಣಾಮದಿಂದ ಆಗಿರಲಿಕ್ಕಿಲ್ಲ. ಬದಲಾಗಿ, ಬಾಹ್ಯ ಪ್ರೇರಣೆಗಳುಂಟಾಗುವಾಗ ಅವನ ಅಂತರಂಗದಲ್ಲಡಗಿದ ವಿಕಾರಗಳು ಹೊರ ಬೀಳುವುವು. ಹೀಗೆ ಸ್ವಭಾವ ಪ್ರೇರಿತವಾದ ಅವನ ವರ್ತನೆಗಳೆಲ್ಲಾ ದೋಷಯುತವಾಗಿರಬೇಕೆಂದಿಲ್ಲ. ಅವನ ಕೆಲವು ವರ್ತನೆಗಳು ವಿವೇಕಿಯ ಸದಾಚಾರಕ್ಕೆ ಸಮಾನವಾಗಿರಬಹುದು. ಆದರೆ ಅವು ಬುದ್ಧಿಪೂರ್ವಕವಾದ ವಿವೇಚನೆಯ ಫಲದಿಂದ ಉಂಟಾಗಿರಲಿಕ್ಕಿಲ್ಲ. ಅವನ ವರ್ತನೆಯಲ್ಲಿ ತುಸು ಮಾತ್ರವಾದ ವಿವೇಕದ ಲಕ್ಷಣಗಳು ಕಂಡುಬಂದರೂ ಸಹ ಅವು ಹೆಚ್ಚಾಗಿ ಸ್ವಭಾವಪ್ರೇರಿತಗಳಾಗಿರುವುದರಿಂದ ಅವುಗಳನ್ನು ಸತ್ಕೃತ್ಯಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಅಧಿಕತೆಯನ್ನು ನೋಡಿಯಲ್ಲವೇ ಯಾವುದನ್ನೂ ನಿರ್ಣಯಿಸುವುದು.

ಸಂಕ್ಷಿಪ್ತವಾಗಿ, ಕೀಳುಜಾತಿಯ ಪ್ರಾಣಿಗಳಂತೆಯೋ ಶಿಶುಗಳಂತೆಯೋ ಚಿತ್ತಭ್ರಮಿಗಳಂತೆಯೋ ಸ್ವಾಭಾವಿಕ ಉದ್ವೇಗಗಳಿಗೆ ಅಧೀನನಾಗಿ ವರ್ತಿಸುತ್ತಾ ಹೆಚ್ಚು ಕಮ್ಮಿ ಮೃಗೀಯವಾಗಿ ಜೀವಿಸುತ್ತಿರುವವನ ಚೇಷ್ಟೆಗಳನ್ನು ಯಥಾರ್ಥ ಸದ್ಗುಣಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಒಬ್ಬನಿಗೆ ಒಳಿತು ಕೆಡುಕುಗಳ ವ್ಯತ್ಯಾಸವನ್ನು ಅರಿತುಕೊಳ್ಳಲಿಕ್ಕೂ ಎರಡು ದುರ್ಗುಣಗಳ ಅಥವಾ ಎರಡು ಸದ್ಗುಣಗಳ ಪರಸ್ಪರ ತಾರತಮ್ಯ ವ್ಯತ್ಯಾಸವನ್ನು ವಿವೇಚಿಸಲಿಕ್ಕೂ ಬೇಕಾದ ಬುದ್ಧಿ ಪಕ್ವವಾಗುವಾಗ ಅವನ ಪ್ರವೃತ್ತಿ ಸತ್ಕೃತ್ಯವೋ ದುಷ್ಕೃತ್ಯವೋ ಎಂದು ಬೇರ್ಪಟ್ಟು ಕಾಣುವ ಕಾಲವು ಆರಂಭವಾಗುವುದು. ಈ ಘಟ್ಟದಲ್ಲಿ ಅವನು ಸದ್ಗುಣಗಳನ್ನು ಉಪೇಕ್ಷಿಸಿದುದಕ್ಕಾಗಿ ವ್ಯಸನಿಸುವನು. ದುಷ್ಕೃತ್ಯಗಳನ್ನು ಗೈದುದಕ್ಕಾಗಿ ಪಶ್ಚಾತ್ತಾಪ ಪಡುವನು. ಇದು ಖುರ್‌ಆನ್ "ನಫ್ಸ್ ಲವ್ವಾಮಃ"– ಸ್ವಯಂ ದೂಷಿಸುವ ಅವಸ್ಥೆ ಎಂಬ ಹೆಸರಿನಿಂದ ವಿಶೇಷಿಸಿರುವ ಮನುಷ್ಯ ಜೀವಿತದ ಎರಡನೆಯ ಪರಿಣಾಮ ಘಟ್ಟವಾಗಿದೆ. ಆದರೆ ಬರೇ ಅಪರಿಷ್ಕೃತನೊಬ್ಬನನ್ನು ಸ್ವಯಂ ದೂಷಿಸುವ ಪಶ್ಚಾತ್ತಾಪಬೋಧವನ್ನು ಪ್ರೇರೇಪಿಸುವ ಪರಿವರ್ತನ ಘಟ್ಟಕ್ಕೆ ತಲಪಿಸಲು ಗುಣದೋಷೋಪದೇಶ ಮಾತ್ರವೇ ಸಾಲದು. ತನ್ನ ಜನ್ಮ ನಿರರ್ಥಕವೋ ನಿರುಪಯೋಗವೋ ಅಲ್ಲವೆಂದು ಅವನು ತಿಳಿದಿರಲಿಕ್ಕಾಗಿಯಾದರೂ ದೈವಿಕಜ್ಞಾನವು ಅವನಿಗೆ ಸಿದ್ಧಿಸಬೇಕಾದದ್ದು ಅಗತ್ಯವಾಗಿದೆ. ಅದು ಅವನಲ್ಲಿ ಯಥಾರ್ಥ ನೈತಿಕ ಗುಣಗಳನ್ನು ಸೃಷ್ಟಿಸಲು ಕಾರಣೀಭೂತವಾಗುತ್ತದೆ. ಆದ್ದರಿಂದಲೇ ಖುರ್‌ಆನ್ ತತ್ತ್ವೋಪದೇಶಗಳನ್ನು ನೀಡುವುದರೊಂದಿಗೆ ಪರಮಾತ್ಮನ ಸಂಬಂಧಿಸಿ ಯಥಾರ್ಥಜ್ಞಾನವನ್ನು ಅರುಹಿ ಒಳ್ಳೆಯ ಅಥವಾ ಕೆಟ್ಟ ಪ್ರತಿಯೊಂದು ಕಾರ್ಯ ಐಹಿಕ ಜೀವಿತದಲ್ಲಿ ಮನುಷ್ಯನಿಗೆ ಆಧ್ಯಾತ್ಮ ಸುಖ ಅಥವಾ ದುಃಖವನ್ನು ನೀಡುವ ಪ್ರತಿಫಲಕ್ಕೆ ಹೇತುವಾಗುವುದೆಂದೂ ಇವರ ಪರಿಣಾಮ ಪಾರತ್ರಿಕ ಜೀವಿತದಲ್ಲಿ ಪ್ರತ್ಯಕ್ಷರೂಪದಲ್ಲಿ ಅನುಭವವಾಗುವುದೆಂದೂ ಪ್ರಬೋಧಿಸಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸ್ವಯಂ ದೂಷಿಸುವ ಈ ಅವಸ್ಥೆಯನ್ನು ಒಬ್ಬನು ಪಡೆಯುವಾಗ, ದೋಷಕರವಾದ ಎಲ್ಲಾ ಕೃತ್ಯಗಳ ಬಗ್ಗೆ ಪಶ್ಚಾತ್ತಾಪಪಟ್ಟು, ಸತ್ಕರ್ಮದಲ್ಲಿ ಆಸಕ್ತಿಯನ್ನು ತೋರಿಸುವಂತೆ ಅವನ ಬುದ್ಧಿಯೂ ಜ್ಞಾನವೂ ಮನಃಸಾಕ್ಷಿಯೂ ವಿಕಾಸಗೊಂಡಿರುತ್ತವೆ. ಈ ಘಟ್ಟದಲ್ಲಿ ಅವನು ಉತ್ಕೃಷ್ಟ ನೈತಿಕ ಗುಣಗಳನ್ನು ಗಳಿಸುತ್ತಾನೆ.

ಇಲ್ಲಿ "ಖಲ್ಕ್" ಮತ್ತು "ಖುಲ್ಕ್" ಎಂಬ ಅರಬಿ ಪದಗಳ ಕುರಿತು ಸ್ವಲ್ಪ ವಿವರಿಸಬೇಕಾದುದು ಅತ್ಯಾವಶ್ಯಕವಾಗಿದೆ. ಅರಬಿ ಭಾಷೆಯಲ್ಲಿ ಬರೆಯುವಾಗ ಸ್ವರ ಚಿಹ್ನೆಗಳಲ್ಲಿ ಹೊರತು ರೂಪದಲ್ಲಿ ವ್ಯತ್ಯಾಸವಿಲ್ಲದ ಈ ಎರಡು ಪದಗಳಲ್ಲಿ 'ಖಲ್ಕ್' ಬಾಹ್ಯಸೃಷ್ಟಿಯನ್ನೂ 'ಖುಲ್ಕ್' ಆಂತರಿಕ ಸೃಷ್ಟಿಯನ್ನೂ ಸೂಚಿಸುತ್ತದೆ. ಈ ಆಂತರಿಕ ಸೃಷ್ಟಿ ಅಥವಾ ಆತ್ಮಸಂಸ್ಕರಣ ಪ್ರಾಪ್ತವಾಗುವುದು ವಿವೇಕಯುತವಾದ ಸತ್ಕರ್ಮಗಳ ಮೂಲಕವಾಗಿದೆ; ಕೇವಲ ವಿಕಾರಪ್ರೇರಿತ ವರ್ತನೆಗಳಿಂದಲ್ಲ. ಆದ್ದರಿಂದ ಪ್ರಸ್ತುತ ಶಬ್ದ ನೈತಿಕ ಗುಣಗಳ ಹೊರತು ಪ್ರಾಕೃತಿಕ ಸಂವೇಗಗಳ ಕುರಿತು ಪ್ರಯೋಗಿಸಲ್ಪಟ್ಟಿಲ್ಲ. ಸದ್ಗುಣಗಳೆಂದರೆ ಸಹಿಷ್ಣುತೆ, ಸೌಮ್ಯತೆ, ವಿನಯ ಎಂಬಿತ್ಯಾದಿ ಮಾತ್ರವೆಂಬ ರೂಢಿಯಲ್ಲಿರುವ ಅಭಿಪ್ರಾಯವು ಸರಿಯಲ್ಲವೆಂದು ಸಹ ಇಲ್ಲಿ ಹೇಳಬೇಕಾಗಿದೆ. ಮನುಷ್ಯನ ಪ್ರತಿಯೊಂದು ಬಾಹ್ಯಚಟುವಟಿಕೆಯೆದುರಲ್ಲಿ ಹೃದಯಾಂತರಾಳದಲ್ಲಿ ಒಂದೊಂದು ಸಹಜಗುಣವು ನಿಕ್ಷಿಪ್ತವಾಗಿರುತ್ತದೆ. ಈ ಅಂತಶಕ್ತಿ ಔಚಿತ್ಯಪೂರ್ಣವಾಗಿ ಪ್ರಕಟಗೊಂಡಾಗ ನೈತಿಕಗುಣವೆಂದು ಗಣಿಸಲ್ಪಡುವ ಸಂಸ್ಕೃತಿ ಅದಕ್ಕೆ ಸಿದ್ಧಿಸುತ್ತದೆ. ಉದಾಹರಣೆಗಾಗಿ, ಅಳುವವನ ಕಣ್ಣುಗಳಿಂದ ಬಾಹ್ಯದಲ್ಲಿ ಕಣ್ಣೀರು ಸುರಿಯುತ್ತದೆ. ಅದೇ ಸಂದರ್ಭದಲ್ಲಿ ಅವನ ಹೃದಯಾಂತರಾಳದಲ್ಲಿ ದುಃಖ ಉಮ್ಮಳಿಸುತ್ತದೆ. ವಿವೇಕಿಯಾದ ಮನುಷ್ಯನು ಅದನ್ನು ತಕ್ಕುದಾದ ರೀತಿಯಲ್ಲಿ ತೋರ್ಪಡಿಸುವಾಗ ಅದೊಂದು 'ಖುಲ್ಕ್' ಅಥವಾ ನೈತಿಕಗುಣವಾಗುತ್ತದೆ. ಹಾಗೆಯೇ ಶತ್ರುವನ್ನೆದುರಿಸಲು ಮನುಷ್ಯನು ಕೈಗಳನ್ನು ಪ್ರಯೋಗಿಸುವಾಗ, ಈ ಬಾಹ್ಯೇಂದ್ರಿಯ ಕ್ರಿಯೆಗನುರೂಪವಾಗಿ ಹೃದಯದಲ್ಲಿ ನಿಕ್ಷಿಪ್ತವಾಗಿರುವ ಧೈರ್ಯವೆಂಬ ಶಕ್ತಿಯು ಚುರುಕುಗೊಳ್ಳುತ್ತದೆ. ಈ ಶಕ್ತಿಯನ್ನು ಯುಕ್ತಾಯುಕ್ತತೆಯಿಂದ ವಿನಿಯೋಗಿಸಿದಾಗ, ಇದು ಸಹ ಸದ್ಗುಣವಾಗಿ ಪರಿಣಮಿಸುತ್ತದೆ. ಹಾಗೆಯೇ ಮನುಷ್ಯನು ಕೆಲವೊಮ್ಮೆ ತನ್ನ ಕೈಗಳಿಂದ, ದುರ್ಜನರಿಂದ ಹಿಂಸೆ ಪಡುವವರನ್ನು ರಕ್ಷಿಸಲು ಉದ್ಯುಕ್ತನಾಗುವುದು, ನಿರ್ಗತಿಕರಿಗೆ ಮತ್ತು ಹಸಿವೆಯಿಂದ ಕಂಗಾಲಾದವರಿಗೆ ದಾನಮಾಡಲಿಚ್ಛಿಸುವುದು, ಅಥವಾ ಮತ್ತಿತರ ರೀತಿಯಲ್ಲಿ ಮಾನವ ಜನಾಂಗದ ಸೇವೆಮಾಡುವುದು, ಅವನ ಹೃದಯದಲ್ಲುಂಟಾಗುವ ಅನುಕಂಪದ ಕಾರಣದಿಂದಾಗಿದೆ. ಕೆಲವೊಮ್ಮೆ ಮನುಷ್ಯನು ತನ್ನ ಕೈಗಳಿಂದ ದುರ್ಜನರನ್ನು ಶಿಕ್ಷಿಸುವುದು ತನ್ನ ಹೃದಯ

ದಲ್ಲುಂಟಾಗುವ ಪ್ರತೀಕಾರ ಭಾವದಿಂದಾಗಿದೆ. ಕೆಲವು ಸಂದರ್ಭಗಳಲ್ಲಿ ಅವನು ತನ್ನ ಶತ್ರುವಿನಿಂದ ಹಿಂಸೆಯನ್ನನು ಭವಿಸಿದರೂ ಸಹ ಪ್ರತೀಕಾರವನ್ನುಂಟುಮಾಡುವುದಿಲ್ಲ. ಆಗ ಹೃದಯದಲ್ಲುಂಟಾಗುವ ಗುಣವನ್ನು ಕ್ಷಮೆ ಅಥವಾ ಸಹನೆ ಎನ್ನುತ್ತಾರೆ. ಕೆಲವು ಸಂದರ್ಭಗಳಲ್ಲಿ ಮನುಷ್ಯನು ತನ್ನ ಕರಚರಣಗಳನ್ನೂ ಅಂತಃಕರಣವನ್ನೂ ಬುದ್ಧಿಶಕ್ತಿಯನ್ನೂ ಮನುಷ್ಯ ಸಮುದಾಯದ ಕ್ಷೇಮಾಭಿವೃದ್ಧಿಗಾಗಿ ವಿನಿಯೋಗಿಸುತ್ತಾನೆ. ಅವರ ಸುಖಾಭಿವೃದ್ಧಿಗಾಗಿ ತನ್ನ ಸಂಪತ್ತನ್ನು ಖರ್ಚುಮಾಡುತ್ತಾನೆ. ಆಗ ಅವನ ಹೃದಯದಲ್ಲಿ ಉದಾರತೆ ಎಂಬ ಗುಣವು ಪ್ರವರ್ತಿಸುತ್ತದೆ. ಮೇಲೆ ವಿವರಿಸಿದಂತೆ ಮಾನವನು ಈ ಅಂತಃ ಶಕ್ತಿಗಳನ್ನೆಲ್ಲಾ ಸಂದರ್ಭೋಚಿತವಾಗಿ ವಿನಿಯೋಗಿಸಿದರೆ ಮಾತ್ರ ಅವು 'ಖುಲ್ಖ್' ಅಥವಾ ನೈತಿಕ ಗುಣಗಳೆಂಬ ಹೆಸರಿಗೆ ಅರ್ಹವಾಗುತ್ತವೆ. ಮಹಾಮಹಿಮನಾದ ಅಲ್ಲಾಹು ನಮ್ಮ ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರ (ಸ.) ರನ್ನು ಸಂಬೋಧಿಸಿ ಈ ರೀತಿ ಹೇಳುತ್ತಾನೆ:

"ಇನ್ನಕ ಲಅಲಾ ಖುಲ್ಖಿನ್ ಅಜೀಮ್" (68:5)- ನೀನು ಅತ್ಯುತ್ತಮವಾದ ನೈತಿಕ ಗುಣವನ್ನು ಹೊಂದಿರುವಿ. ಅಂದರೆ, ಉದಾರತೆ, ಧೈರ್ಯ, ನೀತಿ, ಕೃಪೆ, ದಯೆ, ಪರೋಪಕಾರ, ಸತ್ಯ ಸಂಧತೆ, ಕ್ಷಮೆ ಮುಂತಾದ ಸಕಲ ಉತ್ಕೃಷ್ಟ ಮಾನವಗುಣಗಳು ನಿನ್ನಲ್ಲಿ ಸಮ್ಮಿಳಿತವಾಗಿವೆ.

ಸಂಕ್ಷಿಪ್ತವಾಗಿ, ಮನುಷ್ಯಹೃದಯದಲ್ಲಿರುವ ವಿನಯ, ಲಜ್ಜೆ, ವಿಶ್ವಸ್ತತೆ, ಕೃಪೆ, ಅಭಿಮಾನ, ಸ್ಥೈರ್ಯ, ನಿರ್ಮಲತೆ, ಭಕ್ತಿ, ಸೌಮ್ಯತೆ, ಆರ್ದ್ರತೆ, ಅನುಕಂಪ, ಧೀರತೆ, ಉದಾರತೆ, ಕ್ಷಮೆ, ಸಹನೆ, ಪರೋಪಕಾರ, ಸತ್ಯಸಂಧತೆ. ನಿಷ್ಕಪಟತೆ, ಎಂಬೀ ಸಹಜಗುಣಗಳು ಸಂದರ್ಭೋಚಿತವಾಗಿಯೂ ವಿವೇಕಪೂರ್ಣವಾಗಿಯೂ ಪ್ರಕಟಗೊಳ್ಳುವಾಗ ಸದ್ಗುಣಗಳಾಗಿ ಪರಿಣಮಿಸುತ್ತವೆ. ಈ ಸಕಲ ಸದ್ಗುಣಗಳು ವಾಸ್ತವಿಕವಾಗಿ ಮನುಷ್ಯನ ಸಹಜ ಸ್ವಭಾವಗಳಾಗಿವೆ. ಸಂದರ್ಭವನ್ನರಿತು ಅವುಗಳನ್ನು ಬುದ್ಧಿಪೂರ್ವಕ ವಿನಿಯೋಗಿಸಿದಾಗ ಅವು ನೈತಿಕ ಗುಣಗಳೆಂಬ ಹೆಸರಿನಿಂದ ಕರೆಯಲ್ಪಡಲು ಅರ್ಹವಾಗುತ್ತವೆ. ಉತ್ಕರ್ಷೇಚ್ಛೆ ಮಾನವನ ಸಹಜಗುಣಗಳಲ್ಲಿ ಒಂದು. ಆದ್ದರಿಂದ ಅವನು ಸತ್ಯಧರ್ಮಾವಲಂಬಿಯಾಗಿ ಸತ್ಯಸಂಧರ ಸಹವಾಸದಲ್ಲಿದ್ದುಕೊಂಡು ಸದ್ಬೋಧನೆಗಳ ಮುಖಾಂತರ ಸ್ವಾಭಾವಿಕ ಗುಣಗಳನ್ನು ನೈತಿಕಗುಣಗಳನ್ನಾಗಿ ರೂಪಾಂತರಿಸಲು ಪ್ರಾಪ್ತನಾಗುತ್ತಾನೆ. ಈ ಸೌಭಾಗ್ಯವು ಮನುಷ್ಯ ವರ್ಗದ ಹೊರತು ಬೇರಾವ ಜೀವರಾಶಿಗೂ ದಯಪಾಲಿಸಲ್ಪಟ್ಟಿಲ್ಲ.

## ಶಾರೀರಿಕ ಸ್ಥಿತಿ

ಇನ್ನು ಖುರ್‌ಆನ್ ನಿರ್ದೇಶಿಸುವ ಮೂರು ವಿಧ ಪರಿಷ್ಕರಣ ವಿಧಾನಗಳ ಪೈಕಿ, ಕೀಳ್ಮಟ್ಟದಲ್ಲಿರುವ ಶಾರೀರಿಕಾವಸ್ಥೆಗೆ ಸಂಬಂಧಿಸಿದ್ಧ ಪ್ರಥಮ ವಿಧಾನದ ಕುರಿತು ವಿವರಿಸುವೆನು. ಈ ಘಟ್ಟದಲ್ಲಿ ಖುರ್‌ಆನ್ 'ಅದಬ್' ಅಥವಾ 'ಸಭ್ಯತೆ'ಯ ವ್ಯವಸ್ಥೆಯನ್ನು ಕಲಿಸುತ್ತದೆ. ಅದೇನೆಂದರೆ ಭಕ್ಷಣಕ್ರಮ ಮುಂತಾದ ದಿನಚರ್ಯೆಗಳನ್ನೂ ವಿವಾಹ ಮೊದಲಾದ ಸಾಮೂಹಿಕ ಕಾರ್ಯಗಳನ್ನೂ ನಿಯಂತ್ರಿಸುವ ಹಾಗೂ ಅನಾಗರಿಕ ಜೀವಿತದಿಂದ ವಿಮುಕ್ತಗೊಳಿಸಿ ಪರಿಷ್ಕೃತವಾದ ನಾಗರಿಕ ಜೀವನದೆಡೆಗೆ ಕೊಂಡೊಯ್ಯುವ ನಿಯಮ ನಿರ್ದೇಶಗಳನ್ನು ಅದು ದಯಪಾಲಿಸುತ್ತದೆ. ಅಲ್ಲಾಹು ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: "ಹುರ್ರಿಮತ್ ಅಲೈಕುಮ್ ಉಮ್ಮಹಾತುಕುಮ್ ವ ಬನಾತುಕುಮ್ ವ ಅಖವಾತುಕುಮ್ ವ ಅಮ್ಮಾತುಕುಮ್ ವ ಖಾಲಾತುಕುಮ್ ವ ಬನಾತುಲ್ ಅಖಿ ವ ಬನಾತುಲ್ ಉಖ್ತಿ ವ ಉಮ್ಮಹಾತುಕುಮುಲ್ಲಾತೀ ಅರ್‌ಜಅ್‌ನಕುಮ್ ವ ಅಖ್‌ವಾತುಕುಮ್ ಮ್ಮಿನರ್ರಜಾಅತಿ ವ ಉಮ್ಮಹಾತು ನಿಸಾಇಕುಮ್ ವ ರಬಾಇಬುಕುಮುಲ್ಲಾತೀ ಫೀ ಹುಜೂರಿಕುಮ್ ಮ್ಮಿನ್‌ನ್ನಿಸಾಇಕುಮುಲ್ಲಾತೀ ದಖಲ್ತುಮ್‌ಬಿಹಿನ್ನ ಫಇನ್‌ಲ್ಲಂ ತಕೂನೂ ದಖಲ್ತುಮ್ ಬಿಹಿನ್ನ ಫಲಾ ಜುನಾಹ ಅಲೈಕುಮ್ ವ ಹಲಾಇಲು ಅಬ್ನಾಇಕುಮುಲ್ಲದೀನ ಮಿನ್ ಅಸ್ಲಾಬಿಕುಮ್ ವ ಅನ್‌ತಜ್ಮಊ ಬೈನಲ್ ಉಖ್‌ತೈನಿ ಇಲ್ಲಾ ಮಾಖದ್ ಸಲಫ". (4:24).

—ನಿಮಗೆ ನಿಮ್ಮ ತಾಯಂದಿರೊಡನೆ (ವಿವಾಹ) ನಿಷೇಧಿಸಲ್ಪಟ್ಟಿರುತ್ತದೆ; ಹಾಗೆಯೇ ನಿಮ್ಮ ಪುತ್ರಿಯರು, ನಿಮ್ಮ ಸಹೋದರಿಯರು, ನಿಮ್ಮ ಪಿತೃಸಹೋದರಿಯರು, ನಿಮ್ಮ ಮಾತೃಸಹೋದರಿಯರು, ನಿಮ್ಮ ಸಹೋದರ ಪುತ್ರಿಯರು, ನಿಮ್ಮ ಸಹೋದರಿ ಪುತ್ರಿಯರು, ನಿಮಗೆ ಮೊಲೆಯುಣ್ಣಿಸಿದ ಸಾಕುತಾಯಂದಿರು, ಆಕೆಯ ಪುತ್ರಿಯರು, ನಿಮ್ಮ ಅತ್ತೆಯಂದಿರು (ಹೆಂಡತಿಯ ತಾಯಂದಿರು), ನಿಮ್ಮ ಪತ್ನಿಯ ಮುಂಚಿನ ಪತಿಯ ಪುತ್ರಿಯಂದಿರು (ಆದರೆ ಮದುವೆಯಾದ ನಂತರ ದೈಹಿಕಬಂಧವನ್ನು ಸ್ಥಾಪಿಸದೆ ಅವಳೊಂದಿಗೆ ವಿವಾಹವಿಚ್ಛೇದನ ಮಾಡಿದ್ದರೆ ಪಾಪವಿಲ್ಲ), ನಿಮ್ಮ ಪುತ್ರರ ಪತ್ನಿಯರು ಮತ್ತು ಒಂದೇ ಸಂದರ್ಭದಲ್ಲಿ ಇಬ್ಬರು ಸಹೋದರಿಯರು (ಇವರೊಡನೆಲ್ಲಾ ವಿವಾಹ) ನಿಮಗೆ ನಿಷೇಧಿಸಲ್ಪಟ್ಟಿದೆ. ಹಿಂದೆ ಕಳೆದುದು ಕಳೆಯಿತು.

"ಲಾ ಯಹಿಲ್ಲು ಲಕುಮ್ ಅನ್ ತರಿಸುನ್ನಿಸಾಅ ಕರ್‌ಹನ್" (4:20)— ಸ್ತ್ರೀಯರ ಇಚ್ಛೆಗೆದುರಾಗಿ ಬಲಾತ್ಕಾರದಿಂದ ಅವರ ಸೊತ್ತಿನ ವಾರಸುತನ ಹೊಂದುವುದು ಯುಕ್ತವಲ್ಲ.

"ವಲಾ ತನ್‌ಕಿಹೂ ಮಾ ನಕಹ ಆಬಾವುಕುಂ ಮ್ಮಿನನ್ನಿಸಾಇ ಇಲ್ಲಾ ಮಾ ಕದ್ ಸಲಫ" (4:23) — ನಿಮ್ಮ ಪಿತರು ವಿವಾಹವಾದ ಸ್ತ್ರೀಯರನ್ನು ನೀವು ವಿವಾಹವಾಗಬಾರದು; ಹಿಂದೆ ಆದುದು ಆಗಿಹೋಯಿತು.

"ಉಹಿಲ್ಲ ಲಕುಮುತ್ತಯ್ಯಿಬಾತು...ವಲ್‌ಮುಹ್‌ಸನಾತು ಮಿನಲ್ ಮೂಮಿನಾತಿ ವಲ್‌ಮುಹ್‌ಸಿನಾತು ಮಿನಲ್ಲದೀನ ಊತುಲ್ ಕಿತಾಬ ಮಿನ್‌ಕಬ್ಲಿಕುಂ ಇದಾ ಆತೈತುಮೂಹುನ್ನ ಉಜೂರಹುನ್ನ ಮುಹ್‌ಸಿನೀನ ಗೈರ ಮುಸಾಫಿಹೀನವಲಾ ಮುತ್ತಖಿದೀ ಅಖ್‌ದಾನಿನ್"(5:6)-ಉತ್ತಮ ಹಾಗೂ ಶುದ್ಧವಾದ ವೆಲ್ಲವೂ ನಿಮಗೆ ಅನುಮತಿಸಲ್ಪಟ್ಟಿದೆ. ......ವಿಶ್ವಾಸಿನಿಯರಾದ ಚಾರಿತ್ರವತಿಯರನ್ನೂ ನಿಮಗೆ ಮೊದಲು ಗ್ರಂಥ ನೀಡಲ್ಪಟ್ಟವರಪೈಕಿಯ ಸುಶೀಲವತಿಯರನ್ನೂ ವಿವಾಹಮಾಡಲು ನಿಮಗೆ ಅನುಮತಿಯಿದೆ. ನೀವು ಅವರಿಗೆ ವಿವಾಹ ಮೂಲ್ಯ (ಮಹರ್) ಕೊಟ್ಟು ಅವರನ್ನು ವಿವಾಹವಾಗುವುದಲ್ಲದೆ, ವ್ಯಭಿಚಾರ ಮಾಡುವುದನ್ನಾಗಲೀ, ಉಪಪತ್ನಿಯಂತೆ ಇಟ್ಟುಕೊಳ್ಳುವುದನ್ನಾಗಲೀ ನಿಷೇಧಿಸಲಾಗಿದೆ.

ಸಂತಾನವುಂಟಾಗದ ಪುರುಷನ ಪತ್ನಿ ಸಂತಾನ ಲಾಭಾರ್ಥ ಪರಪುರುಷನನ್ನು ಹೊಂದುವ ಸಂಪ್ರದಾಯ ಕೆಲವು ಅಜ್ಞರಾದ ಅರಬಿಗಳೆಡೆಯಲ್ಲಿ ರೂಢಿಯಲ್ಲಿತ್ತು. 'ಮುಸಾಫಿಹತ್' ಎಂದು ಕರೆಯಲ್ಪಡುವ ಈ ದುಷ್ಟ ಸಂಪ್ರದಾಯವನ್ನು ಮೇಲಿನ ವಾಕ್ಯವು ನಿಷೇಧಿಸಿದೆ.

ಖುರ್‌ಆನಿನಲ್ಲಿ ಇನ್ನೂ ಹೇಳಲಾಗಿದೆ: "ವಲಾ ತಕ್ತುಲೂ ಅನ್‌ಫುಸಕುಂ" (4:30) — ನೀವು ಆತ್ಮಹತ್ಯೆ ಮಾಡಬೇಡಿರಿ.

"ವಲಾ ತಕ್ತುಲೂ ಔಲಾದಕುಂ" (6:152) — ನಿಮ್ಮ ಸಂತಾನಗಳನ್ನು ನೀವು ಕೊಲ್ಲಬೇಡಿರಿ.

"ಲಾ ತದ್‌ಖುಲೂ ಬುಯೂತನ್ ಗೈರ ಬುಯಾತಿಕುಂ ಹತ್ತಾ ತಸ್ತಅ್‌ನಿಸೂ ವ ತುಸಲ್ಲಿಮೂ ಅಲಾ ಅಹ್ಲಿಹಾ......ಫ ಇನ್‌ಲ್ಲಂ ತಜಿದೂ ಫೀಹಾ ಅಹದನ್ ಫಲಾ ತದ್‌ಖುಲೂಹಾ ಹತ್ತಾ ಯುಅ್‌ದನ ಲಕುಂ ವ ಇನ್‌ಕೀಲ ಲಕುಮುರ್‌ಜಿಊ ಫರ್‌ಜಿಊ ಹುವ ಅಜ್‌ಕಾ ಲಕುಂ" (24:28, 29) — ಅಪರಿಷ್ಕೃತರಂತೆ ಅನ್ಯರ ಗೃಹಗಳಲ್ಲಿ ಅನುಮತಿಯಿಲ್ಲದೆ ಪ್ರವೇಶಿಸಬಾರದು. ಅನ್ಯ ಗೃಹಗಳನ್ನು ಪ್ರವೇಶಿಸುವಾಗ ಸಮ್ಮತಿ ಕೇಳಬೇಕಾದುದು ಮತ್ತು 'ನಿಮ್ಮ ಮೇಲೆ ಶಾಂತಿಯಿರಲಿ' ಎಂದು ಅಭಿವಂದಿಸುವುದು ಅಗತ್ಯ... ಮನೆಯಲ್ಲಿ ಯಾರನ್ನೂ ಕಾಣದಿದ್ದರೆ ಗೃಹಸ್ಥನು ಬಂದು ನಿಮಗೆ ಅನುಮತಿ ನೀಡುವ ತನಕ ಒಳಗೆ ಪ್ರವೇಶಿಸಬೇಡಿರಿ; ಮನೆಯವನು ನಿಮ್ಮೊಡನೆ ಹಿಂತಿರುಗಿ ಹೋಗಲು ಅಗತ್ಯಪಡಿಸುವವನಾದರೆ ಹಿಂತಿರುಗಿ ಹೋಗಿರಿ; ಅದು ನಿಮಗೆ ಅತ್ಯಂತ ಉಚಿತ.

"ವಅ್‌ತುಲ್ ಬುಯೂತ ಮಿನ್ ಅಬ್ವಾಬಿಹಾ" (2:190) — ಮನೆಗಳೊಳಗೆ ಅವುಗಳ ಬಾಗಿಲುಗಳ ಮೂಲಕ ಪ್ರವೇಶಿಸಿರಿ — ಗೋಡೆಗಳನ್ನು ದುಮುಕಿ ಪ್ರವೇಶಿಸಬೇಡಿರಿ.

"ವ ಇದಾ ಹುಯ್ಯಿಯ್ತುಂ ಬಿತಹಿಯ್ಯತಿನ್ ಫಹಯ್ಯೂ ಬಿ ಅಹ್ಸನ ಮಿನ್‌ಹಾ ಔ ರುದ್ದೂಹಾ" (4:87) — ನಿಮ್ಮೊಡನೆ ಯಾರಾದರೂ ಸಲಾಂ ಹೇಳಿದರೆ ಅದಕ್ಕಿಂತಲೂ ಉತ್ತಮವಾದ ವಚನದಿಂದ ನೀವು ಸಹ ಸಲಾಂ ಹೇಳಿರಿ; ಅಲ್ಲವಾದರೆ ಅದೇ ಮಟ್ಟದ ವಚನದಿಂದಾದರೂ ಅಭಿವಾದನ ಮಾಡಿರಿ.

"ಇನ್ನಮಲ್ ಖಮ್ರು ವ ಮೈಸಿರು ವಲ್ ಅನ್ಸಾಬು ವಲ್‌ಅಜ್‌ಲಾಮು ರಿಜ್‌ಸುನ್ ಮ್ಮಿನ್ ಅಮಲಿ ಶೈತಾನಿ ಫಜ್‌ತನಿಬೂಹು ಲಅಲ್ಲಕುಂ ತುಫ್ಲಿಹೂನ್" (5:91) – ಮದ್ಯಪಾನ, ಜೂಜಾಟ, ಮೂರ್ತಿಪೂಜೆ, ಶಕುನನೋಡುವುದು ಮುಂತಾದವೆಲ್ಲಾ ಅಶುದ್ಧವೂ ಪೈಶಾಚಿಕ ಕರ್ಮವೂ ಆಗಿದೆ. ನೀವು ವಿಜಯಿಗಳಾಗಬೇಕಾದರೆ ಅವುಗಳನ್ನು ವರ್ಜಿಸಿರಿ.

"ಹುರ್ರಿಮತ್ ಅಲೈಕುಮುಲ್ ಮೈತತು ವದ್ದಮು ವ ಲಹ್ಮುಲ್ ಖಿಂಜೀರಿ ವಮಾ ಉಹಿಲ್ಲ ಲಿಗೈರಿಲ್ಲಾಹಿ ಬಿಹೀ ವಲ್‌ಮುನ್‌ಖನಿಕತು ವಲ್‌ಮೌಕೂದತು ವಲ್ ಮುತರದ್ದಿಯತು ವನ್ನತೀಹತು ವಮಾ ಅಕಲಸ್ಸಬುಉ... ವಮಾ ಜುಬಿಹ ಅಲನ್ನುಸುಬಿ" (5:4)—ತನ್ನಷ್ಟಕ್ಕೆ ಸತ್ತ ಪ್ರಾಣಿ, ರಕ್ತ, ಹಂದಿಮಾಂಸ, ಅಲ್ಲಾಹುವಿನ ಹೊರತು ಬೇರೆಯವರ ಹೆಸರಿನಲ್ಲಿ ಅರ್ಪಿಸಲ್ಪಟ್ಟದ್ದು, ಹಿಸುಕಿ ಕೊಲ್ಲಲ್ಪಟ್ಟದ್ದು, ಹೊಡೆತದಿಂದ, ಆಘಾತದಿಂದ ಅಥವಾ ಕೊಂಬಿನ ಪೆಟ್ಟಿನಿಂದ ಸತ್ತದ್ದು, ವನ್ಯಪ್ರಾಣಿಗಳು ತಿಂದು ಬಾಕಿಯಾದದ್ದು, ವಿಗ್ರಹಗಳಿಗೆ ಬಲಿಯರ್ಪಿಸಿದ್ದು ನಿಮಗೆ ನಿಷೇಧಿಸಲ್ಪಟ್ಟಿವೆ. ಏಕೆಂದರೆ ಇವೆಲ್ಲಾ ಹೆಣಕ್ಕೆ ಹೋಲುತ್ತವೆ. (ಮುಂದುವರಿಯುವುದು)

ಅಹ್ಮದಿಯಾ ವಾರ್ತೆಗಳು (26ನೆ ಪುಟದಿಂದ)

## ಲಂಡನಿನಲ್ಲಿ ಮತಾಚಾರ್ಯರ ದಿನಾಚರಣೆ

ಲಂಡನ್ ಮಸೀದಿಯ ಸಭಾಂಗಣದಲ್ಲಿ ಕಳೆದ ಒಕ್ಟೋಬರ್ 22ರಂದು ಮತಾಚಾರ್ಯರ ದಿನವನ್ನು ಆಚರಿಸಲಾಯಿತು. ಗಿಲ್ಡ್‌ಫೋರ್ಡಿನ ಬಿಶಪ್ ರೈಟ್ ರೆವರಂಡ್ ಡೇವಿಡ್ ಬ್ರೌನ್ ಯೇಸುಕ್ರಿಸ್ತರ ಕುರಿತು, ಪ್ರೊಫೆಸರ್ ಹರ್ಮಂದರ್ ಸಿಂಘ್ ಬಾಬಾ ನಾನಕರ ಕುರಿತು, ಸ್ಕಾಟ್‌ಲ್ಯಾಂಡಿನ ಅಹ್ಮದಿಯಾ ಮಿಶನರಿ ಬಶೀರ್ ಅಹ್ಮದ್ ಓರ್ಚರ್ಡ್ ಮುಹಮ್ಮದ್ ಪೈಗಂಬರರ ಕುರಿತು ಮಾತನಾಡಿದರು. ಅಂದು ಯಹೂದ್ಯರ ಹಬ್ಬದ ದಿನವಾದುದರಿಂದ ಅವರ ಪ್ರತಿನಿಧಿಗೆ ಭಾಗವಹಿಸಲಾಗಲಿಲ್ಲ. ಆದುದರಿಂದ ಸರ್ ಮುಹಮ್ಮದ್ ಝಫರುಲ್ಲಾ ಖಾನರು (ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ) ಮೂಸಾ ಪ್ರವಾದಿಯ ಅಧ್ಯಾಪನೆಗಳ ಸಂಬಂಧಿಸಿ ಬೆಳಕು ಚೆಲ್ಲಿದರು. ವಾಗ್ದತ್ತ ಮಸೀಹರ ಆಗಮನ ಮತ್ತು ಅವರ ಉದ್ದೇಶದ ಕುರಿತು ಸಹ ಅವರು ಮಾತನಾಡಿದರು.

ನಿಧನ ವಾರ್ತೆ

## ಮೌಲಾನ ಮುಹಮ್ಮದ್ ಇಬ್ರಾಹಿಂ ಸಾಹೇಬ್

ಅಗ್ರಗಣ್ಯ ಅಹ್ಮದಿಯಾ ಪಂಡಿತರಲ್ಲಿ ಓರ್ವರಾಗಿದ್ದ ಮೌಲಾನಾ ಮುಹಮ್ಮದ್ ಇಬ್ರಾಹಿಂ ಸಾಹೇಬರು ತನ್ನ 72ನೆ ವಯಸ್ಸಿನಲ್ಲಿ ಕಳೆದ ಸಪ್ಟೆಂಬರ್ 27ರಂದು ಖಾದಿಯಾನಿನಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್". ಅವರು ವಾಗ್ಮಿಯೂ ಪ್ರಸಿದ್ಧ ಬರಹಗಾರರೂ ಆಗಿದ್ದರು. ಅವರು ಅಹ್ಮದಿಯಾ ವಿದ್ಯಾ ಸಂಸ್ಥೆಗಳಲ್ಲಿ ಹೆಡ್‌ಮಾಸ್ಟರರಾಗಿಯೂ ಇತರ ಇಲಾಖೆಗಳಲ್ಲಿ ವಿವಿಧ ಹುದ್ದೆಗಳನ್ನು ವಹಿಸಿಯೂ ಸೇವೆ ಸಲ್ಲಿಸಿದ್ದರು.

ಅಲ್ಲಾಹು ಅವರ ಆತ್ಮಕ್ಕೆ ಚಿರಶಾಂತಿಯನ್ನೂ ಬಂಧುಮಿತ್ರಾದಿಗಳಿಗೆ ಸಹನೆಯನ್ನೂ ಕರುಣಿಸಲಿಯೆಂದು ಪ್ರಾರ್ಥಿಸುತ್ತೇವೆ.


## Books on Islam and Contemporary Religions

1. **Ahmadiyyat or The True Islam** — 8-00
   By Hazrat Mirza Bashiruddin Mahmud Ahmad
2. **The Teachings of Islam** — 6-00
   By Hazrat Mirza Ghulam Ahmad
3. **Characteristics of the Quaranic Teachings** — 1-00
   By Hazrat Mirza Bashiruddin Mahmud Ahmad
4. **Where did Jesus Die ?** — 2-25
   By J. D. Shams, Ex-Imam, London Mosque
5. **The Tomb of Jesus** — 0-75
   By Sufi M. R. Bengali
6. **Jesus in India** — 2-25
   By Hazrat Mirza Ghulam Ahmad
7. **The Christian Doctrine of Atonement** — 1-50
   By Dr. Mufti Muhammad Sadiq, D.D., LL.D.. S.S.P. (London)
8. **An Interpretation of Islam** — 1-50
   Bp Prof. Dr. Laura Veccia Vaglieri

Write to

**NAZIR DAWAT - O - TABLIGH**


**P. O. QADIAN - 143516. (Punjab)**

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, October-December 1978/Ikha-Fatah 1357


# ENGLISH TRANSLATION OF THE HOLY QURAN

WITH

## ARABIC TEXT and EXTENSIVE INDEX




**Price: Rs. 15-00** **Postal Charges Extra**

Write to:

**NAZIR DAWAT - O - TABLIGH**

QADIAN (Punjab) - 143516.


Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya Mangalore at 23/1008 Ansari Road, Bunder, Mangalore-575001.